# ಕನ್ನಡ - II

# KANNADA - II

ತರಗತಿ
STANDARD **VIII**

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2016

KT-267-1/Kannada-8 BT

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015, Reprint : 2016
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi-30
© Department of Education, Government of Kerala

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ-ವಿನಯದಿಂದ ಕೂಡಿದ ಮಾತು ಎಲ್ಲರನ್ನೂ ಸೆಳೆಯುತ್ತದೆ. ನಮ್ಮ ಮಾತುಕೃತಿಗಳು ನಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನಮ್ಮ ಕನ್ನಡ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕು. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ಆತ್ಮಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಮ್ಮ ಭಾವನೆಗಳು ಮತ್ತು ಅನುಭವಗಳನ್ನು ಪ್ರಕಟಿಸಲು ಈ ಪಠ್ಯಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಪಠ್ಯಪುಸ್ತಕದಲ್ಲಿರುವ ಉತ್ತಮ ಮೌಲ್ಯಗಳು ಮತ್ತು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಿಮಗೆಲ್ಲರಿಗೂ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಪಿ.ಎ.ಫಾತಿಮ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

## KANNADA - II

## STANDARD 8

Participants : Gurumurthi M., G.H.S.S. Mangalpady
Rajarama Rao T., S.V.V..H.S.S. Miyapadav
Sathishkumar P.S., S.N.H.S. Perla
Vani P.S., M.S.C.H.S.S. Neerchal

Experts : Dr. P. Srikrishna Bhat,
Rtd. H.O.D. Kannada, Govt. College, Kasaragod

P. Shivashankara,
Asst. Professor, GPM Govt. College, Manjeshwara
Shridhara N., Asst. Professor, Govt. College, Kasaragod

Artists : Venkat Bhat Edneeru
Sathyanarayana, G.H.S.S. Mangalpady
'Bala'madhurkana

Academic Co-Ordinator
**Dr. FAIZAL MAVULLADATHIL**, Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | |
|---|---|---|
| ಘಟಕ -1. | ಸಂಸ್ಕೃತಿ - ದೇಶಭಕ್ತಿ | 7 - 28 |
| | ● ವಿಶ್ವಶಾಂತಿಗಾಗಿ | |
| | ● ಸುಖಿಯಾರು | |
| | ● ಕೇರಳದ ಪುತ್ತರಿ | |
| | ● ಸಾಹಸಮೂರ್ತಿ ಸುಭಾಸ ಬೋಸರು | |
| ಘಟಕ -2 | ವಿಹಾರ - ಸಾಹಸ | 29 - 46 |
| | ● ಜೋಗಿನ್ ಜಲಪಾತ | |
| | ● ಕಿಮ್‌ನ ಸಾಹಸಗಳು | |
| | ● ಸಾಹುಕಾರ ಕುಞ್ಞುಮೋನು | |
| | ● ನೇಪಾಳದ ನೋಟ | |
| ಘಟಕ 3. | ಸಹಜೀವನ | 47 - 66 |
| | ● ಸಮತಾಭಾವ ಕಂಪಿಡಲಿ | |
| | ● ನನ್ನ ಪಯಣ | |
| | ● ಹಿರಿಯ ದಾನಿ | |
| | ● ನಿರ್ಧಾರ | |

**ಘಟಕ – 1**

# ಸಂಸ್ಕೃತಿ-ದೇಶಭಕ್ತಿ

## ಕಲಿಕಾ ಸಾಧನೆಗಳು

- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು, ಸಂವಾದಗಳು ಇತ್ಯಾದಿಗಳಲ್ಲಿ ಭಾಗವಹಿಸಿ ಆಶಯಗಳನ್ನು ನಿರರ್ಗಳವಾಗಿ ಮಂಡಿಸುವುದು.
- ಕಥೆ, ಕವನ ಮೊದಲಾದ ಸಾಹಿತ್ಯಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ವಿಭಿನ್ನ ಕಾಲಘಟ್ಟಗಳಲ್ಲಿ ರಚನೆಯಾದ ಕೃತಿಗಳನ್ನು ಅವಲೋಕಿಸಿ ಆ ಕಾಲಘಟ್ಟದ ಸಂಸ್ಕೃತಿ, ಭಾಷೆ, ಆಚಾರ ವಿಚಾರಗಳನ್ನು ವ್ಯಾಖ್ಯಾನಿಸುವುದು.
- ನಿಯತಕಾಲಿಕಗಳನ್ನು ಮತ್ತು ಇತರ ಪುಸ್ತಕಗಳನ್ನು ಓದಿ ಅನುಭವಗಳನ್ನು ಹಂಚಿಕೊಳ್ಳುವುದು.
- ಪತ್ರಿಕೆಗಳ ಮತ್ತು ದೃಶ್ಯಮಾಧ್ಯಮಗಳ ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸುವುದು.

# ಸರದಾರ

"ಬಾರ್ಡೋಲಿ ತಾಲೂಕಿನಲ್ಲಿ ಅತೀವ ಮಳೆಯಿಂದಾಗಿ ಕೃಷಿ ನಾಶವಾಯಿತು. ರೈತರು ಕಂಗೆಟ್ಟರು. 'ಗಾಯದ ಮೇಲೆ ಬರೆ' ಎಂಬಂತೆ ಬ್ರಿಟಿಷ್ ಸರಕಾರ ರೈತರ ಮೇಲೆ ಅಧಿಕ ತೆರಿಗೆಯ ಭಾರ ಹೊರಿಸುವುದೇ? ಎಂತಹ ಅನ್ಯಾಯ! ಅದರ ವಿರುದ್ಧ ನಡೆದ ಸತ್ಯಾಗ್ರಹದ ಹೋರಾಟ ನೂರಕ್ಕೆನೂರು ಅರ್ಥಪೂರ್ಣ. ಅದರ ನೇತೃತ್ವ ಚೆನ್ನಾಗಿ ಕೆಲಸ ಮಾಡಿದೆ. ಆದ್ದರಿಂದಲೇ ರೈತರಿಗೆ ಗೆಲುವಾಗಿದೆ. ಅಂತಹ ವಿಶಿಷ್ಟ ಸಾಧನೆಗೆ ಕಾರಣರಾದ ನೇತಾರ ಕೇವಲ ವಲ್ಲಭಬಾಯಿ ಪಟೇಲರಲ್ಲ; *ಸರ್ದಾರ್ ವಲ್ಲಭಬಾಯಿ ಪಟೇಲ್."*

*-ಮಹಾತ್ಮಾ ಗಾಂಧಿ*

*ಮೇಲೆ ಕೊಡಲಾದ ಮಹಾತ್ಮ ಗಾಂಧಿಯವರ ಮಾತುಗಳ ಕುರಿತಾದ ನಿಮ್ಮ ಆನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.*

# ವಿಶ್ವಶಾಂತಿಗಾಗಿ



ನೋಡೋಣ ವಿಶ್ವದ ವಿಶಾಲತೆಯ ಕಡೆಗೆ ।
ಸಾಗೋಣ ಸೌಹಾರ್ದ ಸೃಷ್ಟಿಯೆಡೆಗೆ ॥
ಒಂದೆ ಗಾಳಿಯೊಳುಸಿರು ಒಂದೆ ನೀರ್ಕುಡಿಯುವೆವು
ನಾವು ನೀವೆಂದೆಂಬ ಭೇದ ಸಲ್ಲ ।
ಒಂದೆ ಮನೆಯಲಿ ಹುಟ್ಟಿ ಒಂದೇ ಬಾಳನು ಬದುಕಿ
ಒಂದೆಡೆಗೆ ಸಾರುವೆವು ಕೇಳಿ ಸೊಲ್ಲ ॥
ನಮ್ಮದೊಂದೇ ನೆಲವು ನಮ್ಮದೊಂದೇ ಕುಲವು
ನಮ್ಮದೊಂದೇ ಜಾತಿ-ಮಾನವರದೆಲ್ಲ।
ಆವ ಪಾತ್ರೆಯೊಳಿಟ್ಟರೇನು ಜಲರಾಶಿಯನು
ನೀರು ನೀರೇ ಹೊರತು ಬೇರೆಯಲ್ಲ ॥
ವಿಶ್ವ ಪ್ರಜೆಗಳು ನಾವು, ವಿಶ್ವಾತ್ಮ ಪುತ್ರರೈ
ವಿಶ್ವಶಾಂತಿಯ ಬಯಸಿ ಬದುಕಬೇಕು ।
ವಿಶ್ವ ಮಾನವಕೋಟಿ ಒಂದೆಂಬ ಬಗೆಯರಿತು
ವಿಶ್ವಾಸದಿಂ ಬಾಳೆ ಕಲಿಯಬೇಕು ॥
ಪ್ರೇಮ ಸೌಹಾರ್ದಗಳೆ ನಮ್ಮ ರಾಷ್ಟ್ರಧ್ವಜವು
ಸ್ನೇಹದುಸಿರೇ ನಮ್ಮ ರಾಷ್ಟ್ರಭಾಷೆ ।
ಪ್ರೀತಿ ನೀತಿಗಳೆರಡು ನಮ್ಮನಾಳುವ ತತ್ವ
ಜಾತೀಯತೆಯು ಬೇಡ ಬೇಡ ಜಿಜ್ಞಾಸೆ ॥
ಜಾತಿಯೇನಾದರೇನ್ ತತ್ವವೆಲ್ಲವು ಒಂದೆ
ಜಾತಿಯೇನ್ ನಮ್ಮೊಡನೆ ಬಂದ ಗಂಟೆ?
ಒಂದೆ ವೃಕ್ಷದ ಕೊಂಬೆ ಹಲವು ರೆಂಬೆಗಳಾಗಿ
ಹರಡಿದರು ಮೂಲದೊಳು ಭೇದವುಂಟೆ? ॥

KT-267-2/Kannada-8 BT

ಸಂಕುಚಿತ ಭಾವಗಳು ಮಸುಳಿ ಮಾನವ ಹೃದಯ
ವಿಶ್ವದ ವಿಶಾಲತೆಗೆ ತೆರೆದು ನಿಲಲಿ ।
ಸಂತೋಷ ಸಹಕಾರದಿಂದೆ ವಿಶ್ವದ ಜನತೆ
ಬಾಳಿ ಬೆಳಗುವ ಸುದಿನ ಬೇಗ ಬರಲಿ ॥

**ಡಾ. ರಮಾನಂದ ಬನಾರಿ**



## ಡಾ. ರಮಾನಂದ ಬನಾರಿ

ಡಾ. ರಮಾನಂದ ಬನಾರಿಯವರು ೧೯೪೦ರ ಜೂನ್ ೪ರಂದು ಕಾಸರಗೋಡು ತಾಲೂಕಿನ ಕೀರಿಕ್ಕಾಡು ಎಂಬಲ್ಲಿ ವಿಷ್ಣುಭಟ್ಟ ಮತ್ತು ಪರಮೇಶ್ವರಿ ಅಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ವೃತ್ತಿಯಲ್ಲಿ ವೈದ್ಯರಾಗಿರುವ ಇವರು ಪ್ರವೃತ್ತಿಯಲ್ಲಿ ಕವಿಗಳಾಗಿದ್ದಾರೆ. 'ಎಳೆಯರ ಗೆಳೆಯ' ಇವರ ಶಿಶುಗೀತೆಗಳ ಸಂಕಲನವಾಗಿದೆ. ತೊಟ್ಟಿಲು, ಕವಿತೆಗಳೇ ಬನ್ನಿ, ಜೀವವೃಕ್ಷ, ನೋಟದೊಳಗಿನ ನೋಟ ಇವು ಇವರ ಪ್ರಕಟಿತ ಕವನ ಸಂಕಲನಗಳಾಗಿವೆ. ಗುಟುಕುಗಳು ಮತ್ತು ಬಿಂದುಗಳು ಇವರ ಚುಟುಕ ಮತ್ತು ಹನಿಗವನ ಸಂಕಲನಗಳಾಗಿವೆ. ನಿಯತಕಾಲಿಕಗಳಲ್ಲೂ ಅವರ ಕವಿತೆಗಳು ಆಗಾಗ ಪ್ರಕಟವಾಗುತ್ತಾ ಇವೆ. ಯಕ್ಷಗಾನದಲ್ಲಿ ಅಪಾರ ಆಸಕ್ತಿಯಿರುವ ಬನಾರಿಯವರು ಉತ್ತಮ ಅರ್ಥಧಾರಿಗಳಾಗಿದ್ದಾರೆ. 'ವಿಶ್ವಶಾಂತಿಗಾಗಿ' ಎಂಬ ಪದ್ಯವನ್ನು ಬನಾರಿಯವರ 'ಪರಾಗಸ್ಪರ್ಶ' ಎಂಬ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

1. ವಿಶ್ವಪ್ರಜೆಗಳಾದ ನಾವು ಹೇಗೆ ಬದುಕಬೇಕೆಂದು ಕವಿಗಳು ತಿಳಿಸಿದ್ದಾರೆ?
2. ನಾವು ನೀವೆಂದೆಂಬ ಭೇದ ಯಾಕೆ ಸಲ್ಲದು?
3. ಎಂತಹ ಸುದಿನ ಬೇಗ ಬರಲೆಂದು ಕವಿ ಹಾರೈಸುತ್ತಾರೆ?

### ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಕವಿತೆಯ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಜಾತಿಯೇನಾದರೇನ್ ತತ್ವವೆಲ್ಲವು ಒಂದೆ
ಜಾತಿಯೇನ್ ನಮ್ಮೊಡನೆ ಬಂದ ಗಂಟೆ?
ಒಂದೆ ವೃಕ್ಷದ ಕೊಂಬೆ ಹಲವು ರೆಂಬೆಗಳಾಗಿ
ಹರಡಿದರು ಮೂಲದೊಳು ಭೇದವುಂಟೆ? ॥

## ಸಾಮ್ಯವ್ಯತ್ಯಾಸಗಳನ್ನು ಬರೆಯಿರಿ

'ವಿಶ್ವಶಾಂತಿ' ಕವನವನ್ನು ಕೆಳಗೆ ಕೊಡಲಾದ ಕವನದೊಂದಿಗೆ ಹೋಲಿಸಿ ಸಾಮ್ಯವ್ಯತ್ಯಾಸಗಳನ್ನು ಬರೆಯಿರಿ.

### ನಾವೆಲ್ಲರು ಒಂದೆ

ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ
ನಾವು ಮನುಜರು
ನರರ ನಡುವಿನಡ್ಡಗೋಡೆಗಳನು ಕುಟ್ಟಿ ಕೆಡಹುವೆವು
ನಾವು ವಿಲಯ ರುದ್ರರು!
ಹೊಸಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು
ನಾವು ನವವಿಧಾತರು
ತೆರೆ ಬಾಗಿಲ ಹೊರನೋಟದ ಹೊರೆ ಹಸುರಿನ ಹಂದರ
ನಮ್ಮ ಹೃದಯ ಮಂದಿರ
ಅಲ್ಲಿ ಎಲ್ಲ ಜನಕು ಇದೆ ಸ್ವಾಗತವು ನಿರಂತರ
ಚಿರ ಉದಾರ ಸುಂದರ!
ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಣ್ಣತಮ್ಮರು
ನಡೆಯ ನುಡಿಯ ನೂರು ಗೋಡೆ ಗೋಡೆ ನಿಮಿರಿ ನಿಂತರೂ
ನಾವೆಲ್ಲರು ಒಂದೆ ತಾಯ ಎದೆಯಾಸೆಯ ಕುಡಿಗಳು
ಒಂದೆ ಮಹಾ ಪ್ರೇಮಾಗ್ನಿಯ ಹೋಮಾಗ್ನಿಯ ಕಿಡಿಗಳು
ಜಾತಿ ಮತದ ಗುಹೆಗಳಿಂದ ಹೊರ ಬನ್ನಿರಿ ಬಯಲಿಗೆ
ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ;
ಸೇರಿಕೊಳ್ಳಿ ಕೂಡಿಕೊಳ್ಳಿ ಮುನ್ನುಗ್ಗುವ ಸಾಲಿಗೆ
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ
ಕೂಡಿಸಿರೆದೆ ಕೊರಲುಗಳನ್ನು ಹೊಸ ಬಾಳಿನ ಹಾಡಿಗೆ

**- ಎಂ. ಗೋಪಾಲಕೃಷ್ಣ ಅಡಿಗ**

## ಘೋಷಣವಾಕ್ಯ ಬರೆಯಿರಿ

ರಾಷ್ಟ್ರೀಯ ಭಾವೈಕ್ಯವನ್ನು ಸಾರುವ ಘೋಷಣವಾಕ್ಯಗಳನ್ನು ಬರೆಯಿರಿ.

**ಅರ್ಥವಿವರಣೆ ಬರೆಯಿರಿ**

ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ವಿವರಿಸಿ ಬರೆಯಿರಿ.

- ದೇಶ ಸೇವೆಯೇ ಈಶ ಸೇವೆ
- ಒಗ್ಗಟ್ಟಿನಲ್ಲಿ ಬಲವಿದೆ.

2

# ಸುಖಿ ಯಾರು

ಡೊಂಕುಡೊಂಕಾಗಿ ಅವಿಸ್ತಾರವಾದ ಒಂದು ರಸ್ತೆ. ರಸ್ತೆಯ ಎರಡು ಪಕ್ಕಗಳಲ್ಲಿಯೂ ದೊಡ್ಡ ಸಾಲುಮರಗಳು. ಸಾಲುಮರಗಳ ಆಚೆ, ಉಭಯ ಪಾರ್ಶ್ವಗಳಲ್ಲಿಯೂ ಕಣ್ಣಿಗೆ ಹಬ್ಬ ಮಾಡುವ ಹಚ್ಚನೆಯ ಪೈರು. ಅಲ್ಲಲ್ಲಿ ಹೊಲಗಳಲ್ಲಿ ಕಳೆಯನ್ನು ಕೀಳುತ್ತ ಕುಳಿತಿದ್ದ ಹಳ್ಳಿಯವರು. ರಸ್ತೆಯಿಂದ ಸುಮಾರು ಐನೂರು ಗಜಗಳ ದೂರದಲ್ಲಿ ಒಂದು ಪಾರ್ಶ್ವಕ್ಕೆ ಎರಡು ಚಿಕ್ಕ ಗುಡ್ಡಗಳು. ಆ ಗುಡ್ಡಗಳ ನಡುವೆ ಕಣಿವೆಯಲ್ಲಿ ಹರಿಯುತ್ತಿದ್ದ ಒಂದು ವಿಶಾಲವಾದ ಹೊಳೆ. ಹೊಳೆಯ ಪಾರ್ಶ್ವದಲ್ಲಿ ಹುಲ್ಲು ಮೇಯುತ್ತಿದ್ದ ದನಕರುಗಳು.

ಇಂತಹ ಸುಂದರವಾದ ಪ್ರದೇಶದಲ್ಲಿ ಬಹಳ ವೇಗವಾಗಿ ರಸ್ತೆಯನ್ನು ಹಿಡಿದು ಒಂದು ಮೋಟಾರ್ ಗಾಡಿಯು ಬರುತ್ತಿತ್ತು. ಮೋಟಾರು ಬಂಡಿಯಲ್ಲಿ ಕುಳಿತಿದ್ದವರು ಇಬ್ಬರು – ಮುಂಭಾಗದಲ್ಲಿ ಮೋಟಾರ್ ನಡೆಸುವವನು – ಹಿಂಭಾಗದಲ್ಲಿ ಮೋಟಾರ್ ಮಾಲಿಕರು – ಮಿ|| ರಾಮನ್‌ರವರು.


ತಮ್ಮ ಸುತ್ತುಮುತ್ತಲಿನ ಪ್ರಕೃತಿ ಸೌಂದರ್ಯವು ಹೇಗಿದ್ದರೇನು? ಅದನ್ನು ನೋಡಿ ಸಂತೋಷವನ್ನು ಅನುಭವಿಸಲು ಎಲ್ಲರಿಂದಲೂ ಸಾಧ್ಯವೇ? ಸಾಹೇಬರು ಯಾವುದೋ ಯೋಚನೆಯಲ್ಲಿ ಮಗ್ನರಾಗಿದ್ದರು. ಗಾಡಿಯು ರಭಸವಾಗಿ ಹೋಗುತ್ತಿರುವಾಗ್ಯೆ, ಗಾಡಿಯ ಭಾರವನ್ನು ತಡೆಯಲಾರದೇ ರಸ್ತೆಯ ಒಂದು ಭಾಗವು ಕುಸಿಯಲು ಮೋಟಾರಿನ ಮುಂದಿನ ಚಕ್ರವು ಆ ಹಳ್ಳದಲ್ಲಿ ಬಿದ್ದಿತು. ಎಲ್ಲಿಯೋ ಹಾರಾಡುತ್ತಿದ್ದ ಸಬ್ ಕಲೆಕ್ಟರ್ ಸಾಹೇಬರವರ ಮನಸ್ಸು ಕ್ಷಣಮಾತ್ರದಲ್ಲಿ ಪುನಃ ಸ್ವಸ್ಥಾನಕ್ಕೆ ಹಾರಿಬಂದು ಸದ್ಯದ ಪರಿಸ್ಥಿತಿಯನ್ನು ಗ್ರಹಿಸಿತು. ಕೂಡಲೇ ಸಾಹೇಬರು ಗಾಡಿಯಿಂದಾಚೆಗೆ 'ಸತ್ತೆನೋ ಬದುಕಿದೆನೋ' ಎಂದು ಒಂದೇ ಉಸಿರಿನಲ್ಲಿ ಹಾರಿ, ಡ್ರೈವರನ್ನು ಕುರಿತು ವಿಷಯವೇನೆಂಬುದಾಗಿ ಕೇಳಿದರು. "ಗಾಡಿಯ ಭಾರವನ್ನು ತಾಳದೇ ರಸ್ತೆಯು ಕುಸಿಯಿತು. ಮುಂದಿನ ಚಕ್ರವು ಹಳ್ಳಕ್ಕೆ ಬಿದ್ದಿದೆ. ಈಗ ಮುಂದಿನ ಚಕ್ರವನ್ನು ಮೇಲಕ್ಕೆ ಎತ್ತಬೇಕು. ಹಾಗೆಯೇ ಚಕ್ರದ ಟೈರು ಬರ್ಸ್ಟ್ ಆದಂತಿದೆ. ಅದನ್ನು ಸರಿ ಮಾಡಬೇಕು" ಎಂದು ಅವನು ಅರಿಕೆ ಮಾಡಿಕೊಂಡನು. ಮತ್ಯಾವ ಅನಾಹುತವೂ ಆಗದೆ ಅಷ್ಟರಲ್ಲಿಯೇ ಪರ್ಯವಸಾನವಾದುದಕ್ಕೆ ಬಹಳವಾಗಿ

ಗಾಬರಿಯಾಗಿದ್ದ ಸಾಹೇಬರಿಗೆ ಕೊಂಚ ಮಟ್ಟಿಗೆ ತೃಪ್ತಿಯೇ ಆಯಿತು. ನಿರ್ಜನವಾದ ಪ್ರದೇಶದಲ್ಲಿ ತೊಂದರೆಯಾಗದೆ ಯಾವುದೋ ಹಳ್ಳಿಯ ಸಮೀಪದಲ್ಲಿ ಹಾಗೆ ಆದುದಕ್ಕಾಗಿ ಮನಸ್ಸಿಗೆ ಮತ್ತಷ್ಟು ಧೈರ್ಯವಾಯಿತು.

ರಭಸವಾಗಿ ಬಂದ ಮೋಟಾರು ಬಂಡಿಯು ಹಠಾತ್ತಾಗಿ ತಮ್ಮ ಹೊಲದ ಮುಂದೆ ನಿಲ್ಲಲು, ಹೊಲದಲ್ಲಿ ಕೆಲಸಮಾಡುತ್ತಿದ್ದ ನಾಲ್ಕಾರು ಜನರು ಸಮಾಚಾರವೇನೆಂದು ತಿಳಿಯಲು ಗಾಡಿಯ ಸಮೀಪಕ್ಕೆ ಬಂದರು.

ಹಳ್ಳಿಯವರಿಗೂ ಪಟ್ಟಣವಾಸಿಗಳಿಗೂ ಇಷ್ಟೇ ವ್ಯತ್ಯಾಸ. ಪಟ್ಟಣವಾಸಿಗಳಿಗೆ, ತಮ್ಮ ಪಕ್ಕದಲ್ಲಿಯೇ ಯಾರಾದರೂ ನರಳುತ್ತಿದ್ದರೂ "ನೀನು ಯಾರಪ್ಪ? ನಿನಗೇನಾಗಿದೆ?" ಎಂದು ಕೇಳುವಷ್ಟು ಸಹನೆಯೂ ಪುರಸೊತ್ತೂ ಇರುವುದಿಲ್ಲ. ಆದರೆ, ನಮ್ಮ ಹಳ್ಳಿಗಳ ಕಡೆ ಹೊಸ ವ್ಯಕ್ತಿಯು ಯಾವನೇ ಆಗಲಿ ತಲೆಯಿಟ್ಟಲ್ಲಿ ಅವನ ಪರಿಸ್ಥಿತಿಯೆಲ್ಲವನ್ನೂ ವಿಚಾರಿಸುವುದೇ ಅಲ್ಲದೆ ಅವನಿಗೆ ಕೈಲಾದಮಟ್ಟಿಗೆ ಸಹಾಯಮಾಡುವುದು ಕೂಡಾ ಹಳ್ಳಿಗಳಲ್ಲಿ ಅನೂಚಾನ ಪದ್ಧತಿಯಾಗಿ ನಡೆದು ಬಂದಿರುತ್ತದೆ. ಈ ವಿಚಾರವಾಗಿ ಪಟ್ಟಣವಾಸಿಗಳು "ಹಳ್ಳಿಯವರಿಗೆ ಮಾಡಲು ಬೇರೆ ಕಸುಬು ಏನಿದೆ? ಅದಕ್ಕೆ ಅವರು ಹಾಗೆ ಮಾಡಲು ಸಾಧ್ಯ. ಪ್ರಪಂಚದಲ್ಲಿ ನರಳುವರಿಗೆಲ್ಲಾ ನಾವೇ ಹೊಣೆಯೇ?" ಎನ್ನಬಹುದು.

ಅದು ಹೇಗಾದರೂ ಇರಲಿ, ಮೋಟಾರು ಹಳ್ಳಕ್ಕೆ ಬಿದ್ದ ನಾಲ್ಕಾರು ನಿಮಿಷಗಳಲ್ಲಿ ಅನೇಕ ಜನ ಹಳ್ಳಿಯವರು ಮೋಟಾರಿನ ಸುತ್ತಲೂ ಜಮಾಯಿಸಿದರು. ಸೇರಿದವರ ಪೈಕಿ ನಾಲ್ಕು ಜನ ಹಳ್ಳದಲ್ಲಿ ಬಿದ್ದ ಚಕ್ರಕ್ಕೆ ಕೈಹಾಕಲು ಚಕ್ರವು ಮೇಲಕ್ಕೆ ಬಂತು. ಅದಾದ ಮೇಲೆ ಗಾಡಿಯನ್ನು ಮುಂದಕ್ಕೆ ದಬ್ಬಿ ಒಂದು ಪಕ್ಕಕ್ಕೆ ಬಿಟ್ಟುಕೊಂಡು ಡ್ರೈವರು ಗಾಡಿಯ ಚಕ್ರವನ್ನು ಬಿಚ್ಚಲು ಉಪಕ್ರಮಿಸಿದನು. ಪಾಪ! ಸಾಹೇಬರು ಯಾವುದಾದರೂ ತ್ವರಿತ ಕಾರ್ಯಕ್ಕೆ ಹೋಗಬೇಕಾಗಿತ್ತೋ ಏನೋ. ಅಂತೂ ಹಾಳು ಮೋಟಾರನ್ನು ಶಪಿಸುತ್ತಾ, ಶತಪಥ ತುಳಿಯುತ್ತಾ ಮೋಟಾರಿನಿಂದ ಕೊಂಚ ದೂರ ನಿಂತರು.



ಆ ವೇಳೆಗೆ ಸಾಹೇಬರ ಗಮನವು ಪುನಃ ಮೋಟಾರಿನ ಕಡೆಗೆ ಹೋಯಿತು. ಸರಿಪಡಿಸಿದ ಕೆಲಸವು ಅರ್ಧ ಆದ ಹಾಗಿತ್ತು. ಆ ವೇಳೆಗೆ ಹಳ್ಳಿಯಿಂದ ಮತ್ತೆ ಯಾರೋ ಒಬ್ಬ ವ್ಯಕ್ತಿಯು ಮೋಟಾರಿನ ಹತ್ತಿರಕ್ಕೆ ಬಂದನು. ಆ ಹೊಸಬನು ಬಂದೊಡನೆಯೇ ಹಳ್ಳಿಯವರೆಲ್ಲರೂ ಆತನನ್ನು ಗೌರವಿಸಿ ಕೊಂಚ ಸರಿದು ನಿಂತರು. ಹಳ್ಳಿಯವರು ಆ ಹೊಸ ವ್ಯಕ್ತಿಯೊಡನೆ ನಡೆದುಕೊಂಡದ್ದು ನೋಡಿದರೆ ಆತನು ಆ ಹಳ್ಳಿಯ ಯಾರೋ ಮುಖ್ಯಸ್ಥನೆಂಬುದರಲ್ಲಿ ಸಂಶಯವಿರಲಿಲ್ಲ. ಒಂದೆರಡು ನಿಮಿಷಗಳಲ್ಲಿ ಸಮಾಚಾರವನ್ನೆಲ್ಲಾ ಗ್ರಹಿಸಿ ಆತನು ಹಿಂತಿರುಗುವಷ್ಟರಲ್ಲಿ ಆತನ ದೃಷ್ಟಿಯು ಸಾಹೇಬರ ಮೇಲೂ ಸಾಹೇಬರ ದೃಷ್ಟಿಯು ಆತನ ಮೇಲೂ ಬಿದ್ದಿತು. ಕೊಂಚ ಹೊತ್ತು ಒಬ್ಬರನ್ನೊಬ್ಬರು ದುರುದುರನೆ ನೋಡಿ ಮೆಲ್ಲಗೆ ಒಬ್ಬರ ಸಮೀಪಕ್ಕೆ ಒಬ್ಬರು ಸರಿದರು. ಒಬ್ಬರನ್ನೊಬ್ಬರು ದಿಟ್ಟಿಸಿ ನೋಡುತ್ತಲೂ ಇಬ್ಬರ ಮುಖಗಳಲ್ಲಿಯೂ ಯಾವುದೋ ಹಿಂದಿನ ದಿನಗಳ ನೆನಪು ಕಂಡುಬಂದು ಇಬ್ಬರ ಮುಖಗಳಲ್ಲಿಯೂ ಒಮ್ಮೆಲೇ ಸಂತೋಷದ ಚಿಹ್ನೆಯು ಹೊರಹೊಮ್ಮಿತು.

ಸಾಹೇಬರು "ಓಹೋ! ಶಾಸ್ತ್ರಿಗಳೇ! ಭೇಟಿಯಾದುದಕ್ಕೆ ಬಹಳ ಸಂತೋಷ. ನಿನ್ನನ್ನು ನೋಡಿ ಒಂದು ಯುಗವೇ ಆಗಿಹೋಯಿತು" ಎಂದರು. ಶಾಸ್ತ್ರಿಗಳ ಸಂಶಯವೂ, ಸಂಕೋಚವೂ ಹಾರಿಹೋದವು. ಒಡನೆಯೇ ಮುಂದಕ್ಕೆ ಬಂದು ಚಾಚಿದ ಕೈಯನ್ನು ಗ್ರಹಿಸಿ ಕುಲುಕುತ್ತಾ "ಎಷ್ಟು ವರ್ಷಗಳ ಮಾತು ರಾಮೂ! ನಿನಗೆ ಜ್ಞಾಪಕವಿರುತ್ತೋ ಇಲ್ಲವೋ ಎಂದಿದ್ದೆ. ಅಕಸ್ಮಾತ್ ಉಂಟಾದ ಈ ಭೇಟಿಯಿಂದ ನನಗೆ ಸಂತೋಷವಾಗುತ್ತದಪ್ಪಾ" ಎಂದರು. ಆಮೇಲೆ ಹತ್ತಾರು ನಿಮಿಷಗಳ ಕಾಲ ಇಂಗ್ಲೀಷ್ ಭಾಷೆಯಲ್ಲಿ ಇಬ್ಬರೂ ಮಾತಾಡುತ್ತಾ ನಿಂತರು. ಸಮೀಪದಲ್ಲಿ ನಿಂತಿದ್ದ ಆ ಹಳ್ಳಿಗರು, ತಮ್ಮ ಜೋಡೀದಾರರಿಗೆ ಇಂಗ್ಲೀಷು ಮಾತುಗಳು ಬರುತ್ತೆಂದು ತಿಳಿದಿದ್ದಾಗ್ಯೂ, ಅವರು ಇಂಗ್ಲೀಷಿನಲ್ಲಿ ಸರಳವಾಗಿ ಮಾತನಾಡಿದುದನ್ನು ಕಂಡದ್ದು ಆ ದಿನವೇ. ಆದ್ದರಿಂದ ವಿಸ್ಮಿತರಾಗಿ ಬಹಳ ಹೆಮ್ಮೆಯಿಂದ ಒಬ್ಬರನ್ನೊಬ್ಬರು ನೋಡತೊಡಗಿದರು.

ಸಾಹೇಬರು ಕೇವಲ ಪಾಶ್ಚಾತ್ಯರ ಉಡುಪನ್ನು ಧರಿಸಿ, ತಲೆಯ ಮೇಲೆ ಪರಂಗಿಯವರ ಟೋಪಿಯನ್ನಿಟ್ಟದ್ದರು. ವಯಸ್ಸು-ಸುಮಾರು ನಲವತ್ತು ವರುಷ ಕಟ್ಟಬಹುದು. ಆಳು-ಅಷ್ಟು ಎತ್ತರವೂ ಅಲ್ಲ-ಅಷ್ಟು ಗಿಡ್ಡೂ ಅಲ್ಲ. ಬಣ್ಣ-ಸಾಮಾನ್ಯವಾದ ನಮ್ಮ ಜನರ ಬಣ್ಣಕ್ಕಿಂತಲೂ ಕೊಂಚ ಬಿಳುಪೇ. ಮುಖವನ್ನು ಹತ್ತಿರದಿಂದ ದೃಷ್ಟಿಸಿ ನೋಡಿದರೆ, ಮುಪ್ಪಿನ ಚಿಹ್ನೆಗಳು ಆಗಲೇ ತಲೆದೋರುತ್ತಿದ್ದಂತೆ ಕಂಡುಬರುತ್ತಿತ್ತು.

ಶಾಸ್ತ್ರಿಗಳ ವಯಸ್ಸೂ ಅಷ್ಟೇ. ಆದರೂ ಧಾರಾಳವಾಗಿ ಅದಕ್ಕಿಂತಲೂ ಕಮ್ಮಿ ಎಂದೇ ಹೇಳುವ ಶರೀರ ಪುಷ್ಟಿ. ಒಳ್ಳೆಯ ಆಜಾನುಬಾಹು-ದುಂಡನೆಯ ಮೈಕೈ ಕಾಲುಗಳು. ಬಣ್ಣವು ಎಣ್ಣೆಗೆಂಪು, ತೇಜಃಪುಂಜವಾದ ಮುಖ, ವಿಶಾಲವಾದ ಹಣೆಯ ಮೇಲೆ ಭಸ್ಮ, ಗಂಧಾಕ್ಷತೆಗಳು ಶೋಭಿಸುತ್ತಿದ್ದುವು. ಕಂಠದಲ್ಲಿ ರುದ್ರಾಕ್ಷಿ

ಮಾಲೆ, ಉಟ್ಟಿದ್ದು ಒಂದು ಶುಭ್ರವಾದ ಮಡಿಪಂಚೆ, ಹೊದೆದಿದ್ದು ಒಂದು ಬಿಳಿಯ ವಸ್ತ್ರ. ಆಗತಾನೇ ಊಟವಾಗಿದ್ದಂತೆ ಕಾಣುತ್ತಿತ್ತು. ತಾಂಬೂಲಚರ್ವಣ ಮಾಡುತ್ತಾ ನಿಂತಿದ್ದರು ಶಾಸ್ತ್ರಿಗಳು.

ಒಬ್ಬರನ್ನೊಬ್ಬರು ನೋಡಿ ಹತ್ತಾರು ವರುಷಗಳು ಆಗಿದ್ದವು. ಇಬ್ಬರೂ ಬಾಲ್ಯದಲ್ಲಿ ಸಹಾಧ್ಯಾಯಿಗಳಾಗಿದ್ದವರು. ಬಾಲ್ಯದಲ್ಲಿ ಇಬ್ಬರೂ ತಮ್ಮ ಉಪಾಧ್ಯಾಯರಿಗೆ ಮೆಚ್ಚಿನ ಶಿಷ್ಯರಾಗಿದ್ದವರು. ಯಾವಾಗಲೂ ಶಾಸ್ತ್ರಿಯದು ತರಗತಿಯಲ್ಲಿ ಮೊದಲನೆಯ ಸ್ಥಾನ, ರಾಮಚಂದ್ರಯ್ಯನಿಗೆ ಎರಡನೆಯ ಸ್ಥಾನ. (ಸಾಹೇಬರವರ ಪೂರ್ವಾಶ್ರಮದ ಹೆಸರು - ರಾಮಚಂದ್ರಯ್ಯ. ತಮ್ಮಂತೆಯೇ ತಮ್ಮ ಹೆಸರೂ, ರಾಮಚಂದ್ರಯ್ಯ - ರಾಮಚಂದ್ರನ್ - ರಾಮಚಂದ್ರ - ರಾಮನ್ - ಇತ್ಯಾದಿ ರೂಪಾಂತರಗಳನ್ನು ತಾಳಿದ್ದುವು) ರಾಮಚಂದ್ರಯ್ಯನು ವಿದ್ಯಾರ್ಥಿಯಾಗಿರುವಾಗ್ಯೆ ಶಾಸ್ತ್ರಿಗಿಂತಲೂ ಮೇಲಾಗಿ ತೇರ್ಗಡೆ ಹೊಂದಬೇಕೆಂದು ವರ್ಷವೂ ಪ್ರಯತ್ನಪಟ್ಟು ಸೋತಿದ್ದನು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ರಾತ್ರಿ ಹಗಲೆನ್ನದೆ ಶ್ರಮಪಟ್ಟು ಓದಿದಾಗ್ಯೂ ಶಾಸ್ತ್ರಿಯನ್ನು ಮೊದಲನೆಯ ಸ್ಥಾನದಿಂದ ಕದಲಿಸಲಾಗಲಿಲ್ಲ.

ಶಾಸ್ತ್ರಿಯ ಸ್ಥಾನವನ್ನು ವಿಧಿಯು ಕದಲಿಸಿತು. ಪರೀಕ್ಷೆಯು ಮುಗಿದ ಕೆಲವು ತಿಂಗಳಲ್ಲಿಯೇ ತನ್ನ ತಂದೆಗೆ ಬಹಳವಾಗಿ ಖಾಯಿಲೆ ಎಂದು ತಿಳಿಯಲು ಶಾಸ್ತ್ರಿಯು ಹಳ್ಳಿಯನ್ನು ಬಂದು ಸೇರಿದನು. ಖಾಯಿಲೆಯು ದಿನೇ ದಿನೇ ಹೆಚ್ಚುತ್ತಾ ಬಂದು ಸುಮಾರು ಒಂದು ತಿಂಗಳು ಕಾಲ ಬಳಲಿಸಿ, ಕಡೆಗೆ ಶಾಸ್ತ್ರಿಯ ತಂದೆಯನ್ನು ಆಹುತಿಯಾಗಿ ತೆಗೆದುಕೊಂಡಿತು. ಶಾಸ್ತ್ರಿಯ ಮನೆಯಲ್ಲಿ ಮತ್ತ್ಯಾರೂ ದಿಕ್ಕಿಲ್ಲದುದರಿಂದ ಅನಾಥರಾದ ತನ್ನ ತಾಯಿ, ಹತ್ತು ವರುಷದ ತಮ್ಮ ಮತ್ತು ಆರು ವರುಷದ ತಂಗಿ ಇವರಿಗೆ ತಾನೇ ದಿಕ್ಕಾಗಬೇಕಾಗಿ ಬಂತು. ಈ ಅನಾಹುತ ಜರಗಿದ ಕೆಲವು ದಿನಗಳ ಮೇಲೆ ಪರೀಕ್ಷೆಯ ಫಲಿತಾಂಶವು ಬಂದು ತಾನು ಮೊದಲನೆಯವನಾಗಿ ಉತ್ತೀರ್ಣನಾದುದಾಗಿ ತಿಳಿಯಿತು. ಆದರೂ ತನ್ನ ಸಂಸಾರವನ್ನು ತಹಬಂದಿಗೆ ತರುವುದಕ್ಕೋಸ್ಕರವಾಗಿ ಮುಂದಿನ ವಿದ್ಯಾವ್ಯಾಸಂಗಕ್ಕೆ ತಿಲಾಂಜಲಿಯನ್ನು ಅರ್ಪಿಸಿ ಭೂಕೃಷಿಗೆ ಕೈಹಾಕಿದನು. ತಾತನ ಕಾಲದಿಂದಲೂ ಬೆಳೆಯುತ್ತಿದ್ದ ರಾಗಿಯನ್ನೇ ನಂಬಿಕೊಳ್ಳದೆ ಬಹಳ ಶ್ರಮಪಟ್ಟು ಬಂಜರು ಭೂಮಿಯನ್ನು ಫಲವತ್ತಾದ ತೋಟಗಳನ್ನಾಗಿ ಮಾಡಿದನು.

ಯಾವ ವಿಧಿಯು ಶಾಸ್ತ್ರಿಯ ವಿದ್ಯಾವ್ಯಾಸಂಗಕ್ಕೆ ಕುಂದುಂಟುಮಾಡಿತೋ ಅದೇ ವಿಧಿಯು ರಾಮಚಂದ್ರಯ್ಯನ ವ್ಯಾಸಂಗಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿತು. ಬಿ.ಎ. ಪರೀಕ್ಷೆಯಾದ ಎರಡು ವರುಷಗಳ ತರುವಾಯ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ರಾಮಚಂದ್ರಯ್ಯನು ಮೊದಲನೆಯ ಸ್ಥಾನವನ್ನು ಹೊಂದಿ ಕೀರ್ತಿವಂತನಾದನು.

ಇಬ್ಬರು ವ್ಯಕ್ತಿಗಳೂ ತಮ್ಮತಮ್ಮ ಸದ್ಯದ ಪರಿಸ್ಥಿತಿಯನ್ನು ಸಂಪೂರ್ಣವಾಗಿ

ಮರೆತು ತಮ್ಮ ಬಾಲ್ಯದ ದಿನಗಳಿಗೆ ಮನಸ್ಸನ್ನು ಜಾರಿಸಿದರು. ಅವರು ತಮ್ಮ ಬಾಲ್ಯದಲ್ಲಿ ಆಡಿದ ಆಟಗಳನ್ನೂ ಮಾಡಿದ ಕಲಹಗಳನ್ನೂ ಮನದಣಿಯೆ ನೆನೆದರು. ಎಲ್ಲಾ ಸುಖಗಳಿಗೂ ಕೊನೆಯೊಂದು ಉಂಟಷ್ಟೇ? ಅವರ ಸಂಭಾಷಣೆಯೆಲ್ಲಾ ಮುಗಿಯಿತು – ಒಬ್ಬರನ್ನೊಬ್ಬರು ಬೀಳ್ಕೊಂಡು ಬೇರೆಬೇರೆ ದಾರಿಗಳನ್ನು ಹಿಡಿಯುವ ಸಮಯ – ಆಗ ಶಾಸ್ತ್ರಿಯು "ಏನಯ್ಯ, ಈ ದಿವಸ ನೀನು ದೊಡ್ಡ ಮನಸ್ಸು ಮಾಡಿ ಬಡವನ ಮನೆಯಲ್ಲಿ ನಿಂತುಬಿಡುವುದಕ್ಕೆ ಸಾಧ್ಯವಿಲ್ಲವೇ?" ಎಂದನು.

ರಾಮಚಂದ್ರಯ್ಯನಿಗೆ ಬಹಳ ಸಂಕೋಚವಾಯಿತು. "ಇಲ್ಲವಪ್ಪಾ, ದಯವಿಟ್ಟು ಕ್ಷಮಿಸು. ಈ ದಿನ ಹೆಡ್‌ಕ್ವಾರ್ಟರ್ಸ್‌ನಲ್ಲಿ ಬಹಳ ಅರ್ಜಂಟ್ ಮೀಟಿಂಗ್ ಇದೆ. ನಾನು ಅಲ್ಲಿಗೆ ಹೋಗಿಯೇತೀರಬೇಕು. ಇಲ್ಲವಾದರೆ ಇರುತ್ತಾ ಇದ್ದೆ" ಎಂದನು. ನಿರ್ವಾಹವಿಲ್ಲದೇ ಶಾಸ್ತ್ರಿಯು "ಈಗ ಹೋಗಲೇಬೇಕಾದರೆ ನಾನು ತಡೆಯುವುದಿಲ್ಲ. ಆದರೆ ನೀನು ಖಂಡಿತವಾಗಿಯೂ ಇನ್ನೊಮ್ಮೆ ನಮ್ಮೂರಿಗೆ ಬಂದು ಬಡವನ ಸಂಸಾರವನ್ನು ನೋಡಿಕೊಂಡು ಹೋಗಬೇಕು. ನಮ್ಮ ತಾಯಿ ಮುದುಕಿ ಆದರೂ ಈವತ್ತಿಗೂ ಆಕೆಯು ತನ್ನ ಅಡಿಗೆಮನೆಯ ಯಜಮಾನಿಕೆಯನ್ನು ಸೊಸೆಗೆ ಒಪ್ಪಿಸಿಲ್ಲ. ನಮ್ಮ ತಾಯಿಯ ಅಡಿಗೆಯನ್ನು ನೀನು ಖಂಡಿತಾ ಊಟಮಾಡಲೇಬೇಕು. ನಮ್ಮ ಮನೆಯ ಹಾಲು, ನನ್ನ ಮಗಳು ಲಲಿತಳ ಹಾಡು, ನನ್ನ ಇಬ್ಬರು ಗಂಡುಮಕ್ಕಳು ಹಳ್ಳಿಯ ಜನಕ್ಕಾಗಿ ಸ್ಥಾಪಿಸಿರುವ ಶಾಲೆ ಇವುಗಳನ್ನು ನೀನು ಖಂಡಿತವಾಗಿಯೂ ನೋಡಿ ಸಂತೋಷಪಡದಿರಲಾರೆ. ನೀನು ಯಾವಾಗ ಬರುತ್ತೀಯಾ? ನೀನು ಬರುವಾಗ ತಪ್ಪದೇ ದಯವಿಟ್ಟು ನಿನ್ನ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಬರಬೇಕು" ಎಂದನು. ಈ ಆಹ್ವಾನವನ್ನು ಕೇಳಿ ರಾಮಚಂದ್ರಯ್ಯನು ಯಾವುದೋ ಒಂದು ಯಾತನೆಯನ್ನು ಅನುಭವಿಸಿದಂತೆ ತೋರಿತು. ಅವನು ಶಾಸ್ತ್ರಿಯನ್ನು ಕುರಿತು "ನಾನು ಖಂಡಿತವಾಗಿಯೂ ಸಾಧ್ಯವಾದಾಗ ತಪ್ಪದೇ ಬರುತ್ತೇನೆ. ನನ್ನ ಹೆಂಡತಿಯನ್ನು ಖಂಡಿತವಾಗಿ ಕರೆದುಕೊಂಡು ಬರುತ್ತೇನೆ. ಆದರೆ ಮಕ್ಕಳನ್ನು ಕರೆದುಕೊಂಡು ಬರುವಷ್ಟು ಪುಣ್ಯ ನನಗಿಲ್ಲ" ಎಂದು ಕೈಕುಲುಕಿ ಗಾಡಿಯಲ್ಲಿ ಕುಳಿತು ಹೊರಟೇ ಹೋದನು. ಶಾಸ್ತ್ರಿಯು ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಪ್ರಚಂಡವಾಗಿ ಹಾದಿಯ ದೂಳನ್ನೆಲ್ಲಾ ಎಬ್ಬಿಸಿ ಗಾಡಿಯು ಮಾಯವಾಗಿತ್ತು.

ಶಾಸ್ತ್ರಿಗಳು ಮನೆಗೆ ಹಿಂತಿರುಗುತ್ತಾ "ಆಹಾ! ರಾಮೂ ಎಂತಹ ಸುಖಿ!" ಎಂದು ಮೆಲ್ಲನೆ ಅಂದುಕೊಂಡರು.

ಶಾಸ್ತ್ರಿಗಳನ್ನು ಬಿಟ್ಟು ಗಾಡಿಯಲ್ಲಿ ಕೂತು ನಾಲ್ಕಾರು ಗಜಗಳು ಮುಂದಕ್ಕೆ ಹೋಗುತ್ತಲೂ ಸಾಹೇಬರು "ಆಹಾ ಶಾಸ್ತ್ರಿ ಎಂತಹ ಸುಖಿ" ಎಂದು ನಿಟ್ಟುಸಿರುಬಿಟ್ಟರು.

ಸುಖಿ ಯಾರು?

**'ಸೀತಾಪತಿ'**

### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮೋಟಾರು ಗಾಡಿಯು ಪ್ರವೇಶಿಸಿದ ಹಳ್ಳಿಯ ಪ್ರದೇಶವನ್ನು ಹೇಗೆ ವರ್ಣಿಸಲಾಗಿದೆ?
2. ಸಬ್‌ಕಲೆಕ್ಟರರ ಗಾಡಿಯು ಹಳ್ಳಿಯ ಮಾರ್ಗ ಮಧ್ಯೆಯೇ ಹಠಾತ್ತಾಗಿ ನಿಲ್ಲಲು ಕಾರಣವೇನು?
3. ಹಳ್ಳಿಯ ಜನರಿಗೂ ಪಟ್ಟಣವಾಸಿಗರಿಗೂ ಇರುವ ವ್ಯತ್ಯಾಸವೇನು?
4. ಬಾಲ್ಯದ ಗೆಳೆಯರಾದ ರಾಮಚಂದ್ರಯ್ಯ ಮತ್ತು ಶಾಸ್ತ್ರಿಗಳು ಪರಸ್ಪರ ಭೇಟಿಯಾದಾಗಿನ ಸನ್ನಿವೇಶವನ್ನು ಬರೆಯಿರಿ.

### ಅಭಿಪ್ರಾಯ ಬರೆಯಿರಿ.

- ರಾಮಚಂದ್ರಯ್ಯನವರ ನಗರ ಜೀವನ ಮತ್ತು ಶಾಸ್ತ್ರಿಗಳ ಹಳ್ಳಿಯ ಬದುಕನ್ನು ಹೋಲಿಸಿ ಯಾರು ಸುಖಿ ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

### ಪ್ರಧಾನ ಘಟನೆಗಳನ್ನು ಬರೆಯಿರಿ.

- 'ಸುಖಿ ಯಾರು' ಕಥೆಯ ಪ್ರಧಾನ ಘಟನೆಗಳನ್ನು ಅನುಕ್ರಮವಾಗಿ ಬರೆಯಿರಿ.

### ಲೇಖನ ಬರೆಯಿರಿ


ನಗರ ಜೀವನದಿಂದ ವ್ಯಕ್ತಿಬಾಂಧವ್ಯವು ಶಿಥಿಲವಾಗುತ್ತಿದೆಯೇ?

ಈ ವಿಷಯದ ಕುರಿತಾಗಿ ತರಗತಿಯಲ್ಲಿ ಚರ್ಚಿಸಿ ಲೇಖನವೊಂದನ್ನು ಬರೆಯಿರಿ.

### ಕಥೆಮುಂದುವರಿಸಿ ಬರೆಯಿರಿ

'ಸುಖಿ ಯಾರು' ಕತೆಯಲ್ಲಿ ಬರುವ ಶಾಸ್ತ್ರಿಗಳು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಮುಂದುವರಿಸಿದರೆಂದು ಭಾವಿಸಿ ಕಥೆಯನ್ನು ಮುಂದುವರಿಸಿ ಬರೆಯಿರಿ.

3



# ಕೇರಳದ ಪುತ್ತರಿ

ಕೇರಳದಲ್ಲಿ 'ಪುತ್ತರಿ' (ಹೊಸ ಅಕ್ಕಿ) ಎಂಬುದು ಬೇಸಾಯಕ್ಕೆ ಸಂಬಂಧಿಸಿದ ಒಂದು ಮುಖ್ಯ ಹಬ್ಬವಾಗಿದೆ. ಇದನ್ನು ಸಿಂಹ ಮಾಸದಲ್ಲಿ ದೇವಾಲಯಗಳಲ್ಲೂ ಮನೆಗಳಲ್ಲೂ ಆಚರಿಸುತ್ತಾರೆ. ಈ ಹಬ್ಬದಲ್ಲಿ ಸ್ತ್ರೀಯರಿಗೆ ಪ್ರಾಧಾನ್ಯ. ಹಬ್ಬಕ್ಕೆ ಮುಹೂರ್ತವನ್ನು ಜೋಯಿಸರ ಬಳಿ ಕೇಳಿ ನಿಶ್ಚಯಿಸಲಾಗುತ್ತದೆ. ಹೊಸ ಅಕ್ಕಿಯ ಊಟವನ್ನು ವರ್ಷದಲ್ಲಿ ಮೊದಲಬಾರಿಗೆ ಮಾಡುವ ಆಚರಣೆಯಿದು. ವರ್ಷವಿಡೀ ಕುಟುಂಬದ ಎಲ್ಲ ಸದಸ್ಯರಿಗೂ ಆಹಾರ ದೊರೆಯುವಂತಾಗಲೆಂಬ ಶುಭಹಾರೈಕೆಯು ಈ ಆಚರಣೆಯ ಹಿಂದೆ ಅಡಗಿದೆ.

ಮನೆಗಳಲ್ಲಿ ಆಚರಿಸುವ ಪುತ್ತರಿ ಹಬ್ಬದಲ್ಲಿ ಸಣ್ಣ ಪುತ್ತರಿ ಮತ್ತು ದೊಡ್ಡ ಪುತ್ತರಿ ಎಂದು ಎರಡು ಬಗೆಗಳಿವೆ. ದೇವಾಲಯ, ದೈವಸ್ಥಾನಗಳಲ್ಲಿ ನಿಗದಿಪಡಿಸಿದ ಮುಹೂರ್ತದಲ್ಲಿ ಸಣ್ಣ ಪುತ್ತರಿಯನ್ನು ಆಚರಿಸಲಾಗುತ್ತದೆ. ಆಚರಣೆಯ ದಿನದಂದು ಮುಹೂರ್ತಕ್ಕೆ ಸರಿಯಾಗಿ ದೇವಾಲಯ, ದೈವಾಲಯಗಳಲ್ಲಿ ಸಿಡಿಮದ್ದಿನ ಸದ್ದು ಮೊಳಗುತ್ತದೆ. ಮೊದಲೇ ಮಿಂದು ಬೊಟ್ಟಿಟ್ಟು ಸಿದ್ಧರಾಗಿರುವ ಹೆಂಗಸರನ್ನು ಮತ್ತು ಹುಡುಗಿಯರನ್ನು ಗೃಹಿಣಿಯು ಬಟ್ಟೆ ಅಥವಾ ಕಂಬಳಿ ಹಾಸಿ ಕುಳ್ಳಿರಿಸುತ್ತಾಳೆ. ಮನೆಯಾಕೆಯು ಅಕ್ಕಿಹುಡಿ, ತೆಂಗಿನಕಾಯಿ, ಬೆಲ್ಲ ಮುಂತಾದವುಗಳನ್ನು ಸೇರಿಸಿ ಮೊದಲೇ 'ಉಂಡೆ' ಮಾಡಿಟ್ಟಿರುತ್ತಾಳೆ. ಗದ್ದೆಯಿಂದ ತಂದ ಹೊಸ ತೆನೆಗಳ ಬತ್ತದಿಂದ ತಯಾರಿಸಿದ ಅಕ್ಕಿ, ಕಾಳುಮೆಣಸು, ಬೆಣ್ಣೆ, ಜೇನು ಸೇರಿಸಿ ಒಂದು ಬಗೆಯ ತಿಂಡಿಯನ್ನೂ ತಯಾರಿಸಿರುತ್ತಾಳೆ. ಮೊದಲೇ ಸಿದ್ಧಪಡಿಸಿದ ಉಂಡೆಯ ಮೇಲೆ ಈ ತಿಂಡಿಯನ್ನಿರಿಸಿ ಕೆಸುವಿನ ಎಲೆಯಲ್ಲಿ ಅಥವಾ ಬಾಳೆಯ ತುದಿಎಲೆಯಲ್ಲಿ

ಇಟ್ಟು ಅವರಿಗೆ ನೀಡುತ್ತಾಳೆ. ಕೊಯ್ಲು ಮುಗಿದು ಹೊಸ ಬತ್ತವು ಮನೆಯಲ್ಲಿ ಸಂಗ್ರಹವಾದ ಬಳಿಕ ಪುತ್ತರಿಯನ್ನು ಆಚರಿಸುವುದಿದ್ದರೆ ಹೊಸ ಬತ್ತದಿಂದ ತಯಾರಿಸಿದ ಅವಲಕ್ಕಿಯೊಂದಿಗೆ ಹುರಿದ ಹೊಸ ಅಕ್ಕಿ, ಬೆಲ್ಲ, ತೆಂಗಿನಕಾಯಿ, ತುಪ್ಪ ಮುಂತಾದವುಗಳನ್ನು ಸೇರಿಸಿ ಪುತ್ತರಿಯುಂಡೆಗಳನ್ನು ತಯಾರಿಸಿ ಆಚರಿಸುತ್ತಾರೆ. ಮನೆಯ ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡು ಸಣ್ಣಪುತ್ತರಿಯ ಬಳಿಕ ದೊಡ್ಡಪುತ್ತರಿಯನ್ನು ಆಚರಿಸುತ್ತಾರೆ. ಬಡವರಿಗೆ ಅಷ್ಟು ತಾಕತ್ತು ಇಲ್ಲವಾದುದರಿಂದ ಅವರು ದೊಡ್ಡ ಪುತ್ತರಿಯನ್ನು ಆಚರಿಸುವುದಿಲ್ಲ. ನಿಶ್ಚಯಿಸಿದ ಒಂದು ದಿನ ಕೆಲಸದ ಆಳುಗಳಿಗೂ ಇತರರಿಗೂ ಭೂರಿಭೋಜನವನ್ನು ನೀಡುವುದು ದೊಡ್ಡ ಪುತ್ತರಿ ಹಬ್ಬದ ಆಚರಣೆಯ ಪ್ರಧಾನ ಗುರಿಯಾಗಿದೆ.

ಈ ಆಚರಣೆಯಲ್ಲಿ ಪ್ರಾದೇಶಿಕ ಭೇದ ಕಂಡುಬರುತ್ತದೆ. ಉದಾಹರಣೆಗೆ ತ್ರಿಶೂರು ಜಿಲ್ಲೆಯಲ್ಲಿ ಪುತ್ತರಿಯುಂಡೆಯನ್ನು ತಿನ್ನುವ ಸಂಪ್ರದಾಯವಿದೆ. ಆದರೆ ಹೊಸ ಅಕ್ಕಿಯಿಂದ ತಯಾರಿಸುವ ಪಾಯಸಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಪುತ್ತರಿ ಪಾಯಸದ ಜತೆ ಕಾಳುಮೆಣಸಿನ ಎಲೆ, ತಗತೆಯ ಎಲೆ, ಪುತ್ತರಿ ಎಲೆ ಮುಂತಾದವುಗಳನ್ನು ಸೇರಿಸಿ ಬೇಯಿಸಿ ಬಡಿಸುವುದು ಒಂದು ವಿಶೇಷ ಕ್ರಮವಾಗಿದೆ. ಪುತ್ತರಿ ಪಾಯಸಕ್ಕೆ ಹಣ್ಣುಗಳನ್ನು ಸೇರಿಸುತ್ತಾರೆ. ಜತೆಗೆ ಕಲ್ಲು, ಬತ್ತ, ಮಸಿತುಂಡು ಮತ್ತು ಚುಂಡಕಾಯಿಗಳನ್ನೂ ಸೇರಿಸುತ್ತಾರೆ. ಪಾಯಸ ಊಟವನ್ನು ಮಾಡುವಾಗ ಬತ್ತ ಜಗಿಯಲು ಸಿಕ್ಕಿದರೆ ಒಳ್ಳೆಯದು. ಅಂತೆಯೇ ಕಲ್ಲು, ಮಸಿತುಂಡು ಸಿಕ್ಕರೆ ಕೆಡುಕು. ಹೀಗೆ ಭವಿಷ್ಯವನ್ನು ಸೂಚಿಸುವ ರೀತಿಯಲ್ಲಿ ಆಚರಣೆಯನ್ನು ರೂಪಿಸಿಕೊಳ್ಳುತ್ತಾರೆ.

ಪುತ್ತರಿಗೆ ಸಂಬಂಧಿಸಿದಂತೆ ಆಯಾ ವರ್ಷ ಉಂಟಾಗುವ ಕಷ್ಟಸುಖಗಳನ್ನು ಅಂದಾಜಿಸುವ ಇನ್ನೂ ಬೇರೆಬೇರೆ ಕಾರ್ಯಕ್ರಮಗಳು ವಿಭಿನ್ನ ಪ್ರದೇಶಗಳಲ್ಲಿ ಚಾಲ್ತಿಯಲ್ಲಿವೆ. ಬತ್ತ, ಅಕ್ಕಿ, ಹಣ, ಹೂವು, ಗಂಧ, ಮಸಿತುಂಡು, ಅರಸಿನ ತುಂಡು, ಕಬ್ಬಿಣ ಮುಂತಾದವುಗಳನ್ನು ಬೇರೆಬೇರೆಯಾಗಿ ಕಟ್ಟಿ ತಾಮ್ರದ ಕೊಡದೊಳಗಿಟ್ಟು, ಅದರ ಬಾಯಿಯನ್ನು ಬಟ್ಟೆಯಿಂದ ಮುಚ್ಚಿಡುತ್ತಾರೆ. ಊಟದ ಬಳಿಕ ಮನೆಯ ಅತ್ಯಂತ ಕಿರಿಯ ವ್ಯಕ್ತಿ ಕೊಡದೊಳಗಿಂದ ಒಂದೊಂದೇ ಕಟ್ಟನ್ನು ಎತ್ತುತ್ತಾನೆ. ಹೀಗೆ ಮೂರು ಬಾರಿ ಕಟ್ಟುಗಳನ್ನು ತೆಗೆದು ಹತ್ತಿರ ಹತ್ತಿರ ಇಡುತ್ತಾನೆ. ಪಾಯಸದಿಂದ ಸಿಗುವ ವಸ್ತು ಮತ್ತು ಕೊಡದಿಂದ ತೆಗೆದ ವಸ್ತುಗಳನ್ನು ಪರಿಗಣಿಸಿ ಒಳ್ಳೆಯದನ್ನೂ ಕೆಟ್ಟದನ್ನೂ ನಿಶ್ಚಯಿಸುತ್ತಾರೆ.

**ದೇವಾಲಯ ಪುತ್ತರಿ :** ದೇವಾಲಯಗಳಲ್ಲಿ ನಡೆಯುವ ಪುತ್ತರಿ ಕಾರ್ಯಕ್ರಮಕ್ಕೂ ಮನೆಗಳಲ್ಲಿನ ಪುತ್ತರಿ ಕಾರ್ಯಕ್ರಮಕ್ಕೂ ವ್ಯತ್ಯಾಸವಿದೆ. ಮುಹೂರ್ತದ ದಿನದಂದು

ಬೆಳಗ್ಗೆ ದೇವಾಲಯದ ಬಾಗಿಲು ತೆರೆದು ಧೂಪ, ದೀಪ, ನೈವೇದ್ಯಾದಿ ಸೇವೆಗಳನ್ನು ದೇವರಿಗೆ ಯಥಾಪ್ರಕಾರ ಸಲ್ಲಿಸುತ್ತಾರೆ. ಬಳಿಕ ಹೊಸ ಬತ್ತದಿಂದ ತಯಾರಿಸಿದ ಅವಲಕ್ಕಿ ಮತ್ತು ಬೆಳ್ತಿಗೆ ಅಕ್ಕಿಯನ್ನು ದೇವರಿಗೆ ಸಮರ್ಪಿಸುತ್ತಾರೆ. ಆಮೇಲೆ ಪ್ರಸಾದವನ್ನು ಭಕ್ತರಿಗೆ ಹಂಚಲಾಗುತ್ತದೆ.

ದೇವಾಲಯಗಳ ಪುತ್ತರಿ ಆಚರಣೆಯಗಳಲ್ಲಿಯೂ ವ್ಯತ್ಯಾಸಗಳಿವೆ. ಕುನ್ನತ್ತೂರ್ ಪಾಡಿ ಎಂಬಲ್ಲಿಯ ಮುತ್ತಪ್ಪನ್ ಕ್ಷೇತ್ರದಲ್ಲಿ ಕನ್ನೆ ತಿಂಗಳಲ್ಲಿ ಪುತ್ತರಿ ಹಬ್ಬವನ್ನು ಆಚರಿಸಲಾಗುತ್ತದೆ. ನಿಶ್ಚೈಸಿದ ಮುಹೂರ್ತದಂದು ಬೆಳಗ್ಗೆ ಪಾತ್ರಿಯು ನಡೆಸುವ ದೈವ ಸಂಬಂಧೀ ಆಚರಣೆಯಾದ 'ದೈವ ವೆಳ್ಳಾಟ' ನಡೆಯುತ್ತದೆ.

ಆ ದಿನ ಸಂಜೆ ದೇವಾಲಯದ ಸಮೀಪದ ಗಣ್ಯವ್ಯಕ್ತಿಗಳ ಮನೆಯಲ್ಲಿ 'ಪುತ್ತರಿಚ್ಚೂಟ್' ನಡೆಯುತ್ತದೆ. ಮರುದಿನ ಬೆಳಗ್ಗೆ 'ಮರುಪುತ್ತರಿ' ಆಚರಣೆ ನಡೆಸುತ್ತಾರೆ. ಇವುಗಳನ್ನೆಲ್ಲಾ ಒಟ್ಟಾಗಿ 'ಪುತ್ತರಿ ವೆಳ್ಳಾಟಂ' ಎಂದು ಕರೆಯುತ್ತಾರೆ. ದೈವಸ್ಥಾನಕ್ಕೆ ಸೇರಿದ ಗದ್ದೆಯಿಂದ ತಂದ ಬತ್ತವನ್ನು ಒಣಗಿಸಿ ಕುಟ್ಟಿ ಬೆಳ್ತಿಗೆ ಅಕ್ಕಿಯನ್ನು ಸಿದ್ಧಪಡಿಸಿದ ಬಳಿಕವೇ ವೆಳ್ಳಾಟ ಪ್ರಾರಂಭವಾಗುತ್ತದೆ. ಆದಿನ ಸೇರಿದ ಭಕ್ತರಿಗೆ ಹೊಸಕ್ಕಿಯ ಊಟವನ್ನು ನೀಡಲಾಗುತ್ತದೆ. ಹೀಗೆ ಕುನ್ನತ್ತೂರ್‌ಪಾಡಿಯ ಮುತ್ತಪ್ಪನ್ ಅನುಗ್ರಹ ಪಡೆದ ಬಳಿಕವೇ ಮುತ್ತಪ್ಪನಿಗೆ ಸಂಬಂಧಿಸಿದ ಇತರ ಕ್ಷೇತ್ರಗಳಲ್ಲಿ ಪುತ್ತರಿ ನಡೆಯುತ್ತದೆ.

ಇಂದು ಪುತ್ತರಿಯ ಆಚರಣೆಯು ದೇವಾಲಯಗಳಲ್ಲೂ ದೈವಸ್ಥಾನಗಳಲ್ಲೂ ವಿರಳವಾಗುತ್ತಿದೆ. ಮನೆಗಳಲ್ಲೂ ಈ ಆಚರಣೆ ಹೆಚ್ಚುಕಡಿಮೆ ನಿಂತೇಹೋದಂತಿದೆ. ಬೇಸಾಯದ ಅವನತಿಯೇ ಇದಕ್ಕೆ ಪ್ರಧಾನವಾದ ಕಾರಣವಾಗಿರಬಹುದು.

–ಸಾಧಾರ

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕೇರಳದಲ್ಲಿ ಪುತ್ತರಿ ಹಬ್ಬವನ್ನು ಯಾವಾಗ ಆಚರಿಸುತ್ತಾರೆ?
2. ದೇವಾಲಯಗಳಲ್ಲಿ ಪುತ್ತರಿ ಹಬ್ಬವನ್ನು ಹೇಗೆ ಆಚರಿಸುತ್ತಾರೆ?
3. ಪುತ್ತರಿ ಹಬ್ಬದ ಆಚರಣೆಯು ವಿರಳವಾಗಲು ಕಾರಣವೇನಾಗಿರಬಹುದು?

## ಪ್ರಬಂಧ ಬರೆಯಿರಿ

- ನಿಮ್ಮ ಊರಿನಲ್ಲಿರುವ ಬೇಸಾಯಕ್ಕೆ ಸಂಬಂಧಿಸಿ ಯಾವುದಾದರೊಂದು

ಆಚರಣೆಯ ಕುರಿತಾಗಿ ಪ್ರಬಂಧವನ್ನು ಬರೆಯಿರಿ.

## ಅನುಕ್ರಮವಾಗಿ ಬರೆಯಿರಿ

- ಕೆಳಗೆ ಕೊಡಲಾದ ವಾಕ್ಯಗಳನ್ನು ಅನುಕ್ರಮವಾಗಿ ಬರೆದು ಅರ್ಥಪೂರ್ಣ ಗದ್ಯಭಾಗವನ್ನು ರಚಿಸಿರಿ.

ಮುಖ್ಯೋಪಾಧ್ಯಾಯರು ಧ್ವಜಾರೋಹಣ ಮಾಡಿದರು. ಅಧ್ಯಾಪಕರು ಧ್ವಜವನ್ನು ಕಟ್ಟಿ ಸಿದ್ಧಗೊಳಿಸಿದರು. ಮಕ್ಕಳೆಲ್ಲರೂ ಉತ್ಸಾಹದಿಂದ ಶಾಲೆಗೆ ಬಂದರು. ರಕ್ಷಕ-ಶಿಕ್ಷಕ ಸಂಘದವರು ಸಿಹಿತಿಂಡಿಗಳನ್ನು ವಿತರಿಸಿದರು. ಗಂಟೆ ಬಾರಿಸಿದಾಗ ಮಕ್ಕಳೆಲ್ಲರೂ ಸಾಲಾಗಿ ನಿಂತರು.

## ಪರಿವರ್ತಿಸಿ ಬರೆಯಿರಿ.

- ಕೆಳಗೆ ನೀಡಲಾದ ಸಂಯುಕ್ತ ವಾಕ್ಯಗಳನ್ನು ಸರಳವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

1. ಮಕ್ಕಳು ಜೀವನದಲ್ಲಿ ಯಶಸ್ಸನ್ನು ಗಳಿಸಿದಾಗ ಹೆತ್ತವರಿಗೆ ಬಹಳ ಸಂತೋಷವಾಯಿತು.
2. ಕರಿದ ತಿಂಡಿಗಳನ್ನು ಅತಿಯಾಗಿ ತಿನ್ನುತ್ತಿದ್ದುದರಿಂದ ಶೀನನ ಶರೀರ ಸ್ಥೂಲವಾಗಿ ಬೆಳೆಯಿತು.
3. ತೆನೆ ತುಂಬಿದಾಗ ಪೈರು ಬಾಗುವಂತೆಯೇ ಉತ್ತಮ ನಡೆತೆಯುಳ್ಳವರ ವರ್ತನೆಯಿರುತ್ತದೆ.
4. ವಿಪರೀತ ಮಳೆ ಬಂದುದರಿಂದಾಗಿ ಅಪಾರ ನಾಶನಷ್ಟಗಳುಂಟಾದವು.

4

# ಸಾಹಸಮೂರ್ತಿ ಸುಭಾಸ ಬೋಸರು



1941ನೆಯ ಜನವರಿ 26ರಂದು ಕಲಕತ್ತೆಯ ಪೋಲಿಸರೆಲ್ಲಾ ವಿವಂಚನೆಗೊಳಗಾದರು. ಸುಭಾಸಚಂದ್ರ ಬೋಸರು ಇದ್ದಕ್ಕಿದ್ದ ಹಾಗೆ ತಮ್ಮ ಮನೆಯಿಂದ ಮಾಯವಾಗಿದ್ದಾರೆಂಬ ಕಲಕತ್ತೆಯ ಪೋಲಿಸರ ವರದಿ ಭಾರತದ ಪೋಲಿಸರನ್ನೆಲ್ಲಾ ಎಚ್ಚರಿಸಿತು. ಕೂಡಲೇ ಭಾರತ ಸರಕಾರದವರು ಕಾಬೂಲ ಪೋಲಿಸರಿಗೆ ತಂತಿ ಕಳಿಸಿ, "ಭಾರತೀಯ ಕ್ರಾಂತಿಕಾರಿಯೊಬ್ಬನು ಓಡಿಹೋಗಿದ್ದಾನೆ. ಅವನು ಗಡಿದಾಟುವ ಪ್ರಯತ್ನದಲ್ಲಿರುವನು. ಕೂಡಲೇ ಅವನನ್ನು ಬಂಧಿಸಬೇಕು" ಎಂದು ತಿಳಿಸಿದರು. ಭಾರತ ಸರಕಾರದ ಈ ತಂತಿ ಕಾಬೂಲಕ್ಕೆ ಬಂದಾಗ ಜಿಯಾಉದ್ದೀನರು ಬಿಗಿಯಾದ ಚಲ್ಲಣವನ್ನು ಧರಿಸಿ ಬೆಳೆದ ಗಡ್ಡದ ಮೇಲೆ ಕೈಯಾಡಿಸುತ್ತಾ ಹೊಟಲೊಂದರಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಒಮ್ಮಿಂದೊಮ್ಮೆಲೆ ಛದ್ಮವೇಷದಿಂದ ಕಲಕತ್ತೆಯಿಂದ ಜಾರಿ, ಪೇಶಾವರಕ್ಕೆ ಬಂದು, ಅಲ್ಲಿಂದ ಕಾಬೂಲಕ್ಕೆ ನುಸುಳಿದ ಜಿಯಾಉದ್ದೀನರೇ ಸುಭಾಸ ಬಾಬುಗಳೆಂದು ಕಾಬೂಲದ ಪೋಲಿಸರಿಗೆ ತಿಳಿಯದೇಹೋಯಿತು. ನಲ್ವತ್ತಮೂರು ದಿವಸಗಳವರೆಗೆ ಅಜ್ಞಾತವಾಸದಲ್ಲಿ ಉತ್ತಮಚಂದರೆಂಬ ವ್ಯಾಪಾರಿಗಳೊಬ್ಬರ ಆಶ್ರಯದಲ್ಲಿ ನಿಂತು ರಶಿಯಾ ಹಾಗೂ ಇಟಲಿಗಳ ರಾಯಭಾರಿಗಳೊಡನೆ ಸಂಪರ್ಕ ಬೆಳೆಸಲು ಪ್ರಯತ್ನಿಸಿದರೂ ಕಾಬೂಲದ ಪೋಲಿಸರಿಗೆ ಸುಭಾಸರನ್ನು ಬಂಧಿಸುವುದಾಗಲಿಲ್ಲ.

ತೊಯ್ದ ಸಾಬೂನನ್ನು ಎಣ್ಣೆಗೈಯಿಂದ ಸಮುದ್ರದಂಡೆಯಲ್ಲಿ ನಿಂತು ನೀರಿಗೆಸೆದು ಹುಡುಕಲು ಹೋದರೆ ಅದು ಯಾರಿಗಾದರೂ ಸಿಕ್ಕೀತೇ? ಮಿತ್ರರಾಷ್ಟ್ರವಾದ ಬ್ರಿಟನ್ನನ್ನು ಹತ್ತಿಕ್ಕಬೇಕೆನ್ನುವ ಶತ್ರುರಾಷ್ಟ್ರಗಳೆಲ್ಲಾ ಸುಭಾಸರ ಬೆಂಗಾವಲಿಗೆ ನಿಂತಾಗ ಬ್ರಿಟಿಷ್ ಸಾಮ್ರಾಜ್ಯದವರಿಗೆ ಬಾಬುಗಳು ಸಿಕ್ಕಬಹುದೆ? 'ಎವೆಯಿಕ್ಕಿ ಎವೆತೆರೆಯುವುದರಲ್ಲಿಯೆ' ಎಂಬಂತೆ ಸುಭಾಸರು ಜರ್ಮನಿಗೆ ಹೋದರು. ಅಂದು ಜರ್ಮನಿ ಯುದ್ಧದಲ್ಲಿ ಮಿಂದು, ಬೆಂದು ಮುನ್ನಡೆಯಬೇಕೆಂದು ಹಾತೊರೆಯುತ್ತಿತ್ತು.

"ಜಗತ್ತಿಗೆ ಇತಿಹಾಸವು ತೋರಿಸುವ ಸ್ವಾತಂತ್ರದ ಹಾದಿ ಬೇರಾವುದೂ ಆಗದೇ ಕ್ರಾಂತಿಯದಾಗಿದೆ. ಕ್ರಾಂತಿಯಿಂದಲೇ ಭಾರತದ ಸ್ವಾತಂತ್ರ್ಯ ಸಾಧ್ಯ. ಮುಳ್ಳನ್ನು ಕಿತ್ತೆಸೆಯಬೇಕಾದರೆ ಮುಳ್ಳೇ ಬೇಕು. ನಾವು ಭಿಕ್ಷೆ ಬೇಡಿದರೆ ನಮ್ಮ ಸ್ವಾತಂತ್ರ್ಯವೆಂದೂ ನಮಗೆ ದೊರೆಯಲಾರದು. ಗುಂಡಿಕ್ಕಿ ಕೊಲ್ಲಬೇಕೆಂದು ಕೋವಿಯನ್ನು ಎದೆಗೆ ಗುರಿಯಿಟ್ಟು ನಿಂತಾಗ ಅಹಿಂಸೆಯನ್ನು ಬೋಧಿಸಿದರೆ ಅವನು ಕೇಳಬಹುದೇ?" ಎಂಬ ವಿಚಾರಗಳನ್ನು ತಲೆತುಂಬಾ ತುಂಬಿಕೊಂಡು, ಬ್ರಿಟಿಷರ ವಿರುದ್ಧ ಹೋರಾಡಲು ಸುಭಾಸರು ಸಿದ್ಧತೆಗಳನ್ನು ಮಾಡಿ, ಭಾರತದಲ್ಲಿ ನಿಂತರೆ ಈ ಕಾರ್ಯವು ಸಾಧ್ಯವಾಗದೆಂದು ಪಲಾಯನಸೂತ್ರಕ್ಕಂಟಿಕೊಂಡರು.

"ಕಬ್ಬಿಣದ ಕಡಲೆಯನ್ನು ತಿಂದು ಯಾರಾದರೂ ಬದುಕಬಹುದೇ?" ಎಂದು ಬ್ರಿಟಿಷರು ನಗುತ್ತಿರುವಾಗ "ಕಬ್ಬಿಣದ ಕಡಲೆಯೇಕೆ? ಕಾಲಕೂಟದ ಬಟ್ಟಲನ್ನೂ ಎತ್ತಿ ಕುಡಿದು ಬದುಕಿ ನಿಂತಿದ್ದೇನೆ ನೋಡಿರಿ" ಎಂದು ಬ್ರಿಟಿಷರ ವಿರುದ್ಧ ಯುದ್ಧವನ್ನೇ ಸಾರಿದರು ಸುಭಾಸಬಾಬುಗಳು!

ಭಾರತದ ಪೋಲಿಸರು ಸುಭಾಸಬಾಬುಗಳನ್ನು ಬಂಧಿಸದೆ ನಿರಾಶರಾದಾಗ, ಬ್ರಿಟಿಷ್ ಸರಕಾರವು ಮುಂದೇನು ಮಾಡಬೇಕೆಂದು ಚಿಂತಿಸುತ್ತಿರುವಾಗ, ಬರ್ಲಿನ್-ರಶಿಯಾ ಬಾನುಲಿಯಲ್ಲಿ ಸುಭಾಸರು ಮಾತನಾಡುತ್ತ "ನನ್ನನ್ನು ಭಾರತದಿಂದ ಹೊರಡದಂತೆ ತಡೆಯಲಾರದ ಬ್ರಿಟಿಷ್ ಸಾಮ್ರಾಜ್ಯಶಾಹಿ ನಾನು ತಿರುಗಿ ಭಾರತಕ್ಕೆ ಬರುವುದನ್ನು ತಡೆಯಲಾರದು. ಸರಿಯಾದ ಸಮಯಕ್ಕೆ ನಾನು ಭಾರತಕ್ಕೆ ಬಂದು ನನ್ನ ದೇಶಬಾಂಧವರನ್ನು ಕೂಡಿಕೊಳ್ಳುವೆ" ಎಂದು ಹೇಳಿದಾಗ ಅವರು ಎಲ್ಲಿರುವರೆಂದು ಜಗತ್ತಿಗೆ ತಿಳಿಯಿತು. ಎಲ್ಲಿಯ ಭಾರತ? ಎಲ್ಲಿಯ ಬರ್ಲಿನ್? ಸುಭಾಸರು ಅದಾಗಲೇ ಇಟಲಿ ಹಾಗೂ ಜರ್ಮನಿಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದರು.

ಭಾರತದಿಂದ ಪಠಾಣ ವೇಷಧರಿಸಿ ಕಾಬೂಲಿಗೆ ಹೋದ ಸುಭಾಸರು, ಜರ್ಮನ್ನನೊಬ್ಬನ ಪಾಸ್‌ಪೋರ್ಟಿನಲ್ಲಿ ಜರ್ಮನಿಗೆ ಹೋದರು. ಹೋಗುವಾಗ ಹಾದಿಯಲ್ಲಿ, ರಶಿಯದಲ್ಲಿಳಿದು ಭಾರತೀಯ ಸ್ವಾತಂತ್ರ್ಯಾಂದೋಲನಕ್ಕೆ ಸಹಾಯನೀಡಬೇಕೆಂದು ಸ್ಟಾಲಿನ್ನರನ್ನು ಕೇಳಿದರೆಂಬ ವದಂತಿ ಮಾತ್ರ ಇದೆ.

ಸುಭಾಸಬಾಬುಗಳಿಗೆ ಜರ್ಮನಿಯು ಆಶ್ರಯವನ್ನಿತ್ತಿತಲ್ಲದೆ ಸ್ವಾಗತವನ್ನು ಕೋರಿ ಸಹಕಾರದ ಆಶ್ವಾಸನೆಯನ್ನೂ ಕೊಟ್ಟಿತು. ಅವರಿಗೆ ಜರ್ಮನ್ ಸರಕಾರದಿಂದ ಒಂದು ಸುಂದರವಾದ ವಿಮಾನವು ಕೊಡಲ್ಪಟ್ಟಿತ್ತಲ್ಲದೆ, ಒಂದು ಟ್ರಾನ್ಸ್‌ಮೀಟರನ್ನೂ ಕೊಡಲಾಯಿತು. ಅವರು ಟ್ರಾನ್ಸ್‌ಮಿಟರ್‌ನಿಂದ ಯುದ್ಧದ ವಿವರಗಳನ್ನು ಕೇಳುತ್ತಿದ್ದರು. ಆ ವಿಮಾನದಿಂದ ಸುಭಾಸರು ಜರ್ಮನಿ, ಇಟಲಿ ಹಾಗೂ ರಶಿಯಾಗಳನ್ನೆಲ್ಲ ಸುತ್ತಿದರಲ್ಲದೆ ಸ್ಟಾಲಿನ್‌ಗ್ರಾಡ್ ಯುದ್ಧವು ನಡೆದಾಗ ಅದನ್ನು ನೋಡಲು ಹೋಗಿದ್ದರಂತೆ.



ಹೀಗೆ ಜರ್ಮನಿಯ ಆತಿಥ್ಯದಲ್ಲಿ ಸುಭಾಸರು ದಿನಗಳನ್ನು ಕಳೆಯುತ್ತಿರುವಾಗ, ಒಂದು ದಿವಸ ಬರ್ಲಿನ್-ಹೆಂಬುರ್ಗ್ ನಗರಗಳ ಮಧ್ಯದ ಚಿಕ್ಕ ಸೈನಿಕ ಶಿಬಿರವೊಂದಕ್ಕೆ ಜರ್ಮನಿಯ ಸರ್ವಾಧಿಕಾರಿ ಹಿಟ್ಲರರು ಸುಭಾಸರನ್ನು ಆಹ್ವಾನಿಸಿದರು. ಸುಭಾಸರು ಬಂದೊಡನೆಯೇ ಅವರಿಗೆ ಅಭೂತಪೂರ್ವ ಸ್ವಾಗತವನ್ನು ಕೋರಲಾಯಿತಲ್ಲದೆ, ಸೈನಿಕರ ಗೌರವರಕ್ಷೆಯಲ್ಲಿ 'ಡೆಪ್ಯುಟಿ ಫ್ಯೂರರ್ ಆಫ್ ಇಂಡಿಯಾ' ಎಂಬ ಬಿರುದನ್ನು ದಯಪಾಲಿಸಲಾಯಿತು. ಅಲ್ಲಿ ಜರ್ಮನಿಯ ಸ್ನೇಹಸಹಕಾರಗಳು ಬಾಬುಗಳ ಬೆಂಬಲಕ್ಕಿವೆಯೆಂದು ಸ್ಪಷ್ಟಪಡಿಸಲಾಯಿತು. ಅಂದು ಬರ್ಲಿನ್ ನಗರದ ಪತ್ರಿಕೆಗಳೆಲ್ಲಾ ಸುಭಾಸರ ಚಿತ್ರವನ್ನು ಪ್ರಕಟಿಸಿ ಹಿಟ್ಲರನೊಡನೆ ಆದ ಅವರ ಸಂದರ್ಶನವನ್ನು ಕುರಿತು ಬರೆದಿದ್ದುವು.

ಮುಂದೆ ಹಿಟ್ಲರನೊಡನೆ ಜರ್ಮನಿಯಲ್ಲಿ ಅಂದು ನಡೆದ ಸಂಗ್ರಾಮ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಿ ಬಂದು ಅಲ್ಲಿಯೇ ಹಿಂದ್ ಫೌಜನ್ನು ಕಟ್ಟಿದರು. ಭಾರತೀಯ ನಿವಾಸಿಗಳು ಹಾಗೂ ಲಿಬಿಯಾ ಮೊದಲಾದ ದೇಶಗಳಿಂದ ತಂದ ಯುದ್ಧಕೈದಿಗಳೂ ಆ ಫೌಜಿನಲ್ಲಿ ಸೇರಿದ್ದರು. ಆ ಫೌಜು ಡ್ರೆಸ್‌ಡೆನ್ನಿನಲ್ಲಿ ಇದ್ದಿತೆಂದೂ, ಅದರಲ್ಲಿ ಎಂಟು ಬಟಾಲಿಯನ್ನುಗಳು ಹಾಗೂ ಹನ್ನೆರಡು ಸಾವಿರ ಸೈನಿಕರು ಇದ್ದರೆಂದೂ ಹೇಳಲಾಗುತ್ತಿದೆ.

ಬರ್ಲಿನಿನಿಂದ ಸುಭಾಸರು ನೇರವಾಗಿ ಸಿಂಗಾಪುರಕ್ಕೆ ಬಂದರು. ಸಿಂಗಾಪುರವು ಅದಾಗಲೇ ಬ್ರಿಟಿಷರ ಕೈಬಿಟ್ಟು ಜಪಾನಿಯರ ವಶವಾಗಿತ್ತು. ಆ ನೆಲದಲ್ಲಿ ಬಂದುನಿಂತು ಸುಭಾಸರು ಸೈನ್ಯವನ್ನು ಕಟ್ಟಿದರು. ಸುಭಾಸರ ಮುಖ್ಯಮಂತ್ರಿತ್ವದಲ್ಲಿ 'ಆಜಾದ್ ಹಿಂದ್' ತಾತ್ಪೂರ್ತಿಕ ಸರಕಾರವೂ ಸ್ಥಾಪನೆಯಾಯಿತು. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಜಪಾನಿನಿಂದ ಈ ಹೊಸ ಸರಕಾರಕ್ಕೆ ಕೊಡಲ್ಪಟ್ಟವು. ಆ ದ್ವೀಪಗಳಿಗೆ 'ಶಾಹೀದ್ ಸ್ವರಾಜ್ಯ' ಎಂಬ ಹೊಸ ಹೆಸರನ್ನು ಇಡಲಾಯಿತು.

1943 ಅಕ್ಟೋಬರ್ 21ನೆಯ ದಿನಾಂಕವು ಭಾರತೀಯ ಸ್ವಾತಂತ್ರ್ಯದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ದಿನವಾಗಿದೆ. ಅಂದು ಪೂರ್ವ ಏಶಿಯಾದ ವೀರಭಾರತೀಯರು, ವಿದೇಶಗಳಲ್ಲಿಯ ಆಂಗ್ಲವಿರೋಧಿಗಳು ಸಿಂಗಾಪುರದಲ್ಲಿ ಒಂದುಗೂಡಿದ್ದರು. ಸಯಾಮ್, ಇಂಡೋಚೀನಾ, ಜಾವಾ, ಫಿಲಿಪಾಯಿನ್, ಜಪಾನ್.... ಎಲ್ಲ ಕಡೆಗಳಿಂದಲೂ ಭಾರತೀಯ ಪ್ರತಿನಿಧಿಗಳು ಬಂದು ಕೂಡಿದ್ದರು. ಸ್ವಾತಂತ್ರ್ಯದ ಕಡೆಗೆ ಮುಂದುವರಿಯುವುದಕ್ಕಾಗಿ ತಮ್ಮ ಸಂಘಟನೆಗೆ ಮೂರ್ತಸ್ವರೂಪವನ್ನು ಕೊಡಲು ಅಂದವರು ಸಮ್ಮಿಲಿತರಾಗಿದ್ದರು.

ಮುಂದೆ ಎರಡೇ ದಿವಸಗಳಲ್ಲಿ ಈ ಹೊಸ ಹಿಂದ್‌ಸೇನೆ ಬ್ರಿಟನ್ ಮತ್ತು ಅಮೇರಿಕೆಯ ವಿರುದ್ಧ ಯುದ್ಧವನ್ನು ಸಾರಿತು.

ಆಜಾದ್ ಹಿಂದ್‌ಸೇನೆ ರಾಷ್ಟ್ರೀಯ ಐಕ್ಯಕ್ಕೆ ಒಂದು ಆದರ್ಶವಾಗಿತ್ತು. ಮಲಯಾ, ಬರ್ಮಾದೇಶಗಳಲ್ಲಿಯ ಭಾರತೀಯರ ಪ್ರಾಣ, ವಿತ್ತಗಳ ರಕ್ಷಣೆ, ದೀನರ ಮತ್ತು ನಿರ್ಭಾಗ್ಯರ ವಿಶೇಷತಃ ಶ್ರಮಜೀವಿಗಳ ಹಿತರಕ್ಷಣೆ ಮೊದಲಾದ ಸಮಾಜ ಸೇವೆಯ ಕಾರ್ಯಗಳನ್ನೂ ಆಜಾದ್‌ಹಿಂದ್ ಸರಕಾರವು ದಕ್ಷತೆಯಿಂದ ನಿರ್ವಹಿಸಿತು.

ಶತ್ರುರಾಷ್ಟ್ರಗಳ ಜೊತೆ ಈ ಸರಕಾರವು ಯುದ್ಧವನ್ನು ಸಾರಿದೊಡನೆ ಯುದ್ಧ ನಿರ್ವಹಣೆಗಾಗಿ ತನ್ನ ಕಾರ್ಯಾಲಯವನ್ನು 1944ನೆಯ ಜನವರಿಯಲ್ಲಿ ರಂಗೂನಕ್ಕೆ ತರಲಾಯಿತು. ರಂಗೂನಕ್ಕೆ ಬಂದೊಡನೆಯೇ 'ದಿಲ್ಲಿ ಚಲೋ' ದಂಡಯಾತ್ರೆಯ ಯೋಜನೆಗಳೆಲ್ಲಾ ಸಿದ್ಧವಾಗಿ ದಿಲ್ಲಿಯ ಕಡೆಗೆ ನುಗ್ಗಿಹೋಗುವ ಪಯಣದ ಸಿದ್ಧತೆಗಳೆಲ್ಲಾ ಪ್ರಾರಂಭವಾದುವು.

ಪಾರತಂತ್ರ್ಯದಲ್ಲಿದ್ದ ತಮ್ಮ ಮಾತೃಭೂಮಿ ಹತ್ತಿರಹತ್ತಿರವಾದಂತೆ ಹಿಂದ್ ಸೈನಿಕರ ಉತ್ಸಾಹ ಹೆಚ್ಚುತ್ತಿತ್ತು. ಅವರ ನೋವು-ನಲಿವು, ಹಸಿವೆ-ಬಾಯಾರಿಕೆಗಳು ಎಲ್ಲವೂ ಮಾಯವಾಗಿ ಅವರ ಹೆಜ್ಜೆಗೆ ಹಾಗೂ ಹಾಡುವ ಸ್ವಾತಂತ್ರ್ಯಗೀತೆಗೆ ಒಂದು ಸ್ವರ್ಗೀಯ ಶಕ್ತಿಯನ್ನು ತಂದುಕೊಟ್ಟದ್ದಿತು. ಆಜಾದ್‌ಹಿಂದ್ ಸೇನೆಯ ಅಭಿಮಾನಶಾಲಿ ಆಜಾದ್‌ದಳವು ವೀರಾಗ್ರಣಿ ಶಹಾನವಾಜರ ನೇತೃತ್ವದಲ್ಲಿ ಭಾರತೀಯ ಗಡಿಯನ್ನು ಸಮೀಪಿಸಿತು.

"ಇಗೋ, ಇದೇ ನಮ್ಮ ಮಾತೃಭೂಮಿ ಭಾರತದ ಗಡಿ!" ಎಂದು ಯಾರೋ ಕೂಗಿದರು.

ಎದುರಿಗಿದ್ದ ಮುಳ್ಳುತಂತಿಯ ಬೇಲಿ ತಮ್ಮನ್ನೆಲ್ಲಾ ಪರತಂತ್ರರನ್ನಾಗಿ ಮಾಡಿದೆಯೆಂದು ಸೇನಾನಿಗಳು ಕೂಗಿಕೊಂಡರು. ಬೇಲಿಯ ಈ ಕಡೆ ವಿದೇಶ; ಆ ಕಡೆ ಸ್ವದೇಶ! ಬೇಲಿಯನ್ನು ಕಿತ್ತು ಭಾರತವನ್ನು ಬಿಡುಗಡೆ ಮಾಡುವುದೇ ಈ ಸೈನಿಕರು ಮಾಡಿದ ಬಲಿದಾನದ ಪ್ರತಿಜ್ಞೆಯಾಗಿತ್ತು. ಅರೆಹೊಟ್ಟೆಗಳಿಂದ ಹಾಗೂ



KT-267-3/Kannada-8 BT

ಬರಿದೇಹದಿಂದ ನರಳುತ್ತಿದ್ದರೂ ಆ ಸೈನಿಕರು ಅಡವಿಯ ಗಡ್ಡೆಸೊಪ್ಪುಗಳನ್ನು ತಿಂದು ಭಾರತದ ಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿ ನಿಂತಿದ್ದರು.

ಆ ಪಾರತಂತ್ರ್ಯದ ಬೇಲಿಯನ್ನು ಸೈನಿಕನೊಬ್ಬನು ಹರಿದೊಡನೆ ಎಲ್ಲ ಸೈನಿಕರೂ ಭಾರತದ ನೆಲದಲ್ಲಿ ನುಗ್ಗಿದರು. ಕೆಲವರು ಇಲ್ಲಿಯ ಮಣ್ಣನ್ನೆತ್ತಿ "ಇದು ನನ್ನ ದೇಶದ ಮಣ್ಣು" ಎಂದು ನಲಿದಾಡಿದರೆ, ಮತ್ತೆ ಕೆಲವರು ಅಲ್ಲಿದ್ದ ಹೂಗಳನ್ನು ಕೊಯ್ದು "ಇವು ನನ್ನ ದೇಶದ ಹೂಗಳು" ಎಂದರು. "ನಾವು ದಿಲ್ಲಿಯ ಕಡೆ ಹೊರಟ್ಟಿದ್ದೇವೆ" ಎಂದರು ಅನೇಕ ಸೇನಾನಿಗಳು.

ಅಂಧಕಾರವೆಲ್ಲಾ ಕತ್ತರಿಸಿ, ಬೆಳಗು ಹರಿದು, ಬೆಟ್ಟದ ತುದಿಗಳಲ್ಲಿ ಹೊಂಬೆಳಕು ಹಣೆಯಿಕ್ಕಿದಾಗ ಹಕ್ಕಿಗಳು ಹಾರಾಡಿದುವು. ಬಹುಶಃ ಅವು ಸ್ವಾತಂತ್ರ್ಯಗೀತೆಯನ್ನೇ ಹಾಡಿರಬಹುದು. ಬಯಲಿನಲ್ಲಿ ಕಹಳೆ ಮೊಳಗಿದಾಗ ಸೈನಿಕರೆಲ್ಲ ಒಂದೆಡೆ ನೆರೆದರು. ನೇತಾಜಿ ಸುಭಾಸಚಂದ್ರ ಬೋಸರು ಅಲ್ಲಿಗೆ ಆಗಮಿಸಿದರು.

"ನೇತಾಜೀಕಿ ಜೈ!"....ಎಂಬ ಆಜಾದ್ ಸೇನಾನಿಗಳ ಕೂಗು ದಿಕ್ಕುಗಳಲ್ಲಿ ಪ್ರತಿಧ್ವನಿಸಿ ಸ್ವಾತಂತ್ರ್ಯವೀರನಿಗೆ ಸ್ವಾಗತವನ್ನು ಕೋರಿದುವು. ಕ್ಯಾಪ್ಟನ್ ಶಹಾನವಾಜರು ಆಜಾದ್ ಹಿಂದ್ ಸರಕಾರದ ಧ್ವಜವನ್ನು ಏರಿಸಿದರು. ಸ್ವಾತಂತ್ರ್ಯದಿಂದ ತಾವು ಭಾರತದ ಮಣ್ಣನ್ನಾದರೂ ಮುಟ್ಟಿದೆವಲ್ಲಾ ಎಂದು ಚಿನ್ನವನ್ನು ಪಡೆದಷ್ಟು ಸಮಾಧಾನವಾಯಿತು ಆ ಸೈನಿಕರಿಗೆ!

ಈ ಹೋರಾಟವನ್ನು ಕುರಿತು ಸುಭಾಸರು ಮಾತನಾಡುತ್ತಾ "1944ನೆಯ ಫೆಬ್ರುವರಿ 4ರಂದು ನಾವು ಆಯುಧಪಾಣಿಗಳಾಗಿ ದಾಳಿಯನ್ನು ಆರಂಭಿಸಿದೆವು. ಅಂದಿನಿಂದ ಇಂದಿನವರೆಗೆ ನಮ್ಮ ದಂಡಿನ ಒಂದೊಂದು ಹೆಜ್ಜೆಯೂ ನೆತ್ತರಿನ ಕಾಲುದಾರಿಯಲ್ಲಿ ಮೂಡಿದೆ. ನಾವು ನಮ್ಮ ರಕ್ತನಾಳಗಳ ಬತ್ತಿಗಳಿಂದ ತಾಯಿಯ ಆರತಿಯನ್ನು ಅಣಿಗೊಳಿಸಿದ್ದೇವೆ" ಎಂದು ಹೇಳಿದಾಗಿನ ಅವರ ಕೆಚ್ಚನ್ನು ಯಾರೂ ಗುರುತಿಸಬಹುದು.

ಅಲ್ಲಿಂದ ಇಂಫಾಲದವರೆಗೂ ಬೋಸರ ಸೈನ್ಯ ನುಗ್ಗಿತು. ಅಲ್ಲಿ ಯಶಸ್ಸು ದೊರೆಯಿತು. ಮುಂದೆ ಬ್ರಿಟಿಷರು ರಂಗೂನನ್ನು ಮರಳಿ ವಶಪಡಿಸಿಕೊಂಡಾಗ ಆಜಾದ್ ಹಿಂದ್ ಸೇನೆಯು ಹಿಂದೆ ಸರಿಯಿತು. ಅಲ್ಲಿಂದ ಸುಭಾಸರು ಹೊಸ ಯೋಜನೆಗಾಗಿ ವಾಯುಮಾರ್ಗದಿಂದ ಟೋಕಿಯೋಕ್ಕೆ ಹೋದರು. ಹೋಗುವಾಗ ದಾರಿಯಲ್ಲಿ, 1945 ಅಗಸ್ಟ್ 18ರಂದು ಫಾರ್ಮೋಸಾದ ಬಳಿ ತಾಯಿಹೋಕದ ಹತ್ತಿರ ವಿಮಾನ ಅಪಘಾತದಿಂದ ಗಾಯವಾಗಿ ಅವರು ತೀರಿಕೊಂಡರೆಂಬ ಸುದ್ದಿ ಬಂದಿತು. ಅದೇ ಸುಭಾಸರ ಕೊನೆ. ಆ ಕೊನೆಯೇ ಆಜಾದ್ ಹಿಂದ್ ಸೇನೆಗೂ ಪೂರ್ಣವಿರಾಮವನ್ನಿತ್ತಿತು.

ವಿದೇಶಿಯ ದೃಷ್ಟಿಯಲ್ಲಿ ಸುಭಾಸ ಬಾಬುಗಳು ಕ್ರಾಂತಿಕಾರರು. ಭಾರತದ ಇತ್ತೀಚಿನ ಇತಿಹಾಸದಲ್ಲಿ ಈ ರೀತಿ ದೇಶದಿಂದ ಓಡಿಹೋಗಿ ಪರದೇಶದಲ್ಲಿ ದಂಡುಕಟ್ಟಿ ಆಳರಸರ ಜೊತೆ ಯುದ್ಧಹೂಡಿದ ಉದಾಹರಣೆಗಳೇ ವಿರಳ. ಏಕೈಕ ವೀರರಾಗಿ ಹೋರಾಡಿದ ಸುಭಾಸರು ನಮ್ಮಿಂದ ಕಣ್ಮರೆಯಾಗಿದ್ದರೂ ಅವರ ವೀರ-ಸಾಹಸ ಚರಿತ್ರೆಯು ನಮ್ಮ ಮಧ್ಯೆ ಇನ್ನೂ ಬದುಕಿ ನಿಂತಿದೆ; ಮುಂದೆಯೂ ನಿಲ್ಲಲಿದೆ.

**ಗೋವಿಂದಮೂರ್ತಿ ದೇಸಾಯಿ**

## ಉತ್ತರಿಸಿರಿ.

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಬ್ರಿಟಿಷರ ಕಣ್ಣುತಪ್ಪಿಸಿ ಸುಭಾಸರು ಕಲಕತ್ತೆಯಿಂದ ಕಾಬೂಲಿಗೆ ಹೇಗೆ ಪರಾರಿಯಾದರು?
2. ಜರ್ಮನಿಯು ಸುಭಾಸಚಂದ್ರ ಬೋಸರಿಗೆ ಯಾವ ರೀತಿಯ ಸ್ವಾಗತವನ್ನು ನೀಡಿ ಗೌರವಿಸಿತು?
3. ಸುಭಾಸರು ಸ್ಥಾಪಿಸಿದ ಸೇನೆಯು ಕಾರ್ಯನಿರ್ವಹಿಸುತ್ತಿದ್ದ ಸಮಾಜ ಸೇವೆಯ ಕಾರ್ಯಗಳು ಯಾವುವು?
4. ಭಾರತದ ಗಡಿಯನ್ನು ತಲುಪಿದ 'ಆಜಾದ್ ಹಿಂದ್ ಸೇನೆ' ಯು ತನ್ನ ಉತ್ಸಾಹವನ್ನು ಹೇಗೆ ಪ್ರಕಟಿಸಿತು?

## ಭಾಷಣ ತಯಾರಿಸಿರಿ.

ಕೆಳಗೆ ನೀಡಲಾದ ವಿಷಯವನ್ನಾಯ್ದುಕೊಂಡು ಸಾಹಿತ್ಯಸಭೆಯಲ್ಲಿ ಭಾಷಣ ಮಾಡಲಿದ್ದೀರೆಂದು ಭಾವಿಸಿರಿ. ಅದಕ್ಕೆ ಸಿದ್ಧತೆಯಾಗಿ ಲಿಖಿತ ಭಾಷಣ ತಯಾರಿಸಿರಿ.

'ದೇಶದ ಪ್ರಗತಿಯಲ್ಲಿ ವಿದ್ಯಾರ್ಥಿಗಳ ಪಾತ್ರ'

## ವಿಚಾರಗೋಷ್ಠಿ ಪ್ರಬಂಧ ಬರೆಯಿರಿ.

ಕೆಳಗೆ ನೀಡಲಾದ ಹೆಗ್ಗುರುತುಗಳ ಆಧಾರದಲ್ಲಿ 'ರಾಷ್ಟ್ರೀಯ ಭಾವೈಕ್ಯ' ಎಂಬ ವಿಷಯದ ಬಗ್ಗೆ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಸೂಕ್ತವಾದ ಪ್ರಬಂಧ ಬರೆಯಿರಿ.

- ಒಂದು ರಾಷ್ಟ್ರ - ಹಲವು ಸಂಸ್ಕೃತಿಗಳು - ಭಿನ್ನ ಭಿನ್ನ ಭಾಷೆಗಳು ವಿಭಿನ್ನ ಆಚರಣೆಗಳು - ವಿವಿಧ ಜಾತಿ - ಧರ್ಮಗಳು - ಎಲ್ಲರೂ ಭಾರತೀಯರೆಂಬ ಏಕತೆಯ ಭಾವ - ಒಗ್ಗಟ್ಟನಲ್ಲಿ ಬಲವಿದೆ - ವಿದ್ಯಾರ್ಥಿಗಳ ಕರ್ತವ್ಯ.

## ವಾರ್ತೆ ಬರೆಯಿರಿ

ಕೆಳಗೆ ನೀಡಲಾದ ವಿಚಾರವನ್ನು ಬಳಸಿ ದೂರದರ್ಶನ ವಾರ್ತೆಯನ್ನು ತಯಾರಿಸಿರಿ.

- ಆಜಾದ್ ಹಿಂದ್ ಸೇನೆಯು ಭಾರತಕ್ಕೆ ಬಂದ ಸಂದರ್ಭ.

## ವ್ಯಕ್ತಿ ಪರಿಚಯ ಬರೆಯಿರಿ

ಕೆಳಗೆ ಕೊಟ್ಟಿರುವ ಮಾಹಿತಿಗಳನ್ನು ಬಳಸಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ವ್ಯಕ್ತಿಪರಿಚಯವನ್ನು ಬರೆಯಿರಿ.

ಜನನ : 1875 ಅಕ್ಟೋಬರ್ 31

ಸ್ಥಳ : ಗುಜರಾತ

ತಂದೆ ತಾಯಿ : ಝಾವೇರ್ ಬಾಯಿ ಪಟೇಲ್, ಲಾಡ್ ಬಾಯಿ

ಶಿಕ್ಷಣ : 22ನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿ ಕಾನೂನಿನಲ್ಲಿ ಉನ್ನತ ವ್ಯಾಸಂಗ ಮಾಡಿ ಬ್ಯಾರಿಸ್ಟರ್ ಪದವಿ.

ವೃತ್ತಿ : ಅಹಮ್ಮದಾಬಾದಿನಲ್ಲಿ ವಕೀಲರಾಗಿ ಸೇವೆ.

ಸೇವೆ : ಸ್ವಾತಂತ್ರ್ಯ ಹೋರಾಟಗಾರರು. ಗಾಂಧೀಜಿಯವರ ವ್ಯಕ್ತಿತ್ವದ ಪ್ರಭಾವ, ಕಾಂಗ್ರೆಸಿನ ಅಧ್ಯಕ್ಷರಾಗಿ ಸೇವೆ. ಭಾರತದ ಏಕೀಕರಣಕ್ಕಾಗಿ ಪರಿಶ್ರಮ. 554 ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸುವಲ್ಲಿ ಸ್ತುತ್ಯರ್ಹಸೇವೆ.

ಗೌರವ : ರೈತ ಜನರಿಂದ ಸರ್ದಾರ್ ಎಂಬ ಬಿರುದು.
ಉಕ್ಕಿನ ಮನುಷ್ಯರೆಂಬ ಖ್ಯಾತಿ

ಮರಣ : 15-12-1950.

ಘಟಕ - 2

# ವಿಹಾರ - ಸಾಹಸ

- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ, ನಾಟಕ ಇತ್ಯಾದಿ ವಿವಿಧ ಭಾಷಾಪ್ರಕಾರಗಳನ್ನು ರಚಿಸುವುದು ಮತ್ತು ಪರಿಷ್ಕರಿಸಿ ಪ್ರಕಟಿಸುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.
- ವೈವಿಧ್ಯಮಯ ಸಾಹಿತ್ಯಪ್ರಕಾಗಳನ್ನು ಓದಿ ಆಸ್ವಾದಿಸಿ ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ಇತ್ಯಾದಿಗಳನ್ನು ತಯಾರಿಸುವುದು.

1



ಮೇಲಿನ ಚಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿರಿ. ಅದರ ಕುರಿತಾಗಿ ನಿಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು ತರಗತಿಯಲ್ಲಿ ವ್ಯಕ್ತಪಡಿಸಿರಿ.

# ಜೋಗಿನ್ ಜಲಪಾತ



ಅದೊದೊದೋ । ರಾಜಾ । ರೋರೀರ್ ।
ರಾಕೀಟ್ । ಆಮೇಲ್ ಲೇಡಿ ।
ಜೋಗಿನ್ ಜಲಪಾತ್ ಅಂತಂತಾರೆ
ಇವುಗೊಳ್ ನಾಕಕ್ ಕೂಡಿ ।
ನಸ್ಟಕ್ ಸಿಕ್ಕಿ ನರಳೋನ್ಗೇನೆ
ಮೇಲಿಂದ್ ಮೇಲೆ ಕಸ್ಟ
ಒದ್ಕೊಂಡ್ ಬಂದಿ ಬಡದ್ ಇಕ್ಕೋದ್ನ
ಮಾಡ್ತೈತ್ ರಾಜ ಸ್ಪಷ್ಟ
ದುಡ್ ಉಳ್ಳೋರು ದುಡ್ ಇಲ್ದೋರ್ನ
ಗದರಿಸಿ ಓಡ್ಸೋ ಅಂಗೆ ।
ರೋರಿರ್ ಸದ್ದು ನೆಪ್ ತರ್ತೈತೆ
ಕೇಳ್ತ ನಿಂತ್ರೆ ನಂಗೆ

ಬಡವನ್ನ್ ಮುಕ್ಕೋ ಸಾವಿರ್ ಸಂಕ್ಟ
ಜಾಗಾ ಸಾಲ್ದೆ ಒಳಗೆ
ಉಕ್ ಬರೋವಂಗ್ ಎದ್ ಬರ್ತೈತೆ
ರಾಕೀಟ್ ಉಳ್ಳಿ ಕೆಳಗೆ ।

ಜಾರ್‍ತ ಲೇಡಿ ತೇಲ್ತ ಬಂದ್ರೆ
ಮೈ ಝುಂ ಝುಂ ಅಂತೈತೆ ।
ಬಡವನ್ ತಿನ್ನೋ ಸಿರಿಮಂತಮ್ಮ
ಬಳಕ್ತ ಬಂದಂಗ್ ಐತೆ ।

ಬಡವನ್ ಬಾಯ್ಗೆ ಬೀಗಾನ್ ಇಕ್ಕಿ
ಬಣ್ಣಮೇಲ್ ಬಳದಂಗೆ
ಜಲಪಾತ ಮೇಲ್ ಏನ್ ಕಾಮನ್‌ಬಿಲ್ಲು ।
ಹಾ। ಬಿಲ್ಲಿನ್ ರಂಗೆ ।

ಬಡವನ್ ಬದುಕು ಎದ್ದ್ ಬಂದಂಗೆ
ಜೋಗ್ ಕಾಣ್ತದ್ರೆ ಕಣ್ಗೆ –
ಸುತ್ತಿನ್ ಕಾಡೂ ಕಾಮನ್ ಬಿಲ್ಲೂ
ನೆಗತಿರ್‍ತಾವೆ ತಣ್ಗೆ ।

**– ಜಿ.ಪಿ. ರಾಜರತ್ನಂ**

## ಡಾ। ಜಿ.ಪಿ. ರಾಜರತ್ನಂ

ಕವಿ, ನಾಟಕಕಾರ, ಗುಂಡ್ಲು ಪಂಡಿತ ರಾಜರತ್ನ ರಾಜೈಯ್ಯಂಗಾರ್ ಅವರು ಜಿ.ಪಿ. ರಾಜರತ್ನಂ ಎಂದೇ ಪ್ರಸಿದ್ಧರು. ಇವರು ೫-೧೨-೧೯೦೮ರಲ್ಲಿ ಜನಿಸಿದರು. ತಂದೆ ಜಿ.ಪಿ. ಗೋಪಾಲಕೃಷ್ಣ ಅಯ್ಯಂಗಾರ್. ಜನ್ಮಸ್ಥಳ ಈಗಿನ ರಾಮನಗರ.

೧೯೨೮ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ೧೯೩೧ರಲ್ಲಿ ಮೈಸೂರು ಮಹಾರಾಜ ಕಾಲೇಜಿನಿಂದ ಎಂ.ಎ. ಪದವಿ ಗಳಿಸಿದರು. ಬಳಿಕ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಮೈಸೂರು, ತುಮಕೂರು, ಶಿವಮೊಗ್ಗಗಳಲ್ಲಿ ಸೇವೆಸಲ್ಲಿಸಿ, ಬೆಂಗಳೂರಿನಲ್ಲಿ ರೀಡರ್ ಆಗಿ ನಿವೃತ್ತರಾದರು. ಇವರ ರತ್ನನ ಪದಗಳು, ಬುದ್ಧವಚನ ಪರಿಚಯ ಕೃತಿಗಳಿಗೆ ದೇವರಾಜ ಬಹದ್ದೂರ್ ಪ್ರಶಸ್ತಿಯೂ ೧೯೬೭ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪಡೆದ ಇವರಿಗೆ ೧೯೭೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯೂ ಸಂದಿದೆ. ಗಾಂಧಿ ಜ್ಞಾಪಕ ದೀಪ, ಚೀನಾದೇಶದ ಬೌದ್ಧ ಯಾತ್ರಿಕರು, ಜಾತಕ ಕತೆಗಳು, ರತ್ನನ ಪದಗಳು, ನಾಗನ ಪದಗಳು ಮೊದಲಾದ ಕೃತಿಗಳನ್ನು ಇವರು ರಚಿಸಿದ್ದಾರೆ. ೧೯೭೬ರಲ್ಲಿ ದೆಹಲಿಯಲ್ಲಿ ನಡೆದ ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೩-೩-೧೯೭೯ರಲ್ಲಿ ಇಹಲೋಕ ತ್ಯಜಿಸಿದರು. ಈ ಕವನವನ್ನು ಇವರ ಜನಪ್ರಿಯ ಭಾವಗೀತೆಗಳ ಸಂಕಲನವಾದ ಗೀತಾಂಜಲಿಯಿಂದ ಆರಿಸಲಾಗಿದೆ.



### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ರಾಜ ಜಲಪಾತವು ಏನನ್ನು ಸ್ಪಷ್ಟಪಡಿಸುತ್ತದೆ?
2. ರೋರಿರ್ ಮಾಡುವ ಸದ್ದು ಯಾವುದರ ನೆನಪು ತರಿಸುತ್ತದೆ?
3. ರಾಕೀಟ್ ಹೇಗೆ ಬರುತ್ತದೆ?

### ಸಾಲನ್ನು ಗುರುತಿಸಿರಿ.

ಕೆಳಗೆ ಕೊಡಲಾದ ವಾಕ್ಯಕ್ಕೆ ಸಮಾನ ಆಶಯವಿರುವ ಸಾಲನ್ನು ಕವನದಿಂದ ಆರಿಸಿ ಬರೆಯಿರಿ.

1. ಅದೋ ಅದೋ ರಾಜಾ, ರೋರಿಕ್, ರಾಕೇಟು ಆಮೇಲೆ ಲೇಡಿ.
2. ಬಡವನನ್ನು ತಿನ್ನುವ ಶ್ರೀಮಂತನು ಬಳುಕುತ್ತ ಬಂದ ಹಾಗೆ ಇದೆ.
3. ಬಡವನ ಬಾಯಿಗೆ ಬೀಗ ಹಾಕಿ.
4. ಉಕ್ಕಿ ಬರುವ ಹಾಗೆ ಎದ್ದು ಬರುತ್ತದೆ.

### ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಸಾಲುಗಳ ಸ್ವಾರಸ್ಯ ಬರೆಯಿರಿ.

ನಷ್ಟಕ್ ಸಿಕ್ಕಿ ನರಳೋನ್ಗೇನೆ
ಮೇಲಿಂದ ಮೇಲೆ ಕಸ್ಟ

### ಪತ್ರ ಬರೆಯಿರಿ

ನೀವೂ ಪ್ರವಾಸ ಹೋಗಿರುವಿರಲ್ಲವೆ. ನಿಮ್ಮ ಯಾವುದಾದರೊಂದು ಪ್ರವಾಸದ ಅನುಭವವನ್ನು ವಿವರಿಸಿ ಸ್ನೇಹಿತನಿಗೆ/ಳಿಗೆ ಪತ್ರ ಬರೆಯಿರಿ.

### ಸ್ಥಳ ಪರಿಚಯ ಬರೆಯಿರಿ

ನಿಮ್ಮ ಊರಿನ ಯಾವುದಾದರೊಂದು ಪ್ರೇಕ್ಷಣೀಯ ಸ್ಥಳದ ಮಾಹಿತಿಯನ್ನು ಪ್ರವಾಸಿಗರಿಗೆ ನೀಡಲು ಅನುಕೂಲವಾಗುವ ರೀತಿಯಲ್ಲಿ ಸ್ಥಳ ಪರಿಚಯವನ್ನು ವಿವರವಾಗಿ ಬರೆಯಿರಿ.

2

# ‘ಕಿಮ್’ನ ಸಾಹಸಗಳು

ರಡ್ಯಾರ್ಡ್ ಕಿಪ್ಲಿಂಗ್‌ರವರ ‘ಕಿಮ್’ನ ಕತೆಯಲ್ಲಿ ಸ್ಕೌಟುಗಳು ಏನು ಮಾಡಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆಯು ಸಿಗುತ್ತದೆ.

‘ಕಿಮ್’ನ ಪೂರ್ತಿ ಹೆಸರು ‘ಕಿಮ್ ಬಾಲ್ ಓಹ್ಯಾರಾ’. ಅವನು ಭಾರತದಲ್ಲಿದ್ದ ಐರಿಷ್ ರೆಜಿಮೆಂಟ್ ಒಂದರ ಸಾರ್ಜೆಂಟ್‌ರವರ ಮಗನಾಗಿದ್ದನು. ಅವನಿನ್ನೂ ಮಗುವಾಗಿದ್ದಾಗಲೇ ಅವನ ತಂದೆ ತಾಯಿಗಳು ತೀರಿಕೊಂಡಿದ್ದರು. ಆ ಕಾರಣ ಸೋದರತ್ತೆಯ ಆಶ್ರಯದಲ್ಲಿ ಆ ಮಗುವು ಬೆಳೆಯಿತು.

ಅವನ ಜೊತೆಯ ಆಟಗಾರರೆಲ್ಲರೂ ಭಾರತದ ಬಾಲಕರೇ ಆದ್ದರಿಂದ ಅವನು ಅವರ ಭಾಷೆಯನ್ನು ಮಾತನಾಡುವುದನ್ನೂ ಅವರ ರೀತಿನೀತಿಗಳನ್ನೂ ಕಲಿತನು. ಅವನು ವಯಸ್ಸಾದ ಒಬ್ಬ ಅಲೆಮಾರಿ ಸನ್ಯಾಸಿಯೊಡನೆ ನಿಕಟವಾದ ಸ್ನೇಹವನ್ನು ಬೆಳೆಸಿ ಅವನ ಜೊತೆಯಲ್ಲಿ ಉತ್ತರ ಭಾರತದಲ್ಲೆಲ್ಲಾ ಓಡಾಡಿದನು.

ಒಂದು ದಿನ ತನ್ನ ತಂದೆಯು ಸಾರ್ಜೆಂಟ್ ಆಗಿದ್ದ ಸೈನ್ಯ ತುಕಡಿಯು ಪಥಚಲನದಲ್ಲಿರುವುದನ್ನು ಅಕಸ್ಮಾತ್ತಾಗಿ ಕಂಡನು. ಅವರ ಶಿಬಿರಕ್ಕೆ ಭೇಟಿಯಿತ್ತನು. ದುರದೃಷ್ಟವಶಾತ್ ಕಳ್ಳನೆಂಬ ಗುಮಾನಿಯ ಮೇಲೆ ಅವನನ್ನು ಸೆರೆಹಿಡಿದರು. ಅವನಲ್ಲಿ ಜನನ ಪ್ರಮಾಣ ಪತ್ರ ಮತ್ತು ಇತರ ದಾಖಲೆಗಳು ದೊರಕಿದುದರಿಂದ ಅವನು ತಮ್ಮಲ್ಲೊಬ್ಬನೆಂಬುದನ್ನು ತಿಳಿದರು. ಅವನ ಪೋಷಣೆಯ ಭಾರವಹಿಸಿ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದರು. ಆದರೆ ರಜೆಯ ಕಾಲದಲ್ಲಿ ಅವನು ಮನೆಗೆ ಹೋದಾಗಲೆಲ್ಲಾ ಭಾರತದ ಬಾಲಕರಂತೆಯೇ ಉಡಿಗೆತೊಡಿಗೆಗಳನ್ನು ಧರಿಸಿ ಅವರಲ್ಲೊಬ್ಬನಾಗಿ ಬೆರೆಯುತ್ತಿದ್ದನು.

ಸ್ವಲ್ಪ ಕಾಲದ ಬಳಿಕ ಅವನಿಗೆ ಲರ್ಗನ್ ಎಂಬವರೊಡನೆ ಪರಿಚಯ ಆಯಿತು. ಲರ್ಗನ್‌ರವರು ಹಳೆಯ ಆಭರಣಗಳು ಮತ್ತು ಅಪೂರ್ವ ವಸ್ತುಗಳ ಮಾರಾಟಗಾರರಾಗಿದ್ದರು. ಅವರಿಗೆ ಭಾರತೀಯರ ಬಗ್ಗೆ ತಿಳುವಳಿಕೆಯಿದ್ದ ಕಾರಣ ಸರಕಾರದ ಗೂಢಚಾರ ಇಲಾಖೆಯಲ್ಲಿ ಸಹ ಕೆಲಸ ಮಾಡುತ್ತಿದ್ದರು.

ಇಂಡಿಯನ್ನರ ಆಚಾರ, ವಿಚಾರ, ವ್ಯವಹಾರಗಳ ಬಗೆಗೆ ಕಿಮ್‌ಗೆ ಒಳ್ಳೆಯ ಪರಿಜ್ಞಾನವಿರುವುದನ್ನು ಕಂಡ ಅವರು, ಅವನು ಸರ್ಕಾರದ ಗೂಢಚಾರ ಇಲಾಖೆಗೆ ಒಬ್ಬ ಉಪಯುಕ್ತ ನಿಯೋಗಿ (Agent) ಆಗುತ್ತಾನೆಂಬುದನ್ನು ಮನಗಂಡರು. ಸೂಕ್ಷ್ಮ ವಿಷಯಗಳನ್ನು ಗ್ರಹಿಸುವ ಮತ್ತು ಜ್ಞಾಪಕದಲ್ಲಿಟ್ಟುಕೊಳ್ಳುವ ಬಗ್ಗೆ 'ಕಿಮ್'ಗೆ ತರಬೇತಿ ನೀಡಿದರು. ಇದು ಸ್ಕೌಟ್ ಶಿಕ್ಷಣದಲ್ಲಿ ಬಹುಮುಖ್ಯ ಅಂಶವಾಗಿದೆ.

ಮೊದಲಿಗೆ ಲರ್ಗನ್‌ರವರು ಒಂದು ಹರಿವಾಣದಲ್ಲಿ (Tray) ವಿವಿಧ ರೀತಿಯ ಬೆಲೆಬಾಳುವ ಮುತ್ತು ರತ್ನಗಳನ್ನು ತೋರಿಸುತ್ತಿದ್ದರು. ಒಂದು ನಿಮಿಷಕಾಲ ಅವನ್ನು ನೋಡಿದ ಬಳಿಕ ಬಟ್ಟೆಯಿಂದ ಮುಚ್ಚಿ ಎಷ್ಟು ಹರಳುಗಳಿದ್ದುವು? ಅವು ಯಾವ ರೀತಿಯವು? ಮುಂತಾದ ವಿವರಗಳನ್ನು ಕೇಳುತ್ತಿದ್ದರು. ಮೊದಲಿಗೆ ಕಿಮ್ ಕೆಲವನ್ನು ಮಾತ್ರ ನೆನಪಿಟ್ಟುಕೊಳ್ಳಬಲ್ಲವನಾಗಿದ್ದರೂ ಅವುಗಳನ್ನು ನಿಶ್ಚಿತವಾಗಿ ವಿವರಿಸಲು ಬರುತ್ತಿರಲಿಲ್ಲ. ಕ್ರಮೇಣ ಸ್ವಲ್ಪ ಅಭ್ಯಾಸವಾದಂತೆ ಎಲ್ಲವನ್ನೂ ನೆನಪಿನಲ್ಲಿಟ್ಟು ಕೊಳ್ಳುವಂತಾದನು. ಅದೇ ರೀತಿಯಲ್ಲಿ ಅವನಿಗೆ ತೋರಿಸುತ್ತಿದ್ದ ಇತರ ವಸ್ತುಗಳ ಬಗ್ಗೆಯೂ ಜಾಗರೂಕನಾದನು.

ಕೊನೆಗೆ ಇನ್ನೂ ಇತರ ರೀತಿಯ ತರಬೇತಿಯನ್ನು ನೀಡಿದ ಬಳಿಕ ಕಿಮ್‌ನನ್ನು ಗೂಢಚಾರ ಇಲಾಖೆಯ ಸದಸ್ಯನನ್ನಾಗಿ ಮಾಡಲಾಯಿತು ಮತ್ತು ಅವನಿಗೆ ರಹಸ್ಯ ಗುರುತಾಗಿ ಕೊರಳಿನ ಸುತ್ತಲೂ ಧರಿಸುವ ಲಾಕೆಟ್‌ನ್ನು ಕೊಡಲಾಯಿತು. ಅಲ್ಲದೆ ಅವನು ಆ ರಹಸ್ಯ ಸೇವೆಗೆ ಸೇರಿದವನೆಂದು ಅರ್ಥ ಬರುವ ವಿಶೇಷ ರೀತಿಯಲ್ಲಿ ಹೇಳುವ ವಾಕ್ಯವನ್ನೂ ನೀಡಲಾಯಿತು.

ಒಮ್ಮೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕಿಮ್ ತಲೆ ಮತ್ತು ತೋಳುಗಳ ಮೇಲೆ ಹರಿತವಾದ ಗಾಯಗಳಾಗಿರುವ ಒಬ್ಬ ವ್ಯಕ್ತಿಯನ್ನು ಕಂಡನು. ಆ ವ್ಯಕ್ತಿಯು ತಾನು ಸ್ಟೇಷನ್‌ಗೆ ಬರುವಾಗ ಗಾಡಿಯಿಂದ ಬಿದ್ದುದಾಗಿ ಇತರರಿಗೆ ವಿವರಿಸುತ್ತಿದ್ದನು. ಒಳ್ಳೆಯ ಸ್ಕೌಟ್ ಆದ ಕಿಮ್ ಆ ಗಾಯಗಳು ಹರಿತವಾದ ಆಯುಧಗಳಿಂದ ಆದ ಗಾಯಗಳೆಂದೂ ಗಾಡಿಯಿಂದ ಬಿದ್ದಾಗ ಆಗುವ ತರಚಿದ ಗಾಯಗಳಲ್ಲವೆಂದೂ ಮನಗಂಡು ಅವನನ್ನು ನಂಬಲಿಲ್ಲ.

ಆ ವ್ಯಕ್ತಿಯು ತಲೆಯ ಮೇಲೆ ಬ್ಯಾಂಡೇಜ್ ಕಟ್ಟಿಕೊಳ್ಳುವಾಗ ತನ್ನದೇ ರೀತಿಯ ಲಾಕೆಟ್ಟನ್ನು ಧರಿಸಿರುವುದನ್ನು ಗಮನಿಸಿದನು. ಕಿಮ್ ತನ್ನ ಲಾಕೆಟ್ಟನ್ನು ಅವನಿಗೆ ತೋರಿಸಿದನು. ಕೂಡಲೇ ಅವನು ತನ್ನ ಸಂಭಾಷಣೆಯಲ್ಲಿ ರಹಸ್ಯಪದಗಳನ್ನು ಉಪಯೋಗಿಸಲು ಪ್ರಾರಂಭಿಸಿದನು. ಕಿಮ್ ಸಹ ಸೂಕ್ತರೀತಿಯಲ್ಲಿ ಉತ್ತರಿಸಿದನು. ಆ ಆಗಂತುಕನು, ಆಗ ಕಿಮ್‌ನನ್ನು ಒಂದು ಮೂಲೆಗೆ ಕರೆದೊಯ್ದು ತಾನು ರಹಸ್ಯವನ್ನು ಭೇದಿಸುವ ಕೆಲಸವೊಂದರಲ್ಲಿ ತೊಡಗಿರುವುದಾಗಿಯೂ ಅವನ್ನು ಗುರುತಿಸಿದ ಶತ್ರುಗಳು ಸಾಯುವ ಹಾಗೆ ಹೊಡೆದುದಾಗಿಯೂ ತಿಳಿಸಿದನು. ಅವರಿಗೆ ಬಹುಶಃ ತಾನು ಆ ರೈಲಿನಲ್ಲಿರುವ ವಿಷಯವು ತಿಳಿದಿರಬಹುದೆಂದೂ ಅವರು ತಾನು

ಬರುತ್ತಿರುವ ವಿಷಯವನ್ನು ತಮ್ಮ ಸ್ನೇಹಿತರಿಗೆ ಟೆಲಿಗ್ರಾಂ ಮಾಡಬಹುದೆಂದೂ ಹೇಳಿದನು. ಶತ್ರುವಿನ ಕೈಗೆ ಸಿಗದಂತೆ ತಾನು ಹೇಗೆ ಸಂಬಂಧಿಸಿದ ಪೋಲಿಸ್ ಅಧಿಕಾರಿಗೆ ಸುದ್ದಿಯನ್ನು ಮುಟ್ಟಿಸಬೇಕೆಂಬುದೇ ತನ್ನ ಸಮಸ್ಯೆಯೆಂದೂ ತಿಳಿಸಿದನು. ಕಿಮ್ ಅದಕ್ಕೆ ಪರಿಹಾರವನ್ನು ಸೂಚಿಸಿದನು.



ಕಿಮ್ ಆ ವ್ಯಕ್ತಿಗೆ ತಿರುಕನ ವೇಷವನ್ನು ಹಾಕಲು ಪ್ರಾರಂಭಿಸಿದನು. ಗೋಧಿ ಹಿಟ್ಟು ಮತ್ತು ಚುಂಗಾಣಿಯಿಂದ ತೆಗೆದ ಬೂದಿಯನ್ನು ಬೆರೆಸಿದನು. ತನ್ನ ಸ್ನೇಹಿತನ ಮೈಮೇಲೆಲ್ಲಾ ಈ ಮಿಶ್ರಣವನ್ನು ಹಚ್ಚಿದನು. ಗಾಯಗಳು ಕಾಣದಂತೆ ಅವುಗಳ ಮೇಲೂ ಮಿಶ್ರಣವನ್ನು ಬಳಿದನು. ಕೊನೆಯದಾಗಿ ತನ್ನ ಬಳಿಯಿದ್ದ ಪುಟ್ಟ ಬಣ್ಣದ ಪೆಟ್ಟಿಗೆಯನ್ನುಪಯೋಗಿಸಿ ಅವನ ಹಣೆಯ ಮೇಲೆ ಮತ್ತು ಮುಖದ ಮೇಲೆ ಸೂಕ್ತವಾದ ಬಣ್ಣದ ಪಟ್ಟಿಯನ್ನು ಹಾಕಿದನು. ಅವನ ಕೂದಲನ್ನು ಧೂಳಿನಿಂದ ಮುಚ್ಚಿ ಭಿಕ್ಷುಕನ ಕೂದಲಿನಂತೆ ಒರಟಾಗಿ ಬೊಂತೆಬೊಂತೆಯಾಗಿ ಕಾಣುವಂತೆ ಮಾಡಿದನು. ಇದರಿಂದ ಆಗಂತುಕನ ತಾಯಿಗೂ ಅವನ ಗುರುತು ಸಿಗದಂತಾಯಿತು.

ಸ್ವಲ್ಪ ಕಾಲದ ಬಳಿಕ ಅವರು ಒಂದು ರೈಲ್ವೇ ಸ್ಟೇಷನ್ ಮುಟ್ಟಿದರು. ಅದರ ಪ್ಲಾಟ್‌ಫಾರಂನಲ್ಲಿ ಅವರು ಸುದ್ದಿ ಮುಟ್ಟಿಸಬೇಕಾದ ಪೋಲಿಸ್ ಅಧಿಕಾರಿಯನ್ನು ಕಂಡರು. ನಕಲಿ ಭಿಕ್ಷುಕನು ಬೇಕೆಂದೇ ಆ ಅಧಿಕಾರಿಗೆ ಢಿಕ್ಕಿ ಹೊಡೆದು ಆತನಿಂದ ಇಂಗ್ಲಿಷ್‌ನಲ್ಲಿ ಬೈಸಿಕೊಂಡನು. ಭಿಕ್ಷುಕನೂ ಸಹ ರಹಸ್ಯಗಳನ್ನು ಬೆರೆಸಿ ಬಳಸಿ ಆ ಅಧಿಕಾರಿಗೆ ಉತ್ತರಿಸಿ ಬೈದನು. ರಹಸ್ಯ ಪದಗಳ ಆಧಾರದಿಂದ ಆ ಭಿಕ್ಷುಕನನ್ನು ಗುರುತಿಸಿದ ಪೋಲಿಸ್ ಅಧಿಕಾರಿಯು ದಸ್ತಗಿರಿಯ ನೆಪದಲ್ಲಿ ಅವನನ್ನು ಪೋಲಿಸ್ ಠಾಣೆಗೆ ಕರೆದೊಯ್ದು ನಿಧಾನವಾಗಿ ಮಾತನಾಡಿ ವರದಿಯನ್ನು ಪಡೆದನು.

ಮುಂದೆ ಕಿಮ್‌ಗೆ ಇಲಾಖೆಯ ಇನ್ನೊಬ್ಬ ನಿಯೋಗಿಯೊಡನೆ ಪರಿಚಯವಾಯಿತು. ಬೇಹುಗಾರರಾಗಿ ಹೊಂಚುಹಾಕುತ್ತಿದ್ದ ಇಬ್ಬರು ಅಧಿಕಾರಗಳನ್ನು ಸೆರೆಹಿಡಿಯಲು ಅವನಿಗೆ ಸಾಕಷ್ಟು ಸಹಾಯ ಮಾಡಿದನು.

ಕಿಮ್‌ನ ಈ ರೀತಿಯ ಅನೇಕ ಸಾಹಸಗಳನ್ನು ಓದುವುದು ಸಾರ್ಥಕವಾದೀತು. ಏಕೆಂದರೆ ಸಾಕಷ್ಟು ಶಿಕ್ಷಣ ಪಡೆದಿದ್ದರೆ, ಬುದ್ಧಿ ಚತುರತೆಯಿದ್ದರೆ, ತುರ್ತು ಪರಿಸ್ಥಿತಿಯ ವೇಳೆಯಲ್ಲಿ ಸ್ಕೌಟುಗಳು ಹೇಗೆ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಬಹುದು ಎಂಬ ಬಗ್ಗೆ ನಿದರ್ಶನಗಳನ್ನು ಕಾಣಬಹುದು.



## ಬೇಡನ್ ಪವೆಲ್

ಬಿ.ಪಿ. ಎಂದೇ ವಿಶ್ವವಿಖ್ಯಾತರಾದ ಬೇಡನ್ ಪವೆಲರ ಪೂರ್ಣ ಹೆಸರು ರೋಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪವೆಲ್. ಅವರ ತಂದೆ ರೆವರೆಂಡ್ ಎಚ್.ಜಿ. ಪವೆಲ್. ಮತ್ತು ತಾಯಿ ಹೆನ್ರಿಟಾ ಸ್ಮಿತ್ ಗ್ರೇಸ್. ಬೇಡನ್ ಪವೆಲರು 1857 ಫೆಬ್ರವರಿ 22ರಂದು ಇಂಗ್ಲೇಂಡಿನ ಲಂಡನ್ ನಗರದಲ್ಲಿನ ಸ್ಟೇನ್‌ಪೋಲ್ ಎಂಬಲ್ಲಿ ಜನಿಸಿದರು. ಬ್ರಿಟೀಷ್ ಸೇನೆಯ ಮಹಾದಂಡನಾಯಕನ ಹುದ್ದೆಯ ವರೆಗೆ ತಲುಪಿದ ಅವರು 1910ರಲ್ಲಿ ನಿವೃತ್ತರಾದರು. ವಿಶ್ವದ ಮೂಲೆಮೂಲೆಗಳಲ್ಲಿ ಹರಡಿರುವ ಸ್ಕೌಟಿಂಗ್ ಎಂಬ ಚಳವಳಿಯನ್ನು ಆರಂಭಿಸಿದ ಬೇಡನ್ ಪವೆಲರು ಎಯ್ಡ್ಸ್ ಟು ಸ್ಕೌಟ್‌ಮಾಸ್ಟರ್‌ಶಿಪ್ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಸ್ಕೌಟುಗಳಿಗೆ ಉಪಯುಕ್ತವಾದ ಎಲ್ಲ ಮಾಹಿತಿಗಳಿರುವ ಬಾಲಕರಿಗಾಗಿ ಸ್ಕೌಟಿಂಗ್ ಪುಸ್ತಕದಿಂದ ಕಿಮ್‌ನ ಸಾಹಸ ಪಾಠವನ್ನು ಆರಿಸಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕಿಮ್ ಸೇನಾತುಕಡಿಯನ್ನು ಪ್ರವೇಶಿಸಿದಾಗ ಏನಾಯಿತು?
2. ಲರ್ಗನ್‌ರವರು ಕಿಮ್‌ನಿಗೆ ಹೇಗೆ ತರಬೇತಿ ನೀಡಿದರು?
3. ಕಿಮ್ ಗಾಯಾಳುವಾದ ಗೂಢಚಾರನಿಗೆ ತಿರುಕನ ವೇಷ ಹಾಕಿದುದು ಹೇಗೆ?
4. ಕಿಮ್‌ನ ಸಾಹಸಗಳನ್ನು ಓದುವುದರಿಂದ ಆಗುವ ಪ್ರಯೋಜನಗಳೇನು?

### ವಾಕ್ಯ ಬರೆಯಿರಿ.

ಕೆಳಗೆ ಕೊಡಲಾದ ಸರಳ ವಾಕ್ಯಗಳನ್ನು ಸಂಯುಕ್ತವಾಕ್ಯಗಳಾಗಿ ಬರೆಯಿರಿ.

1. ಆಗಂತುಕನು ಶೀಘ್ರವಾಗಿ ಮನೆಯ ಒಳಗೆ ಬಂದನು. ತನ್ನ ಪರಿಚಯವನ್ನು ವಿವರವಾಗಿ ತಿಳಿಸಿದನು.
2. ಅಧಿಕಾರಿಗಳು ಸೈನಿಕರ ಡೇರೆಯ ಒಳಗೆ ಬಂದರು. ಸೈನಿಕರ ನಿಸ್ವಾರ್ಥ ಸೇವೆಗಾಗಿ ಅಭಿನಂದನೆ ಸಲ್ಲಿಸಿದರು.
3. ಟಿಕೇಟು ಪರೀಕ್ಷಕರು ರೈಲಿನ ಬೋಗಿಯೊಳಗೆ ಇದ್ದರು. ಅವರನ್ನು ಕಂಡ ಕಳ್ಳನು ಮೆಲ್ಲನೆ ಪಲಾಯನ ಮಾಡಿದನು.

### ಸಂಕ್ಷೇಪಿಸಿ ಬರೆಯಿರಿ.

- ಕಿಮ್‌ನ ಸಾಹಸ ಕಥೆಯನ್ನು ಸಂಕ್ಷೇಪಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

### ಕಥೆ ಬರೆಯಿರಿ.

- ಕಿಮ್‌ನಂತೆಯೇ ಸಾಹಸಗಳನ್ನು ಮಾಡಿದ ವ್ಯಕ್ತಿಗಳ ಕುರಿತಾಗಿರುವ ಕಥೆಗಳನ್ನು ಸಂಗ್ರಹಿಸಿ ಬರೆಯಿರಿ.

3

# ಸಾಹುಕಾರ ಕುಞ್ಞಿಮೋನು

ನಮ್ಮ ಊರು ಬಂಟ್ರ, ನೆಕ್ಕಿಲಾಡಿ, ಕಡಬ, ಕೊಂಬಾರು ಸುಬ್ರಹ್ಮಣ್ಯದ ತನಕ ಹರಡಿದೆ. ಕುಞ್ಞಿಮೋನು ಸಾಹುಕಾರರು ಸತ್ತು ಹತ್ತಾರು ವರ್ಷಗಳಾದರೂ ಅವರದು ಮರೆಯುವ ವ್ಯಕ್ತಿತ್ವವಲ್ಲ. ಅವರನ್ನು ಪೋಕ್ರಿ ಕುಞ್ಞಿಮೋನುವೆಂದೇ ಹಿಂದಿನಿಂದ ಕರೆಯುವುದು ರೂಢಿ. ಗುತ್ತು ಬೀಡಿನವರ ಕೋಣಗಳನ್ನು ಕಂಬಳಕ್ಕೆ ಬಿಡಬೇಕೇ? ಕುಞ್ಞಿಮೋನು ಬ್ಯಾರಿಯು ಬರಬೇಕು. ಬ್ಯಾರಿಯು ಕನೆಹಲಗೆಯಲ್ಲಿ ನಿಂತರೆ ಕೋಣಗಳು ಏಳೂವರೆ ಕೋಲಿನ ನಿಶಾನಿಗೆ ನೀರು ಹಾಕದಿದ್ದರೂ ಕೊನೆಗೆ ಬಹುಮಾನ ಅವಕ್ಕೇ. ಸಾಹುಕಾರರ ಮಾತಿನ ಧಾಟಿಯಂತಹದು. ಕೋಣ ಓಡಿದರೆ ಸಾಲದು, ಕೋಣಗಳೊಂದಿಗೆ ಹುರುಳಿ, ಹುರುಳಿಯೊಂದಿಗೆ ಕೋಣನ ಮೇಲೆ ಬೆತ್ತ, ಹಿಂದಿನಿಂದ ಕನೆಹಲಗೆಯಲ್ಲಿ ನಿಂತವನ ಉರಾಲಿನೊಂದಿಗೆ ಮಂಜೊಟ್ಟಿ ಇಳಿದು ನಾಲಗೆಯೂ ಓಡಿದರೆ ಕಂಬಳದ ಕೋಣ ಓಡಿದಂತಾಗುವುದು. ಇಲ್ಲವಾದರೆ ಕೋಣಗಳು ಓಡಿದರೂ ಪ್ರಯೋಜನವಿಲ್ಲ. ತೀಡಿದರೆ ಎಣ್ಣೆ ಬರುವಂತಹ ಮಾಂಸಖಂಡದಿಂದ ತುಂಬಿದ ಕಪ್ಪಾದ ದೇಹ, ಹುರಿಮೀಸೆ, ಕಾಲಕಣ್ಣಿನ ವರೆಗೆ ಇಳಿಬಿಟ್ಟ ನಿಲುವಂಗಿ, ಮೈಗೊಂದು ಕೆಂಪುಸೇಲೆ. ಈ ವ್ಯಕ್ತಿಯನ್ನು ದೂರದಿಂದ ಕಂಡರೂ "ಸಲಾಮು ಸಾಹುಕಾರ್ರೇ" ಎನ್ನದವರು ಆ ಊರಲ್ಲಿ ಅತಿವಿರಳ. ಊರಿನ ಯಾವ ಪಂಚಾಯತಿಕೆಯೇ ಇರಲಿ ಗುತ್ತಿನ ಗುರಿಕಾರರು ಕುಞ್ಞಿಮೋನು ಸಾಹುಕಾರರ ಕೂಡೆ ವಿಷಯ ತಿಳಿಯದೆ ತೀರ್ಪುಕೊಡುವಂತಿಲ್ಲ. ಕಾರಣ ಒಂದಲ್ಲ ಒಂದು ರೀತಿಯಿಂದ ಈ ಪಂಚಾಯತಿಕೆಯ ಒಳಗುಟ್ಟು ಕುಞ್ಞಿಮೋನು ಅರಿತುದೇ. ಯಾರ ಮನೆಯಲ್ಲಿ ಯಾವುದು ಬೆಂದಿದೆ, ಯಾವುದು ಹಸಿ, ಬಿಸಿ ಎಂದು ಬಂಟ್ರ, ನೆಕ್ಕಿಲಾಡಿ ಗ್ರಾಮಗಳಲ್ಲಿ ಕುಞ್ಞಿಮೋನು ಅರಿತಿಲ್ಲವಾದರೆ ಅಂತಹುದು ನಡೆದಿಲ್ಲವೆಂದು ಅರ್ಥ. ಆ ತುಂಬುಮೈಕಟ್ಟಿನ ನೀಳ ದೇಹಕ್ಕೆ ತಕ್ಕುದಾದ ಕಂಚುಕಟ್ಟಿದ ಆಳುಗಾತ್ರದ ನಾಗಬೆತ್ತವನ್ನು ಹಿಡಿದು ಕುಞ್ಞಿಮೋನು ಸಾಹುಕಾರ ಎದುರು ಬರುತ್ತಿದ್ದರೆ ನೋಡುವ ಕಣ್ಣಿಗೆ ಹಬ್ಬ.

ಇವರಿಗೆ ಹೊಂತಕಾರಿ ಯುವಕರನ್ನು ಉಣ್ಣಲು, ತಿನ್ನಲು ಕೊಟ್ಟು ಮನೆಯಲ್ಲಿ ಸಾಕುವುದೊಂದು ಮೋಜಿನ ಹವ್ಯಾಸ. ಕೊನೆಗೆ ಅವರು ಸಾಕಿದವರೇ ಅವರಿಗೆ ಕೈಕೊಟ್ಟ ಪ್ರಸಂಗಗಳು ಹಲವು. "ನನ್ನ ಅನ್ನವನ್ನು ತಿಂದು ನನಗೇ ಎರಡೆಣಿಸಿದೆಯಾ ಮಗನೇ" ಎಂಬ ನಾಣ್ನುಡಿಯು ಕುಞ್ಞಿಮೋನು ಸಾಹುಕಾರರ ನುಡಿಮುತ್ತುಗಳು. ಸಾಹುಕಾರರ ಮಾತನ್ನು ಕೇಳುತ್ತಾ ಕುಳಿತರೆ ಗತಿಸಿದ ಕಥೆಯು ಕಣ್ಣೆದುರು ನಡೆಯುವಂತೆ ತೋರುವ ಮಾತುಗಾರಿಕೆ. ದಿವಂಗತ ಬೆಳ್ಳಿಪ್ಪಾಡಿ ಮಾಯಿಲ ರೈಗಳ ಮತ್ತು ನಡುಮುಗೇರುಗುತ್ತು ಅಮ್ಮು ಶೆಟ್ಟರ ಸಾಹಸದ ವೀರಕತೆಗಳನ್ನು, ಪಂಚಾಯತಿಕೆಯ ಮೋಡಿಯನ್ನು, ಇವರನ್ನು ಎತ್ತಿಕಟ್ಟಿ ಅವರು ನ್ಯಾಯನಿಷ್ಠರು ಎಂದು ಸಾಧಿಸುವ ಮಾತುಗಾರಿಕೆಯನ್ನು ಕುಞ್ಞಿಮೋನು ಬ್ಯಾರಿಯ ಬಾಯಿಯಿಂದ ಕೇಳುವುದೆಂದರೆ ಕೇಳುವವರ ಪಾಲಿಗೆ ಅದೊಂದು ಉತ್ಸವ. ಕೈ ಹಿಡಿದವಳ ವಿಚಾರವಲ್ಲದೆ ಬೇರೆ ಯಾವ ಹೆಂಗಸರ ವಿಚಾರದಲ್ಲಿ ಯಾರೇ ಆಗಿರಲಿ, ಅಪಚಾರದ ಮಾತನ್ನು ಆಡಿದನೆಂದರೆ "ಒರಿ ಅಡಿ" (ಒಂದೇಟು) ತಿಂದು ತನ್ನ ದವಡೆಯಲ್ಲಿ ಅವರ ಐದು ಬೆರಳಚ್ಚನ್ನೂ ಆತ ಕಾಣದೆ ಹೋಗಲಾರ. ತನ್ನ ಅರುವತ್ತನೆಯ ವಯಸ್ಸಿನಲ್ಲಿಯೂ ನಮ್ಮ ಇಪ್ಪತ್ತು-ಇಪ್ಪತ್ತೆರಡು ವಯಸ್ಸನ್ನು ನಾಚಿಸುವ ರೀತಿ ಕುಞ್ಞಿಮೋನು ಸಾಹುಕಾರರದ್ದು. ಎಳನೀರುಗಳನ್ನು ಕೆತ್ತಿ ಬಾಯಿಗಿಟ್ಟು, ದಮ್ಮು ಬಿಗಿದು, ಒಂದೇ ಗುಟುಕಿಗೆ ಕುಡಿದು ತೇಗಿ, ಮೈ ಬೆವರು ಒರಸಿಕೊಳ್ಳುವುದನ್ನು ನೋಡುವುದೇ ನೆನೆದವರಿಗೊಂದು ಮೋಜಿನ ಪ್ರಸಂಗ.

ಆದರೆ ಹೊಟ್ಟೆ ತುಂಬಿಸುವ ಪ್ರಮೇಯ ಬಂದಾಗ ಈ ರೀತಿರಿವಾಜುಗಳನ್ನು ಕೈಬಿಡುವ ಪ್ರಸಂಗವೂ ಬರುತ್ತಿತ್ತು. ಶಿಕಾರಿಗೆ ಹೋದಲ್ಲಿ ಹಂಡೆಗಟ್ಟಲೆ ಮಾಂಸ ಬೇಯಿಸಬೇಕಿದ್ದರೆ ಅದಕ್ಕೆ ಬೇಕಾದ ಸಾಂಬಾರ, ತೆಂಗಿನಕಾಯಿ, ತುಪ್ಪ, ಉಪ್ಪು, ಹುಳಿ, ಮೆಣಸು, ಅಕ್ಕಿ, ಬೆಳಗ್ಗಿನ ಕಾಫಿಗೆ ಬೇಕಾದ ಫಲಹಾರ, ಹಾಲು ವಗೈರೆಗಳನ್ನು ಹೆದರಿಸಿ ಪುಕ್ಕಟೆಯಾಗಿಯೇ ಪಡೆಯುವಲ್ಲಿ ಧರ್ಮಶಾಸ್ತ್ರವನ್ನು ಮೀರಿದ ಸಂದರ್ಭಗಳು ಹಲವಾರು. ಅದು ತಪ್ಪಲ್ಲವೆಂದು ಅವರ ಸಮರ್ಥನೆ. ನಾವು ಆ ಊರಿಗೆ ಬೇಟೆಗೆ ಹೋಗುವುದು ಊರವರ ಬೆಳೆರಕ್ಷಣೆಗಲ್ಲವೇ? ನಾವು ಬೇಟೆಗೆ ಹೊರಟೆವೆಂದರೆ ಸಾಹುಕಾರರನ್ನು ಆಹ್ವಾನಿಸದಿದ್ದರೂ ಅವರು ರೆಡಿ. ಇವರು ಬಂದರೆ ನಾನು ದುರ್ಜನನಾಗದೆ ನಮಗೆ ಬೇಕುಬೇಕಾದ ಸಾಮಾನುಗಳನ್ನು ಪುಕ್ಕಟೆ ಸರಬರಾಜು ಮಾಡುವ ಬೇರೊಂದು ವ್ಯಕ್ತಿ ಮತ್ತಾರು! ಆದ್ದರಿಂದ ನನಗೂ ಸಾಹುಕಾರರನ್ನು ಬಿಟ್ಟು ಬೇಟೆಗೆ ಹೋಗುವುದೆಂದರೆ ಅಷ್ಟಕಷ್ಟೇ.

ಸುಬ್ರಹ್ಮಣ್ಯ ಜಾತ್ರೆಯ ಸಮಯ ಹುಣ್ಣಿಮೆಯಂದು ನಾವು ಕುಲ್ಕುಂದಕ್ಕೆ ಹೋದವರು ಜಾನುವಾರು ಮೇಲೆ ಹತ್ತುವ ದಿವಸ ಅಮವಾಸ್ಯೆಯಂದು ಸರ್ಚ್‌ಲೈಟ್

ಶಿಕಾರಿಗೆ ಹೊರಡುವುದೆಂದು ನಿರ್ಣಯ ಮಾಡಿದೆವು. ಹತ್ತು-ಹದಿನೈದು ದಿನ ಮೋಡದೆಡೆಯ ಉರಿಬಿಸಿಲಿನಲ್ಲಿ ತಿರುಗಾಡಿ, ಕೆಸರು ತುಳಿದು ಸಪ್ಪೆ ಊಟಮಾಡಿದವರಿಗೆ ಬೇಟೆಯೆಂದೊಡನೆ ಎಲ್ಲರ ಬಾಯಲ್ಲೂ ನೀರೂರತೊಡಗಿತು. ನಾನು ಕೋವಿ ಹೆಗಲಿಗೆ ಹಾಕಿ ಲೈಟು ಹಿಡಿದು ಹೊರಟೆನೆಂದರೆ ಬರಿಗೈಯಲ್ಲಿ ಬರುವವನಲ್ಲ ಎಂಬುದು ಆ ಕಾಲಕ್ಕೆ ಗಾದೆಯ ಮಾತೇ ಆಗಿತ್ತು. ರೊಟ್ಟಿ ಮಾಡಿಸಿ, ಸಾಂಬಾರು ಅರೆಯಲು ತಾಯಿ ಅತ್ತಿಗೆಯರಿಗೆ ಹೇಳಿ ಊಟದ ಹೊತ್ತಿಗಾಗುವಾಗ ಮೊಲ, ಬರಿಂಕದ ಮಾತು ಒತ್ತಟ್ಟಿಗಿರಲಿ, ಒಂಟಿ ಹಂದಿಯನ್ನೇ ಹೊಡೆದುಕೊಂಡು ಬಂದ ಪ್ರಸಂಗಗಳು ಹಲವು. ಅಂತೆಯೇ ಏಳೆಂಟು ಜನರು ಹೊರಟುದಾಯಿತು. ತನ್ನ ಕಂಚುಕಟ್ಟದ ದೊಣ್ಣೆಯನ್ನೊಮ್ಮೆ ಬಳಿನಿಂತಿದ್ದ ಸಾಂತಗೌಡನ ಹೆಗಲ ಮೇಲಿನ ಬೈರಾಸವನ್ನು ಎಳೆದು ತಿಕ್ಕಿ ಲಕಲಕಿಸಿ ಎದುರು ಹಲ್ಲಿಲ್ಲದ ಆ ಬೊಚ್ಚುಬಾಯಿಯನ್ನು ತೆರೆದು ಆಕಳಿಸಿ "ಯಾ ಅಲ್ಲಾ" ಎಂದು ಪ್ರಾರ್ಥಿಸಿ ಮುಂದಾಗಿ ಕುಞ್ಞಿಮೋನು ಶಿಕಾರಿಗೆ ಇಳಿದುದಾಯಿತು. ನಾನೂ ಲೈಟುಕಟ್ಟಿ ಹಳೆಗೇಟಿನ ದಾರಿಯಾಗಿ ಕೊಂಬಾರಿಗೆ ಹೋಗುವುದೆಂದು ತೀರ್ಪಿತ್ತಿದ್ದೆ. ಆದರೆ ಆ ಸಮಯ ಸುಬ್ರಹ್ಮಣ್ಯ ಕುಲ್ಕುಂದ ಜನಜಾನುವಾರುಗಳಿಂದಲೂ ಮನುಷ್ಯರ ಗಲಾಟೆಯಿಂದಲೂ ಮೃಗಗಳಿಗೆ ಭೀತಿಯ ಕೇಂದ್ರವಾಗಿದ್ದರೆ ನೆರೆಯ ಕೊಂಬಾರು ಅವುಗಳಿಗೆ ಆಶ್ರಯಸ್ಥಾನವಾಗಿತ್ತು. ಆ ಸಮಯ ಮಾವ ಅಳೇರಿ ಗುಡ್ಡಪ್ಪ ರೈಗಳು ಕೊಂಬಾರಿನಲ್ಲಿ ಹೊಸದಾಗಿ ಆಸ್ತಿಯನ್ನು ಖರೀದಿಸಿ ನೆಲೆಸಿದ ಕಾರಣ ನಾವೆಷ್ಟು ಜನ ಹೋದರೂ ಊಟಕ್ಕೆ ತೊಂದರೆಯಿಲ್ಲ. ಏಳೆಂಟು ದಿನ ನಿಂತು ಕಾರುಬಾರು ನಡೆಸುವುದಿದ್ದರೂ ಸೈಯೇ. ಏನಾದರೂ ತೊಂದರೆ, ಗಲಾಟೆ ಸಂಭವಿಸಿದರೂ ಆ ಊರಿನಲ್ಲಿ ಅವರ ಜನಪ್ರಿಯತೆಯಿಂದ ಅದನ್ನು ನಿವಾರಿಸಿಕೊಳ್ಳುವುದು ದುಸ್ತರವಾದುದಲ್ಲ. ಅತ್ತೆಯಂತೂ ಬಂದವರಿಗೆ ಇದ್ದಷ್ಟು ದಿನ ಬೇಯಿಸಿ ಹಾಕುವ ಧಾರಾಳ ಮನಸ್ಸಿನವರು. ಮತ್ತೇನು ತೊಂದರೆ?

ರಾತ್ರಿ ಮಾರ್ಗದ ಬದಿಗೆ ಲೈಟು ಹಾಕುತ್ತಾ ಎರಡು ಮೂರು ಮೈಲು ಮುಂದೆ ಸಾಗಿರಬಹುದು. ಲೈಟಿಗೆ ಕಣ್ಣುಕೊಟ್ಟು ಎರಡು ಮೊಲಗಳೂ ಒಂದು ಬರಿಂಕವೂ ನನ್ನ ಕೋವಿಗೆ ತುತ್ತಾದವು. ಮನೆಗಿರುವುದು ಏಳೆಂಟು ಫರ್ಲಾಂಗು ಮಾತ್ರ. ಮನೆಯ ಹತ್ತಿರ ದೊಡ್ಡ ಮೃಗವೇನೂ ಕಾಣಸಿಗದು. ಸಿಕ್ಕಿದುದಲ್ಲಿ ದೊಡ್ಡಪಾಲು ಸಾಹುಕಾರರ ಹೊಟ್ಟೆತುಂಬಿಸಲಾಯಿತು. ಕುಲ್ಕುಂದದಲ್ಲಿ ಹತ್ತು ಹದಿನೈದು ದಿನ ಜಾನುವಾರು ಸಂತೆಯಲ್ಲಿ ಓಡಾಡಿ ದಣಿದ ಬೇಸರ. ಒಮ್ಮೆ ಮನೆ ಸೇರಿದರೆ ಸಾಕೆಂಬ ಆತುರ. ಮುಂದೆ ಹೆಜ್ಜೆ ಹಾಕುತ್ತಾ ಬಂದು ಮಾರ್ಗದ ಬದಿಯ ಮಣ್ಣು ಅಗೆದ ಜಾಗಕ್ಕೆ ಲೈಟಿನ ಬೆಳಕು ಚೆಲ್ಲಿದೆ. ಕಾಣುವುದೇನು? ಸಾಣೆಗಿಕ್ಕಿದ ವಜ್ರದ ಹರಳಿನಂತಹ ಕಣ್ಣುಗಳು ಗಿರಗಿರನೆ ತಿರುಗುತ್ತಿವೆ. ಸ್ವಲ್ಪ ಹತ್ತಿರ ಹೋಗೋಣವೆಂದು

ಹತ್ತು ಹೆಜ್ಜೆ ಮುಂದೆ ಬಂದು ನೋಡುತ್ತೇನೆ. ಪ್ರಾಣಿಯೊಂದು ಮತ್ತೊಂದು ಪ್ರಾಣಿಯನ್ನು ಮೆಟ್ಟಿ ಕುಳಿತು ಕತ್ತಿನ ಭಾಗವನ್ನು ಕಿತ್ತು ತಿನ್ನುತ್ತಿದೆ. ನನಗೆ ಅರ್ಥವಾಯ್ತು. ಕೋವಿಯಲ್ಲಿ ಮೊದಲೇ ಇಟ್ಟಿದ್ದ ತೋಟೆಯನ್ನು ತೆಗೆದು ಒಂದನೇ ನಂಬ್ರದ ತೋಟೆಯನ್ನಿಟ್ಟು ತೋರುಬೆರಳಿನಿಂದ ಕೈಯಿಕ್ಕಿ ಮೀಟಿದೆ. 'ಢಮಾರ್' ಎಂದು ಎಡಬಲದ ಕಾಡುಗಳು ಮಾರ್ದನಿ ಕೊಟ್ಟೊಡನೆಯೆ ಲೈಟನ್ನು ತಪ್ಪಿಸಿ ತೋಟೆ ತುಂಬಿಸಲು ಬಗ್ಗಿದೆ. ಎಲ್ಲಿಯಾದರೂ ಹೊಡೆದ ಮೃಗವು ಗತಾಸುವಾದರೆ "ಸತ್ತುದಕ್ಕೆ ಚೂರಿಹಾಕಿದ ಎಂದು ನಕ್ಕಾರು" ಎನ್ನುತ್ತಾ ಕುಞ್ಞಿಮೋನು ಓಡಿ ಚೂರಿ ಬಿಡಿಸಿ ಅಂದಾಜಿಗೆ ಕೈಯಿಕ್ಕಿ ಮೃಗದ ಕತ್ತನ್ನು ಹಿಡಿದು ಔಕಿದ್ದೇ ತಡ. "ಯಾ ಅಲ್ಲಾ... ಇದು ಎಂದ್‌ಡೇ" (ದೇವರೆ ಇದೇನು) ಧನಿಗಳೇ ಬನ್ನಿ. ಇದು ಬರಿಂಕ ಅಲ್ಲ. ಹುಲಿ ನನ್ನ ಕೈ ಹಿಡಿದಿದೆ. ಅಯ್ಯೋ! ಕೈಯನ್ನು ಜಗಿಯುತ್ತಿದೆ. ಎದೆ ಮೆಟ್ಟಿ ಹಿಡಿದಿದೆ. ಸತ್ತೆ ಅಲ್ಲಾ ಸತ್ತೆ" ಎಂಬ ಬೊಬ್ಬೆ, ಆರ್ಭಟೆಯನ್ನು ಕೇಳಿ ಒಡನಿದ್ದವರು ದೂರದೂರ ಹೋದುದಲ್ಲದೆ; ಹುಲಿ ಹಿಡಿದವನನ್ನು ಬರಿಗೈಯಿಂದ ಬಿಡಿಸಲು ಬರುವ ಹುಚ್ಚರಾರು? ನಾನು ಇದನ್ನು ಕೇಳಿದವನೆ ಹೌಹಾರಿದವನಂತೆ ಓಡಿ ಕೋವಿಯನ್ನು ಎದೆಗೆ ಹಾಕಿ ಲೈಟನ್ನು ಕೂಗುಬರುವಲ್ಲಿಗೆ ಹಾಕಿ ನೋಡುತ್ತೇನೆ; ನಾಯಿಹುಲಿಯು ಸಾಹುಕಾರರ ಬಲಗೈಗೆ ಬಾಯಿ ಹಾಕಿ ಒಂದು ಹಿಡಿ ಮಾಂಸವನ್ನು ತೆಗೆದು ಬಿಚ್ಚಿದ ಬಾಯಿಯನ್ನು ಮುಚ್ಚದೆಯೆ ಪ್ರಾಣಬಿಟ್ಟಿದೆ. ಕುಞ್ಞಿಮೋನುವನ್ನು ನಾನು ಎಳೆದು ಈಚೆಗೆ ನಿಲ್ಲಿಸಿದ್ದೇ ತಡ ಆ ನೀಳ ದೇಹವು ಮಾರ್ಗದಲ್ಲಿಯೇ ಕುಸಿದು ಬಿತ್ತು. ಫ್ಲಾಸ್ಕಿನಿಂದ ನೀರು ತೆಗೆದು ಶೈತ್ಯೋಪಚಾರ ಮಾಡಿದ ನಂತರವೇ ಬೋಧ ಬಂದುದು. ಚೇತರಿಸಿದ ಸಾಹುಕಾರರನ್ನು ಇಬ್ಬರು ಮೂವರು ಕೂಡಿ ಆಧರಿಸಿ ನಮ್ಮ ಕೊಂಟಾರಿನ ಮನೆಗೆ ಬಂದು ಮಲಗಿದ್ದ ಅತ್ತೆಯನ್ನೂ, ಮಕ್ಕಳನ್ನೂ ಎಬ್ಬಿಸಿದೆವು. ಎದುರಿಗೆ ಹುಲಿಹಿಡಿದು ರಕ್ತದಿಂದ ತೋಯ್ದು ಈ ರಕ್ಕಸಗಾತ್ರದ ಶರೀರವನ್ನು ಕಂಡು ಅವರೂ ಮೂಕವಿಸ್ಮಿತರಾದರು. ಬೇಗಬೇಗನೆ ಕಾಫಿ ಮಾಡಿರೆಂದು ಹೇಳಿ ಸಾಹುಕಾರರಿಗೆ ಕಾಫಿ ಕುಡಿಸಿ ನೆರೆಯ ಚೋಮಪ್ಪ ಪೂಜಾರಿಯನ್ನು ಬರಮಾಡಿ ಹುಲಿಯ ಪಂಜಿನ ಹೊಡೆತದ, ಹಲ್ಲಿನ ಇರಿತದ ನಂಜೇರದಂತೆ ಔಷಧಿಮಾಡಿಸಿ, ಮೊದಲ ಉಪಚಾರವನ್ನು ಮಾಡಿದೆವು. ಅಷ್ಟರಲ್ಲಿ ಹೊಟ್ಟೆಯು ಹಸಿವೆಂದು ಅರಚತೊಡಗಿತು. ಸಾಹುಕಾರರಿಗೆ ಮಾಂಸವು ನಂಜೆಂದೂ, ಗಂಜಿಯು ಅಜೀರ್ಣವೆಂದೂ ಹೇಳಿ ತೆಳಿಕುಡಿಸಿ ಪ್ರತೀಕಾರ ರೂಪದಲ್ಲಿ ಮಲಗಿಸಿ ನಾವು ಹೊಟ್ಟೆ ತುಂಬಾ ಉಂಡು ಮಲಗಲು ಅಣಿಯಾಗುವಾಗ ಕೋಳಿಯು ಕೊ...ಕ್ಕೋ...ಕ್ಕೋ... ಎಂದು ಕೆಲೆಯಿತು.

## ಕೆದಂಬಾಡಿ ಜತ್ತಪ್ಪ ರೈ

ಕತೆಗಾರ, ವಿಮರ್ಶಕ, ಅನುವಾದಕ ಕೆದಂಪಾಡಿ ಜತ್ತಪ್ಪ ರೈಗಳು ೧೧-೦೨-೧೯೧೬ರಂದು ಪುತ್ತೂರು ತಾಲೂಕಿನ ಕೆದಂಬಾಡಿಯಲ್ಲಿ ಜನಿಸಿದರು. ಇವರ ತಂದೆ ಪಿಲಿಮಜಲು ದಾಸರೈಗಳು.

ಈಡೊಂದು ಹುಲಿಯೆರಡು, ಉರುಳು, ಬೆಟ್ಟದ ತಪ್ಪಲಿನಿಂದ ಕಡಲತಡಿಗೆ ಇವರ ಪ್ರಸಿದ್ಧ ಕೃತಿಗಳು. ಕಿಂದರಿಜೋಗಿ ಮತ್ತು ಇತರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಕೀರ್ತಿಗೆ ಪಾತ್ರರಾದರು. ಇವರು ತುಳು ನಿಘಂಟು ತಯಾರಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯವೆಸಗಿದ್ದಾರೆ. ಇವರಿಗೆ ೧೯೭೭ರಲ್ಲಿ ಕರ್ನಾಟಕ ತುಳು ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ ಪ್ರಶಸ್ತಿಗಳೂ ಲಭಿಸಿವೆ.

ಇವರ ಬೇಟೆಯ ನೆನಪುಗಳು ೧೯೭೮ರಲ್ಲಿ ಪ್ರಕಟವಾಗಿ ಇತರ ೧೨ ಭಾಷೆಗಳಿಗೆ ಅನುವಾದವಾಗಿದೆ. ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ಸಾಹುಕಾರ ಕುಞ್ಞಿಮೋನು ಪಾಠವನ್ನು ಇವರ ಬೇಟೆಯ ನೆನಪುಗಳು ಎಂಬ ಕೃತಿಯಿಂದ ಆರಿಸಲಾಗಿದೆ.



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕಂಬಳದ ಕೋಣ ಓಡಿದಂತಾಗುವುದು ಯಾವಾಗ?
2. ಕೇಳುವವರ ಪಾಲಿಗೆ ಉತ್ಸವವಾಗುವುದು ಏನು?
3. ಒಮ್ಮೆ ಮನೆ ಸೇರಿದರೆ ಸಾಕು ಎಂಬ ಆತುರದಲ್ಲಿದ್ದ ಲೇಖಕರು ಕಂಡುದೇನು?
4. ಲೇಖಕರು ಕೋವಿಗೆ ತೋಟೆ ತುಂಬಿಸಲು ಬಗ್ಗಿದಾಗ ನಡೆದ ಘಟನೆಯೇನು?

### ಸಂಭಾಷಣೆ ಬರೆಯಿರಿ.

ಲೇಖಕರು ಮತ್ತು ಕುಞ್ಞಿಮೋನು ಸಾಹುಕಾರರು ಕಾಡಿನಲ್ಲಿರುವಾಗ ಏನೇನು ಮಾತಾಡಿಕೊಂಡಿರಬಹುದೆಂದು ಊಹಿಸಿ ಸಂಭಾಷಣೆ ಬರೆಯಿರಿ.

## ಪರಿಚಯ ಲೇಖನ ಬರೆಯಿರಿ.

ಹಿಂದಿನ ಕಾಲದಲ್ಲಿ ವ್ಯಾಪಕವಾಗಿದ್ದ ಬೇಟೆಯನ್ನು ಇತ್ತೀಚೆಗೆ ನಿಷೇಧಿಸಲಾಗಿದೆ. ಮಾತ್ರವಲ್ಲ ಪ್ರಾಣಿಪಕ್ಷಿಗಳನ್ನು ಸಂರಕ್ಷಿಸುವುದಕ್ಕಾಗಿ ನಾಡಿನ ಹಲವೆಡೆ ವನ್ಯಮೃಗ ಸಂರಕ್ಷಣ ಕೇಂದ್ರಗಳು ಮತ್ತು ಪಕ್ಷಿಧಾಮಗಳಿವೆಯಲ್ಲವೆ? ಇವುಗಳಲ್ಲಿ ಯಾವುದಾದರೊಂದು ಕೇಂದ್ರದ ಮಾಹಿತಿ ಸಂಗ್ರಹಿಸಿ ಪರಿಚಯ ಲೇಖನ ಬರೆಯಿರಿ.

## ವಾಕ್ಯ ಬರೆಯಿರಿ

ಅಡಿಗೆರೆ ಎಳೆದ ಪದಗಳನ್ನುಪಯೋಗಿಸಿಕೊಂಡು ಬೇರೆ ವಾಕ್ಯಗಳನ್ನು ಬರೆಯಿರಿ.

1. ರಾಮರಾಯರು ಶಿಸ್ತುಬದ್ಧ ಜೀವನವನ್ನು ನಡೆಸುತ್ತಿದ್ದು ಬಹಳ ನ್ಯಾಯನಿಷ್ಠರಾಗಿದ್ದರು.
2. ಎಲ್ಲರಿಗೂ ಒಳಿತನ್ನೇ ಮಾಡುತ್ತಿದ್ದ ಅಬ್ದುಲ್ ರಶೀದರ ಕುರಿತಾದ ಅಪಚಾರದ ಮಾತನ್ನು ಕೇಳಿ ನನಗೆ ಬೇಸರವಾಯಿತು.
3. ಆದಷ್ಟೂ ದೂರ ಇರುವಂತೆ ನೋಡಿಕೊಂಡ ವ್ಯಕ್ತಿಯೊಡನೆ ಅನಿವಾರ್ಯವಾಗಿ ವ್ಯವಹಾರ ಮಾಡಬೇಕಾದ ಪ್ರಮೇಯ ಬಂದಾಗ ರಿಚಾರ್ಡರು ಬಹಳ ಜಾಗರೂಕರಾಗಿದ್ದರು.
4. ಸಣ್ಣ ಇಲಿಯನ್ನು ನೋಡಿ ಹೌಹಾರಿದ ಸಂಗೀತಳಿಗೆ ಅಣ್ಣನು ಧೈರ್ಯ ತುಂಬಿದನು.



4

# ನೇಪಾಳದ ನೋಟ

ನೇಪಾಳವು ಪ್ರಕೃತಿದೇವಿಯ ನರ್ತನರಂಗ. ಸೌಂದರ್ಯದ ಪರಮಧಾಮ. ಹಿಮಾಲಯದ ದಕ್ಷಿಣ ಭಾಗದಲ್ಲಿರುವ ನೇಪಾಳವು ಧವಳಜಟೆಯನ್ನು ಧರಿಸಿದ ಋಷಿಯೊಬ್ಬನ ಮುಖದಂತೆ ಶೋಭಿಸುತ್ತಿದೆ. ಎಲೆಗಳ ಮಧ್ಯದಲ್ಲಿ ಅರಳಿದ ತಾವರೆ ಹೂಗಳಂತೆ ನೇಪಾಳದ ಗ್ರಾಮಗಳು ಅಲ್ಲಲ್ಲಿ ಶೋಭಿಸುತ್ತಿವೆ. ಈ ಗ್ರಾಮಗಳ ಗುಡಿಸಲುಗಳಲ್ಲಿ ವಾಸಮಾಡುವ ಜನರ ಮುಖಗಳು ಸದಾಕಾಲವೂ ಪ್ರಾಕೃತಿಕ ಪುಷ್ಪಗಳಂತೆ ಪ್ರಪುಲ್ಲಿತವಾಗಿವೆ.

ನೇಪಾಳವು ಪಶ್ಚಿಮ ಮತ್ತು ದಕ್ಷಿಣದಲ್ಲಾಗಿ ಉತ್ತರಾಂಚಲ, ಉತ್ತರಪ್ರದೇಶ, ಬಿಹಾರ, ಪೂರ್ವದಲ್ಲಿ ಶಿಕಿಮ್, ಮತ್ತು ಬಂಗಾಳದಿಂದಲೂ, ಉತ್ತರದಲ್ಲಿ ತಿಬೆತ್ತಿನಿಂದಲೂ ಸುತ್ತುವರಿಯಲ್ಪಟ್ಟಿದೆ. 5400 ಚದರ ಮೈಲು ವಿಸ್ತಾರವುಳ್ಳ ಸಮುದ್ರ ಮಟ್ಟದಿಂದ ನಾಲ್ಕು ಸಾವಿರದಿಂದ ಹತ್ತು ಸಾವಿರ ಅಡಿ ಎತ್ತರದ ವರೆಗಿನ ಸ್ಥಳಗಳು ನೇಪಾಳದಲ್ಲಿವೆ.

ನೇಪಾಳವು ಸಂಪೂರ್ಣ ಸಂಗೀತಮಯ. ಅಲ್ಲಿಯ ಚರಾಚರಗಳೆಲ್ಲ ಸಂಗೀತದಲ್ಲೇ ಮಾತಾಡುತ್ತವೋ ಎನ್ನುವಂತೆ ತೋರುತ್ತವೆ. ಚಳಿಗಾಲದಲ್ಲಿ ಹಿಮಾಲಯದ ಕುಳಿರ್ಗಾಳಿಯು ಗ್ಲೇಶಿಯರ್ ರಾಗವನ್ನೇ ಹಾಡುತ್ತದೆ. ವಸಂತ ಋತುವಿನಲ್ಲಿ ಅಸಂಖ್ಯಾತ ಪಕ್ಷಿಗಳು ತಮ್ಮ ಕಲರವದಿಂದ ಸಾಮೂಹಿಕ ಸಂಗೀತವನ್ನು ನಿರ್ಮಿಸಿ ಜನರನ್ನು

ಆನಂದದಲ್ಲಿ ತೇಲಾಡಿಸುತ್ತವೆ. ಮಳೆಗಾಲದಲ್ಲಿ ಮೇಘಮಲ್ಹಾರ ರಾಗವನ್ನು ಹಾಡುತ್ತವೆ. ಅನಂತಕಾಲದಿಂದ ದಿನರಾತ್ರಿಯೆನ್ನದೆ ಹರಿಯುತ್ತಿರುವ ನದಿಗಳೂ ಜಲಪಾತಗಳೂ ತಮ್ಮ ಕಲರವದಿಂದ ಸ್ವರ್ಗೀಯ ಸಂಗೀತವನ್ನು ಉಣ್ಣಿಸುತ್ತವೆ. ಈ ಪ್ರಾಕೃತಿಕ ಸಂಗೀತಸ್ವರದೊಂದಿಗೆ ನೇಪಾಳದ ಹಳ್ಳಿಯ ಸ್ತ್ರೀಪುರುಷರು ಸದಾ ತಮ್ಮ ಸ್ವರವನ್ನು ಸೇರಿಸಿ ಹಾಡಿಹಾಡಿ ಕುಣಿಯುತ್ತಾರೆ.

ನೇಪಾಳ ನಿವಾಸಿಗಳು ಪಟ್ಟಣದ ಕೋಲಾಹಲದಿಂದ ದೂರದಲ್ಲಿದ್ದು ಪ್ರಕೃತಿಯ ಏಕಾಂತ ಸುಖವನ್ನನುಭವಿಸುವರು. ಅವರ ಜೀವನವು ಶಾಂತತೆಯಿಂದ ಸಾಗುತ್ತದೆ. ಇಲ್ಲಿಯ ಸ್ತ್ರೀಪುರುಷರಲ್ಲಿ ಒಮ್ಮೊಮ್ಮೆ ಆಧುನಿಕ ಸಭ್ಯತೆ ಬಂದು ಸೇರಿದರೂ ಅವರ ಮೂಲ ಸ್ವಭಾವದ ಮುಂದೆ ಅದು ನಾಶಹೊಂದುತ್ತದೆ. ಇಲ್ಲಿಯವರ ಸರಳ ಹೃದಯ ಈ ಯುಗದ್ದಲ್ಲ, ಸತ್ಯಯುಗದ್ದು.

ನೇಪಾಳವು ಪವಿತ್ರ ದೇಗುಲಗಳ ನೆಲೆವೀಡು. ನೇಪಾಳದ ರಾಜಧಾನಿ ಕಾಠ್ಮಂಡುವಿನಲ್ಲಿ ಪ್ರವಹಿಸುತ್ತಿರುವ ಭಾಗ್‌ಮತಿ ನದಿಯ ತಟಾಕದಲ್ಲಿ ಜಗತ್ಪ್ರಸಿದ್ಧ ಶಿವಕ್ಷೇತ್ರವಿದೆ. ಪಶುಪತಿನಾಥ ದೇವರ ಅಪಾರಶಕ್ತಿಯು ಭಕ್ತರನ್ನು ಚುಂಬಕದಂತೆ



ಈ ಕ್ಷೇತ್ರದೆಡೆಗೆ ಆಕರ್ಷಿಸುತ್ತಿದೆ. ಯುನೆಸ್ಕೋ (UNESCO) ದಿಂದ ಪ್ರಕಟಗೊಂಡ ವಿಶ್ವದ ಸಾಂಸ್ಕೃತಿಕ ಪ್ರದೇಶಗಳ ಪಟ್ಟಿಯಲ್ಲಿ ಈ ದೇವಸ್ಥಾನವು ಪ್ರಧಾನ ಕೇಂದ್ರವಾಗಿ ಗುರುತಿಸಲ್ಪಟ್ಟಿದೆ. "ವಿಶಾಲವಾದ ಈ ದೇವಾಲಯವು ಇನ್ನಿತರ ಉಪದೇಗುಲಗಳು, ಆಶ್ರಮಗಳು, ವಿಗ್ರಹಗಳು ಮತ್ತು ಅನೇಕ ಶಿಲಾಶಾಸನಗಳಿಂದೊಡಗೂಡಿ ಪವಿತ್ರವಾದ ಭಾಗ್‌ಮತಿ ನದಿಯ ಕಿನಾರೆಯಲ್ಲಿ ಯುಗ ಯುಗಗಳಿಂದಲೇ ರಾರಾಜಿಸುತ್ತಿದೆ" ಎಂದು ಯುನೆಸ್ಕೋದ ಶ್ಲಾಘನೆಗೆ ಪಾತ್ರವಾಗಿದೆ. ಮಾತ್ರವಲ್ಲದೆ ಆ ಸಂಸ್ಥೆಯು ಗುರುತಿಸಿರುವ ವಿಶ್ವಸ್ಮಾರಕಗಳಲ್ಲಿ ಈ ದೇವಾಲಯವೂ ಒಂದಾಗಿದೆ. ಇದಲ್ಲದೆ ನಮ್ಮ ಭೂಖಂಡದ 275 ಪವಿತ್ರ ಶಿವಾಲಯಗಳಲ್ಲಿ ಇದೂ ಒಂದು. ಓರ್ವ ವ್ಯಕ್ತಿಯು ಈ ಕ್ಷೇತ್ರಕ್ಕೆ ಬರಿಗಾಲಿನಿಂದ ಪ್ರಯಾಣಿಸಿದಾಗ ಕಷ್ಟಕಾರ್ಪಣ್ಯಗಳಿಗೆ ಒಳಗಾಗದಿದ್ದರೆ ಆತನಿಗೆ ರುದ್ರನ ಪೂರ್ಣ ಕೃಪಾಕಟಾಕ್ಷ ದೊರೆಯುತ್ತದೆ ಎಂಬ ನಂಬಿಕೆಯಿದೆ. ಗುಲಾಮನನ್ನೇ (ಪಶು) ಯಜಮಾನನ್ನಾಗಿಸುವ (ಪತಿ) ಅದ್ಭುತ ಕ್ಷೇತ್ರವಿದು ಎಂದೂ ಹೇಳಲಾಗುತ್ತದೆ.

ಅತಿಥಿ ಸತ್ಕಾರ ಮಾಡುವುದೆಂದರೆ ನೇಪಾಳಿಗಳಿಗೆ ಪ್ರಾಣ. ನೇಪಾಳಿಯೊಬ್ಬನ ಬಾಗಿಲಿನಿಂದ ಸನ್ಮಾನಹೊಂದದೆ ಹಿಂದಿರುಗಿದವನಿಲ್ಲ. ಅವರ ಹೃದಯ ಮಾನವ ಪ್ರಕೃತಿಯ ಸದ್ಗುಣಗಳಿಂದ ತುಂಬಿಕೊಂಡಿದೆ. ಅಲ್ಲಿ ಅಹಂಕಾರ, ಸಂದೇಹ, ಭಯ ಮೊದಲಾದ ಮಲಿನ ವಿಚಾರಗಳಿಗೆ ಸ್ಥಳವಿಲ್ಲ.

ಮೈದಾನು, ಪರ್ವತಗಳಿಂದ ನೇಪಾಳವು ಸಾರ್ವತ್ರಿಕವಾಗಿದೆ. ವರ್ಷಕಾಲದಲ್ಲಿ ನೇಪಾಳಿಗಳು ಮೇಘದೊಂದಿಗೆ ಆಟವಾಡುತ್ತಾರೆಂದೆನ್ನಬಹುದು. ಆ ಕಾಲದಲ್ಲವರು ಮೇಘಗಳ ಪ್ರಕೃತಿ ಸೌಂದರ್ಯವನ್ನು ಸೂಕ್ಷ್ಮವಾಗಿ ವರ್ಣಿಸುವ ಅನೇಕ ರಾಗಗಳನ್ನು ಹಾಡುವರು. ಹೀಗೆ ಪ್ರತಿ ಋತುವಿಗೂ ಅಲ್ಲಿ ಮಹತ್ವವಿದೆ. ವಸಂತ ಋತುವಿನಲ್ಲಂತೂ ವಿವಿಧ ಬಣ್ಣದ, ಆಕಾರದ, ಸುವಾಸನೆಯ ಹೂಗಳು ಅರಳಿ ಪ್ರಕೃತಿದೇವಿಯನ್ನು ಶೃಂಗರಿಸುತ್ತವೆ. ನೇಪಾಳಿಯರು ನೃತ್ಯಗೀತೆಗಳಿಂದ ಪ್ರಕೃತಿ ದೇವಿಗೆ ಸ್ವಾಗತ ಬಯಸಿ ಅವಳ ಗುಣಗಾನ ಮಾಡುವರು.

1559ರಲ್ಲಿ ಈಗಿನ ನೇಪಾಳ ಸಾಮ್ರಾಟರ ಪೂರ್ವಜರಾದ ಮಹಾರಾಜ ದ್ರವ್ಯಶಾಹರು ಗೋರಖ್ ಎಂಬೊಬ್ಬ ತುಂಡರಸನನ್ನು ಸೋಲಿಸಿ ಇಂದಿನ ಸ್ವತಂತ್ರ ಗೋರಖ್ ರಾಜ್ಯದ ಅಸ್ತಿವಾರವನ್ನು ಹಾಕಿದರು. ಅಂದಿನಿಂದ ನೇಪಾಳದ ಗೋರಖ್ ಸಾಮ್ರಾಜ್ಯದೊಂದಿಗೆ ರಾಜಭಾಷೆಯಾದ ನೇಪಾಳಿಯ ಸಾಹಿತ್ಯವು ಕೂಡ ಅಭಿವೃದ್ಧಿಗೆ ಬರತೊಡಗಿತು.

ನೇಪಾಳಿ ಭಾಷೆ ಸಂಸ್ಕೃತದೊಡನೆ ವಿಶೇಷ ಸಂಬಂಧವುಳ್ಳ ಭಾಷೆ. ನೇಪಾಳದ ಇತರ ಭಾಷೆಗಳು ಸಂಸ್ಕೃತದಿಂದ ಹುಟ್ಟಿದ ಭಾಷೆಗಳಲ್ಲವೆಂದು ಅಭಿಪ್ರಾಯವಿದೆ. ನೇಪಾಳಿಯು ರಾಜಭಾಷೆಯಾದುದರಿಂದ ಹೆಚ್ಚುಕಡಿಮೆ ಎಲ್ಲಾ ನೇಪಾಳಿಗಳಿಗೂ ಅದು ಬರುತ್ತದೆ. ಎಷ್ಟೋ ಜನರು ತಮ್ಮ ಮಾತೃಭಾಷೆಯನ್ನು ಬಿಟ್ಟು ನೇಪಾಳಿಯನ್ನೇ ಮಾತನಾಡತೊಡಗಿದ್ದಾರೆ. ನೇಪಾಳದ ವಿವಿಧ ಜನರು ಒಬ್ಬರಿಂದ ಒಬ್ಬರು ನೃತ್ಯಗೀತೆಗಳನ್ನು ಕಲಿತು ತಮ್ಮ ಜನರಲ್ಲಿ ಬಹುಬೇಗ ಪ್ರಸಾರ ಮಾಡುತ್ತಾರೆ.

ಮಧ್ಯನೇಪಾಳದಲ್ಲಿ ವಾಸಮಾಡುವ ದನಕಾಯುವ ಜಾತಿಯ 'ಗುರಂಗ' ಜನರು ನರ್ತನದ ಮೇಲೆ ಬಹಳ ಮಮತೆಯುಳ್ಳವರು. ಗ್ರಾಮದ ಗುರಿಕಾರನ ಮನೆ ಈ ಜನರ ನಾಟ್ಯಶಾಲೆಯಾಗಿದೆ. ಈ ನಾಟ್ಯಗೃಹಕ್ಕೆ ಅವರು 'ರೋಡೀಘರ್' ಎಂದು ಹೇಳುತ್ತಾರೆ. ಬೆಳೆ ಹಣ್ಣಾಗುವ ಕಾಲದಲ್ಲಿ ಒಂದು ರೋಡೀಘರ್‌ನಲ್ಲಿ 'ಸೋರಟಾ' ಎಂಬ ಅಪೂರ್ವ ನೃತ್ಯ ಸಮಾರಂಭ ನಡೆಯುತ್ತದೆ. ಆ ನೃತ್ಯ ಕಾಲದಲ್ಲಿ ಹಾಡುವ ಹಾಡಿಗೆ 'ಸೋರಟಾಗೀತ'ವೆಂದು ಹೆಸರು. ಚೆನ್ನಾಗಿ ಬೆಳೆ ಬಂದ ವರ್ಷ ಈ ನೃತ್ಯಕ್ಕೆ ಮತ್ತಷ್ಟು ಕಳೆಯೇರುತ್ತದೆ. ಯುವಕಯುವತಿಯರು ಮಾತ್ರ ನೃತ್ಯಶಾಲೆಯಲ್ಲಿ ಕುಣಿದು ಹಾಡುತ್ತಾರೆ.

## ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ನೇಪಾಳವು ಸಂಪೂರ್ಣ ಸಂಗೀತಮಯ ಎಂದು ಲೇಖಕರು ಹೇಳಲು ಕಾರಣವೇನು?
2. ಮಧ್ಯನೇಪಾಳದಲ್ಲಿ ವಾಸಮಾಡುವ ಗುರಂಗ ಜನರ ವಿಶೇಷತೆಯೇನು?
3. ಪಶುಪತಿ ಕ್ಷೇತ್ರ ಪ್ರಯಾಣದ ಕುರಿತಾದ ಜನರ ನಂಬಿಕೆಯೇನು?
4. ನೇಪಾಳದ ಮೇರೆಗಳು ಯಾವುವು?

## ಪ್ರಧಾನ ವಿಚಾರಗಳನ್ನು ಬರೆಯಿರಿ.

'ನೇಪಾಳದ ನೋಟ' ಪ್ರವಾಸ ಲೇಖನದಲ್ಲಿ ಲೇಖಕರು ನೇಪಾಳದ ಕುರಿತಾಗಿ ಹೇಳಿರುವವುಗಳಲ್ಲಿ ಪ್ರಧಾನ ವಿಚಾರಗಳನ್ನು ಟಿಪ್ಪಣಿಯಾಗಿ ಬರೆಯಿರಿ.

## ಮಾಹಿತಿ ನೀಡಿರಿ

ನಿಮ್ಮ ಊರಿನಲ್ಲಿರುವ ಪ್ರವಾಸಯೋಗ್ಯವಾದ ಸ್ಥಳಗಳ ಮಾಹಿತಿ ಬರೆಯಿರಿ. ಅದನ್ನು ಬೆರಳಚ್ಚು ಮಾಡಿ ಶಾಲಾ ಬ್ಲೋಗ್‌ನಲ್ಲಿ ಪ್ರಕಟಿಸಿರಿ.

## ಸಿದ್ಧತಾ ಪಟ್ಟಿ ತಯಾರಿಸಿರಿ.

ಒಂದು ಪ್ರವಾಸವು ವ್ಯವಸ್ಥಿತವಾಗಲು ಅಗತ್ಯವಾದ ಪೂರ್ವಸಿದ್ಧತೆಗಳ ಕುರಿತು ಇತರರೊಂದಿಗೆ ಚರ್ಚಿಸಿ ಪಟ್ಟಿ ತಯಾರಿಸಿರಿ.

ಘಟಕ - 3

# ಸಹಜೀವನ

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ಗಾದೆಗಳು ಮತ್ತು ಒಗಟುಗಳನ್ನು ಅರ್ಥೈಸಿಕೊಂಡು ಅವುಗಳ ಸ್ವಾರಸ್ಯವನ್ನು ಹೇಳುವುದು ಮತ್ತು ಬರೆಯುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ನಿಯತಕಾಲಿಕಗಳಲ್ಲಿ ಬರುವ ವ್ಯಂಗ್ಯಚಿತ್ರಗಳು, ಅಡಿಟಪ್ಪಣಿಗಳು ಇತ್ಯಾದಿಗಳ ಆಶಯಗಳನ್ನು ತಿಳಿದುಕೊಂಡು ಆಸ್ವಾದಿಸಿ ಸಮಾನವಾದುದನ್ನು ರಚಿಸುವುದು.
- ನಿಯತಕಾಲಿಕಗಳನ್ನು ಮತ್ತು ಇತರ ಪುಸ್ತಕಗಳನ್ನು ಓದಿ ಅನುಭವಗಳನ್ನು ಹಂಚಿಕೊಳ್ಳುವುದು.
- ಪತ್ರಿಕೆಗಳ ಮತ್ತು ದೃಶ್ಯಮಾಧ್ಯಮಗಳ ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸುವುದು.

## ಮಾನವೀಯತೆ ಮೆರೆದ ರಿಕ್ಷಾ ಚಾಲಕ

ಮೂಡಬಿದಿರೆ : ಅ.6 ರಸ್ತೆಯ ತಿರುವಿನಲ್ಲಿ ಅಪಘಾತಕ್ಕೊಳಗಾದ ಬೈಕ್ ಸವಾರರೊಬ್ಬರನ್ನು ಸಕಾಲದಲ್ಲಿ ಆಸ್ಪತ್ರೆಗೆ ತಲುಪಿಸಿ ಮಾನವೀಯತೆ ಮೆರೆದ ಘಟನೆಯೊಂದು ವರದಿಯಾಗಿದೆ. ಮಂಗಳೂರು - ಮೂಡಬಿದಿರೆ ರಸ್ತೆಯ ಎಡಪದವಿಗೆ ಸಮೀಪದ ತಿರುವಿನಲ್ಲಿ ಜೋಸೆಫ್ ಕ್ರಾಸ್ತಾ ಎಂಬವರು ಬೆಳಿಗ್ಗೆ 6-00 ಗಂಟೆಯ ವೇಳೆಗೆ ಬೈಕ್ ಚಲಾಯಿಸುತ್ತಿದ್ದಾಗ ಆಯತಪ್ಪಿ ಬಿದ್ದಿದ್ದರು. ಹಣೆ ಹಾಗೂ ಕೈಯಲ್ಲಾದ ಗಾಯದಿಂದ ಅತಿಯಾದ ರಕ್ತಸ್ರಾವವುಂಟಾಗಿ ಅಸ್ವಸ್ಥರಾಗಿದ್ದರು. ಆ ದಾರಿಯಾಗಿ ರಿಕ್ಷಾ ಚಲಾಯಿಸುತ್ತಿದ್ದ ಮನೋಜ್ ಎಂಬವರು ಇದನ್ನು ಕಂಡು ತಕ್ಷಣ ಕ್ರಾಸ್ತಾರವರನ್ನು ನಗರದ ಖಾಸಗಿ ಆಸ್ಪತ್ರೆಗೊಯ್ದು ಸೂಕ್ತ ಚಿಕಿತ್ಸೆಯ ವ್ಯವಸ್ಥೆಯನ್ನು ಮಾಡಿದರು. ಅಲ್ಲದೆ ಅವರಿಗೆ ಅವಶ್ಯವಾದ ರಕ್ತದಾನ ಮಾಡಿ ಮಾನವೀಯತೆ ಮೆರೆದರು. ಅವರ ಈ ಕಾರ್ಯಕ್ಕೆ ಸರ್ವತ್ರ ಶ್ಲಾಘನೆ ವ್ಯಕ್ತವಾಗಿದೆ.

### ಅಭಿಪ್ರಾಯ ಬರೆಯಿರಿ

ಮೇಲಿನ ಪತ್ರಿಕಾ ವರದಿಯ ಕುರಿತಾದ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ

1

# ಸಮತಾಭಾವ ಕಂಪಿಡಲಿ

ಸತ್ತವರ ಬದುಕಿಸಲು ನಾವರಿಯದಿರುವಾಗ
ಜೀವಿಪರ ಕೈಯಾರೆ ಕೊಲ್ಲುವುದು ತಪ್ಪು
ವಿಶ್ವದ ಸಮಸ್ತ ಮಾನವರೊಂದೆ ಜಾತಿಯಿಹ-
ರಂತರದ ಕಲ್ಪನೆಯು ಬರೆ ಮೌಢ್ಯ-ಬೆಪ್ಪು ॥ 1 ॥

ದಯೆಯೆ ಧರ್ಮದ ಮೂಲ, ಹಿಂಸೆಯೆಂದರೆ ಪಾಪ,
ಇದ್ದಷ್ಟು ಸಂತೃಪ್ತಿ, ಮಾನವ ಪ್ರೇಮ -
ಇವು ಸತ್ಯ ಸಂಸ್ಕೃತಿಯ ಸಾರ ಸರ್ವಸ್ವವೆನೆ
ಭೂಷಣವೆ ಹಿಂದಿನಂತೆಯೆ ಯುದ್ಧ ಕಾಮ? ॥ 2 ॥

ಸಾಹಿತ್ಯ - ವಿಜ್ಞಾನ - ಕಲೆಗಳಲಿ ಮುಂದಿಹೆವು
ನಾಗರಿಕತೆಯಲ್ಲಿ ಪ್ರಗತಿಯಾಂತಿಹೆವು
ಎಂಬ ಜಂಭದ ರಾಷ್ಟ್ರಗಳಲಿ ಕಾಡಿನ ಪಶುಗ-
ಳಂತೆ ಮಾರಣಯಜ್ಞ ಲಜ್ಜೆಗಾಸ್ಪದವು ॥ 3 ॥

ಎಷ್ಟೆಷ್ಟೋ ಸತಿಯರನು ಪತಿಗಳಿಂದಗಲಿಸಿದ,
ಮಕ್ಕಳನು ಕಂಬನಿಯ ಮಳೆಕರೆಯಿಸಿರುವ,
ಬಂಧು-ಬಳಗವ ಗೆಳೆಯ-ಗೆಳತಿಯರ ಕೂಗಿಸಿದ,
ರಣಯಾಗಕಾಯ್ತು ಪೂರ್ಣಾಹುತಿಯ ಭಾವ ! ॥ 4 ॥

ಸೋತವರ ಗೆದ್ದವರು ಕಾಲ್ಕೆಳಗೆ ತುಳಿಯುವುದು,
ಸ್ವಾರ್ಥ ಸಂಪೋಷಣೆಗೆ ಮರ್ದನದ ರೀತಿ,
ರಾಷ್ಟ್ರ-ರಾಷ್ಟ್ರಗಳಲ್ಲಿ ಭೇದ ಕಲ್ಪನೆಯಿಷ್ಟು
ಬರುವ ಯುದ್ಧಕೆ ಮೂಲ; ಮರೆಯುವುದನೀತಿ ॥ 5 ॥

ವಿಶ್ವ ಸಾಗರದಲ್ಲಿ ಯುದ್ಧೋರ್ಮಿ ನಿಂತಿರಲಿ !
ದ್ವೇಷಾಗ್ನಿಯುದ್ಗಮಿಸಿ ಕಿಡಿ ಸಿಡಿಯದಿರಲಿ !
ಗಾಳಿಯಲಿ ಸರ್ವ ಸಮತಾಭಾವ ಕಂಪಿಡಲಿ !
ವಿಶ್ವಶಾಂತಿಯ ಕಹಳೆ ಭೋರ್ಗರೆಯುತಿರಲಿ! ॥ 6 ॥

**- ಅಮ್ಮೆಂಬಳ ಶಂಕರನಾರಾಯಣ ನಾವಡ**

## ಅಮ್ಮೆಂಬಳ ಶಂಕರನಾರಾಯಣ ನಾವಡ

ಅಮ್ಮೆಂಬಳ ಶಂಕರನಾರಾಯಣ ನಾವಡರು ದ.ಕ. ಜಿಲ್ಲೆಯ ಅಮ್ಮೆಂಬಳದಲ್ಲಿ ವಾಸುದೇವ ನಾವಡ - ಕಾವೇರಮ್ಮ ದಂಪತಿಯ ಹಿರಿಯ ಮಗನಾಗಿ ಜನಿಸಿದರು. ಇವರು ಕೋಟೆಕಾರಿನ ಆನಂದಾಶ್ರಮ ಹೈಸ್ಕೂಲಿನಲ್ಲಿ 1949ರಿಂದ 1975ರ ತನಕ ಅಧ್ಯಾಪಕರಾಗಿದ್ದರು. ಸರ, ಬಾಳಗೆಳತಿ, ಪಡಿದನಿ, ಬೆಳಕು ಇವರ ಕವನ ಸಂಕಲನಗಳು. ಇವರು ಬರೆದ ಪ್ರಣಯದರ್ಶನ ನಾಟಕಕ್ಕೆ ಮದರಾಸು ಸಂಸ್ಥಾನದ ಬಹುಮಾನ ಬಂದಿದೆ. ಶ್ರೀರಾಮಾಶ್ವಮೇಧಕತೆ ಇವರ ಪ್ರಸಿದ್ಧ ಬಾಲಸಾಹಿತ್ಯ. ಇವರು 1993ರಲ್ಲಿ ಕುಂದಾಪುರದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲೆಯ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಕವನವನ್ನು ಅವರ 'ಸರ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಸಂಸ್ಕೃತಿಯ ಸಾರ ಸರ್ವಸ್ವವೆಂದು ಕವಿ ಯಾವುದನ್ನು ಹೇಳುತ್ತಾರೆ?
2. ರಣ ಯಾಗದ ಪರಿಣಾಮವೇನು?
3. ಕವಿಯು ಹೇಳುವಂತೆ ಯುದ್ಧಕ್ಕೆ ಮೂಲ ಯಾವುದು?

### ಆಶಯ ಬರೆಯಿರಿ

'ಸಮತಾಭಾವ ಕಂಪಿಡಲಿ' ಪದ್ಯದ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

### ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ವಿಶ್ವಸಾಗರದಲ್ಲಿ ಯುದ್ಧೋರ್ಮಿ ನಿಂತಿರಲಿ।
ದ್ವೇಷಾಗ್ನಿಯುದ್ಗಮಿಸಿ ಕಿಡಿ ಸಿಡಿಯದಿರಲಿ ।

### ಭಿತ್ತಿಪತ್ರ ತಯಾರಿಸಿರಿ

ನಿಮ್ಮ ಶಾಲಾ ಕಂಪ್ಯೂಟರಿನ ಸಹಾಯದಿಂದ ಸೂಕ್ತ ಹಿನ್ನೆಲೆಯೊಂದಿಗೆ ಯುದ್ಧದ ಭೀಕರತೆಯನ್ನು ತಿಳಿಸುವ ಭಿತ್ತಿಪತ್ರವನ್ನು ತಯಾರಿಸಿರಿ.



2

# ನನ್ನ ಪಯಣ

ನನ್ನ ಬಾಲ್ಯಜೀವನ ಕಳೆದ ರಾಮೇಶ್ವರವು ಒಂದು ಸಣ್ಣ ದ್ವೀಪ. ಅಲ್ಲಿ ಅತಿ ಎತ್ತರದ ಭೂಭಾಗವೆಂದರೆ ಗಂಧಮಾದನ ಪರ್ವತವೆಂಬ ಒಂದು ಬೆಟ್ಟ. ಅದರ ತುತ್ತತುದಿಯಲ್ಲಿ ನಿಂತರೆ ಇಡೀ ರಾಮೇಶ್ವರವು ನಮ್ಮ ಸುತ್ತಲೂ ಹರಡಿಕೊಂಡಿರುವುದನ್ನು ಕಾಣಬಹುದು. ಎಲ್ಲೆಡೆಯೂ ತಲೆದೂಗುತ್ತಿರುವ ಹಸಿರುಹಸಿರಾದ ತೆಂಗಿನ ಮರಗಳ ತೋಟಗಳು, ದೂರದಲ್ಲಿ ಸಮುದ್ರ, ಇವುಗಳ ನಡುವೆ ಆಕಾಶವನ್ನು ಆಳುತ್ತಿರುವೆನೋ ಎಂಬಂತೆ ತಲೆಯೆತ್ತಿ ನಿಂತಿರುವ ರಾಮನಾಥಸ್ವಾಮಿ ದೇವಸ್ಥಾನದ ಗೋಪುರ – ಇವೆಲ್ಲ ಕಾಣಿಸುತ್ತಿದ್ದವು. ಆಗ ರಾಮೇಶ್ವರವು ಒಂದು ಶಾಂತವಾದ ಪುಟ್ಟ ಪಟ್ಟಣವಾಗಿತ್ತು. ಅಲ್ಲಿನ ಸಂಪಾದನೆಯ ಮಾರ್ಗ ಎಂದರೆ ಕೆಲವರಿಗೆ ಮೀನುಗಾರಿಕೆ, ಕೆಲವರಿಗೆ ತೆಂಗಿನ ತೋಟ ಹಾಗೂ ಇನ್ನು ಕೆಲವರಿಗೆ ಪ್ರವಾಸೋದ್ಯಮ ಆಧಾರಿತ ವ್ಯಾಪಾರ. ಭಾರತೀಯರಿಗೆ ರಾಮೇಶ್ವರ ಒಂದು ಪವಿತ್ರ ಯಾತ್ರಾಸ್ಥಳ. ಅದೊಂದು ತೀರ್ಥಕ್ಷೇತ್ರ. ದೇವಸ್ಥಾನ ಹಾಗೂ ಅಕ್ಕಪಕ್ಕದ ಬೀದಿಗಳು ಸದಾ ಯಾತ್ರಾರ್ಥಿಗಳಿಂದ ತುಂಬಿರುತ್ತವೆ.

ರಾಮೇಶ್ವರದ ನಾಗರಿಕರಲ್ಲಿ ಹೆಚ್ಚಿನವರು ಹಿಂದುಗಳು. ಕೆಲವು ಮಂದಿ ನಮ್ಮಂತಹ ಮುಸ್ಲಿಮರು. ಅಂತೆಯೇ ಕೆಲವು ಜನ ಕ್ರೈಸ್ತರೂ ಇದ್ದಾರೆ. ಪ್ರತಿಯೊಂದು ಸಮುದಾಯವೂ ಅಕ್ಕಪಕ್ಕಗಳಲ್ಲಿರುವ ಇತರ ಸಮುದಾಯಗಳವರ ಜತೆ ಉತ್ತಮ ಸ್ನೇಹದಿಂದಲೂ ನೆಮ್ಮದಿಯಿಂದಲೂ ಜೀವನ ಮಾಡುತ್ತಿದ್ದವು. ಹೊರ ಜಗತ್ತಿನ ಒಡಕುಗಳೂ ಪಲ್ಲಟಗಳೂ ರಾಮೇಶ್ವರದ ಒಳಕ್ಕೆ ಬಂದದ್ದೇ ಇಲ್ಲ. ಬೇರೆ ಸ್ಥಳಗಳಲ್ಲಿನ ತುಮುಲಗಳ ಹಾಗೂ ಕೋಮು ವಿರಸದ ಸುದ್ದಿಗಳನ್ನು ವೃತ್ತಪತ್ರಿಕೆಗಳು ಹೊತ್ತು ತಂದರೂ ಇಲ್ಲಿ ಮಾತ್ರ ಜನಜೀವನ ಎಂದಿನಂತೆ ಸುಲಲಿತವಾಗಿ ಸುಸೂತ್ರವಾಗಿ ನಡೆಯುತ್ತಿತ್ತು.

ಸದ್ದುಗದ್ದಲವಿಲ್ಲದ ಈ ಸೌಹಾರ್ದ ಅನೇಕ ತಲೆಮಾರುಗಳಿಂದ ನಡೆದುಬಂದಿದೆ. ನಮ್ಮ ಮುತ್ತಾತ ರಾಮನಾಥ ಸ್ವಾಮಿ ದೇವಾಲಯದ ವಿಗ್ರಹವನ್ನು ಕಾಪಾಡಿದ

ಘಟನೆಯನ್ನು ನಮ್ಮ ತಂದೆ ನಮ್ಮನ್ನೆಲ್ಲ ಕೂರಿಸಿಕೊಂಡು ಹೇಳುತ್ತಿದ್ದರು. ದೇವಸ್ಥಾನದ ಉತ್ಸವ ಮೂರ್ತಿಯನ್ನು ಅಲಂಕಾರ ಮಾಡಿ ದೇವಾಲಯದ ಸುತ್ತ ಪ್ರದಕ್ಷಿಣೆಯಲ್ಲಿ ಒಯ್ಯುವುದು ಸಾಮಾನ್ಯವಾಗಿ ಉತ್ಸವಗಳ ಸಂದರ್ಭಗಳಲ್ಲಿ ಜರುಗುತ್ತದೆ. ಈ ಸಂದರ್ಭದಲ್ಲಿ ದೇವಸ್ಥಾನದ ಸುತ್ತಲಿನ ಕೆರೆಕಟ್ಟೆಗಳಲ್ಲಿ ವಿಗ್ರಹವನ್ನಿರಿಸಿ ಪೂಜೆ ಸಲ್ಲಿಸಲಾಗುತ್ತದೆ. ರಾಮೇಶ್ವರದ ಎಲ್ಲರೂ ಜಾತಿ-ಧರ್ಮ ಭೇದವಿಲ್ಲದೆ ಇದರಲ್ಲಿ ಭಾಗವಹಿಸುತ್ತಾರೆ. ಅಂಥ ಒಂದು ಮೆರವಣಿಗೆ ಸಂದರ್ಭದಲ್ಲಿ ಉತ್ಸವ ಮೂರ್ತಿಯು ಆಕಸ್ಮಿಕವಾಗಿ ಕೆರೆಗೆ ಬಿತ್ತು. ಅದು ಹೇಗೆ ಬಿದ್ದಿತು ಎಂಬುದು ಈಗ ಯಾರಿಗೂ ತಿಳಿಯದು. ಮೂರ್ತಿ ಬಿದ್ದಾಗ ಅಲ್ಲಿದ್ದವರೆಲ್ಲ ದಿಗ್ಭ್ರಾಂತರಾದರು. 'ಅದೊಂದು ಅಪಶಕುನ, ಏನು ಗಂಡಾತರ ಕಾದಿದೆಯೋ' ಎಂದು ದೇವಸ್ಥಾನದ ಅರ್ಚಕರೂ ಊರಿನ ಜನರೂ ಭಯಪಟ್ಟರು. ಇದು ನಡೆದಾಗ ನನ್ನ ಮುತ್ತಾತ ಧೈರ್ಯ ಕಳೆದುಕೊಳ್ಳಲಿಲ್ಲ. ಅವರು ತಕ್ಷಣ ಕೆರೆಗೆ ಜಿಗಿದು ಜಾಲಾಡಿ ವಿಗ್ರಹವನ್ನು ಎತ್ತಿಕೊಂಡು ಮೇಲೆ ಬಂದರು. ಅದು ಸಾಮಾನ್ಯ ಸಂದರ್ಭವೊಂದಾಗಿದ್ದಿದ್ದರೆ ಅದೊಂದು ಭಯಂಕರ ವಿಚಾರವೇ ಸರಿ. ಮುಸ್ಲಿಮನೊಬ್ಬ ಹಿಂದು ವಿಗ್ರಹವನ್ನು ಮುಟ್ಟುವುದೇ? ಆದರೆ ಅಲ್ಲಿ ಅಂದು ಅಂತಹ ಮಾತನ್ನು ಯಾರೂ ಆಡಲಿಲ್ಲ. ಅರ್ಚಕರು ತುಂಬಾ ಸಂತೋಷಗೊಂಡು ಭಾವುಕರಾಗಿ ನನ್ನ ಮುತ್ತಾತನಿಗೆ ಕೃತಜ್ಞತೆ ಹೇಳಿದರು. ಉತ್ಸವ ಸಾಂಗವಾಗಿ ನಡೆಯಿತು. ನನ್ನ ಮುತ್ತಾತನು ರಾಮೇಶ್ವರದ ಜನರಿಗೆ ಹೀರೋ ಆದರು. 'ಆ ಉತ್ಸವದಲ್ಲಿ ಪ್ರತಿವರ್ಷದ ಮೊದಲ ಮರ್ಯಾದೆ ನನ್ನ ಮುತ್ತಾತನಿಗೆ ಸಲ್ಲತಕ್ಕದ್ದು' ಎಂದು ದೇವಸ್ಥಾನದ ಆಡಳಿತದವರು ಘೋಷಣೆ ಮಾಡಿದರು. ಅನಂತರ ಇದು ನಮ್ಮ ಕುಟುಂಬದ ಮುಂದಿನ ಪೀಳಿಗೆಗೂ ಮುಂದುವರೆದು ಮುತ್ತಾತನ ಮರಣದ ನಂತರ ತಾತನಿಗೆ, ನಂತರ ನನ್ನ ತಂದೆಗೆ ಈ ಗೌರವ ಸಲ್ಲುತ್ತಿತ್ತು. ಯಾರಿಗೇ ಆದರೂ ಇದು ಒಂದು ದೊಡ್ಡ ಗೌರವದ ವಿಷಯವೇ ಸರಿ. ಅದರಲ್ಲೂ ಮುಸ್ಲಿಮನಿಗೆ! ರಾಮೇಶ್ವರದಲ್ಲಿ ನೆಲೆಸಿರುವ ಸೌಹಾರ್ದಕ್ಕೆ ಇದು ಸಂಕೇತವಾಗಿದೆ.

ಈ ಸೌಹಾರ್ದ ಅನೇಕಾನೇಕ ವರ್ಷಗಳಿಂದ ನಡೆದುಬಂದಿದೆ. ನನ್ನ ತಂದೆಯವರು ಧನುಷ್ಕೋಟಿಗೆ ಪ್ರಯಾಣಿಕರನ್ನು ಒಯ್ಯುವ ದೋಣಿ ಸಾರಿಗೆ ವ್ಯವಹಾರ ನಡೆಸುತ್ತಿದ್ದರು. ಯಾತ್ರಾರ್ಥಿಗಳು ಮಾತ್ರವಲ್ಲದೆ ದೇವಸ್ಥಾನದವರೂ ಅದನ್ನು ಬಳಸುತ್ತಿದ್ದರು. ನನ್ನ ತಂದೆಯವರು ರಾಮೇಶ್ವರ ಮಸೀದಿಯ ಇಮಾಮರೂ ಆಗಿದ್ದರು. ಅವರು ತುಂಬಾ ಧರ್ಮನಿಷ್ಠ ವ್ಯಕ್ತಿಯಾಗಿದ್ದು ಕುರಾನಿನ ಮಾತುಗಳಲ್ಲಿ ಅಚಲ ವಿಶ್ವಾಸವನ್ನು ಹೊಂದಿದ್ದರು. ಅವರು ತಮ್ಮ ಮಕ್ಕಳಲ್ಲಿ ಹಾಗೂ ಕುಟುಂಬದ ಎಲ್ಲರಲ್ಲಿ ಉತ್ತಮ ಗುಣವಿಶೇಷಗಳನ್ನು ತುಂಬಿದ್ದರು. ಆ ಊರಿನ ಜನರಿಗೆ ಅವರೊಬ್ಬ

ಸಂತನೂ ಮಾರ್ಗದರ್ಶಿಯೂ ಆಗಿದ್ದರು. ಅಲ್ಲಿನ ಯಾರಿಗೇ ಆಗಲಿ ಏನಾದರೂ ಕಷ್ಟಕೋಟಲೆಗಳು ಬಂದರೆ, ಜಿಜ್ಞಾಸೆ ಉಂಟಾದರೆ, ಅದು ಧಾರ್ಮಿಕ ವಿಷಯವೇ ಆಗಿರಲಿ ಅಥವಾ ಬೇರೆಯೇ ಆಗಿರಲಿ, ಅವರು ನನ್ನ ತಂದೆಯವರ ಮಾರ್ಗದರ್ಶನ ಬಯಸಿ ಬರುತ್ತಿದ್ದರು.

ನನ್ನ ತಂದೆಯವರ ಆಪ್ತಮಿತ್ರರೊಬ್ಬರು ರಾಮನಾಥ ಸ್ವಾಮಿ ದೇವಸ್ಥಾನದ ಅರ್ಚಕರಾಗಿದ್ದರು. ಅವರೇ ಲಕ್ಷ್ಮಣ ಶಾಸ್ತ್ರಿಗಳು. ಶಾಸ್ತ್ರಿಗಳು ಬರೇ ಅರ್ಚಕರಾಗಿರಲಿಲ್ಲ; ಅವರು ದೊಡ್ಡ ವಿದ್ವಾಂಸರೂ ಅಗಿದ್ದರು; ವೇದ ಪಾರಂಗತರೂ ಆಗಿದ್ದರು. ಅವರ ಮುಖ ಈಗಲೂ ನನಗೆ ನಿಚ್ಚಳವಾಗಿ ನೆನಪಿದೆ. ಅವರು ಸದಾ ದೇವಾಲಯದ ಅರ್ಚಕನ ದಿರಸನ್ನು ಅಂದರೆ ಒಂದು ಧೋತಿಯನ್ನು ಉಟ್ಟು ಅಂಗವಸ್ತ್ರವನ್ನು ಹೊದ್ದಿರುತ್ತಿದ್ದರು. ನನಗೆ ತಿಳಿದ ಮನುಷ್ಯರಲ್ಲೆಲ್ಲ ಅವರು ಅತ್ಯಂತ ಕರುಣಾಳುವೂ ವಿನಮ್ರರೂ ಆಗಿದ್ದರು.

ನಮ್ಮ ಪುಟ್ಟ ಸಮುದಾಯದ ಧಾರ್ಮಿಕ ಬದುಕಿನಲ್ಲಿ ಮೂರನೆಯ ಒಬ್ಬರು ಮಹತ್ವದ ವ್ಯಕ್ತಿ ಇದ್ದರು. ಅವರೇ ಫಾದರ್ ಬೋದಲ್. ಅವರು ರಾಮೇಶ್ವರದ ಏಕೈಕ ಇಗರ್ಜಿಯ ಧರ್ಮಗುರುವಾಗಿದ್ದರು. ರಾಮೇಶ್ವರದ ಯೋಗಕ್ಷೇಮದ ಬಗ್ಗೆ ನನ್ನ ತಂದೆಯವರೂ ಅರ್ಚಕರಾದ ಶಾಸ್ತ್ರಿಗಳೂ ಆಸಕ್ತರಾಗಿದ್ದಂತೆ ಫಾದರ್ ಬೋದಲ್ ಅವರೂ ಆಸಕ್ತರಾಗಿದ್ದರು. ರಾಮೇಶ್ವರದ ಸಮುದಾಯದ ಸೌಹಾರ್ದವನ್ನು ಕಾಪಾಡುವುದರಲ್ಲಿ ಅವರ ಪಾತ್ರವೂ ಇತ್ತು.

ಈ ಮೂವರು ಜ್ಞಾನಿಗಳ ನೆನಪು ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ಅವರು ಮೂವರನ್ನೂ, ಒಬ್ಬರನ್ನು ಮುಂಡಾಸು ಹಾಗೂ ಇಮಾಮರ ಅಂಗಿಯಲ್ಲಿ, ಇನ್ನೊಬ್ಬರನ್ನು ಧೋತಿ, ಅಂಗವಸ್ತ್ರಗಳಲ್ಲಿ, ಮತ್ತೊಬ್ಬರನ್ನು ಕ್ರೈಸ್ತ ಧರ್ಮಗುರುವಿನ ನಿಲುವಂಗಿಯಲ್ಲಿ ಜೀವಂತ ಕಂಡ ಹಾಗೆಯೇ ನೆನಪಿಸಿಕೊಳ್ಳುತ್ತೇನೆ. ಅವರು ಮೂವರು ಪ್ರತಿ ಶುಕ್ರವಾರ ಸಾಯಂಕಾಲ ನಾಲ್ಕೂವರೆ ಗಂಟೆಗೆ ಸೇರುತ್ತಿದ್ದರು. ಧಾರ್ಮಿಕ ವಿಷಯಗಳು, ರಾಮೇಶ್ವರ ಪಟ್ಟಣದ ಆಗುಹೋಗುಗಳು ಚರ್ಚೆಗೆ ಬರುತ್ತಿದ್ದವು. ಆ ಸಮಯದಲ್ಲಿ ತಂತಮ್ಮ ಸಮಸ್ಯೆಗಳಿಗೆ ಪರಿಹಾರ ಬಯಸಿ ಊರಿನ ಜನರೂ ಅಲ್ಲಿಗೆ ಬರುತ್ತಿದ್ದುದುಂಟು. ಜನರ ನಡುವಿನ ಶಾಂತಿ, ಸೌಹಾರ್ದವನ್ನು ಹಾಳುಮಾಡುವ ಸಂಭವವಿರುವ ವಿಷಯಗಳನ್ನು ಮೂವರೂ ಸೇರಿ ಚರ್ಚಿಸುತ್ತಿದ್ದರು. ತಪ್ಪು ಗ್ರಹಿಕೆಗಳಿದ್ದರೆ ಅವುಗಳನ್ನು ಹೋಗಲಾಡಿಸುವುದೆಂತು ಎಂದು ಅವರು ಉಪಾಯಗಳನ್ನು ಹುಡುಕುತ್ತಿದ್ದರು. ಅಪಾಯಕಾರಿಯಾಗಿ ಬೆಳೆಯಬಹುದಾಗಿದ್ದ ವದಂತಿಗಳಿದ್ದರೆ ಅವುಗಳನ್ನು ಮೊಳಕೆಯಲ್ಲೇ ಚಿವುಟಿಹಾಕುತ್ತಿದ್ದರು. ಶಾಂತಿಗೆ ಮೂಲಾಧಾರವಾದ ಜನವಿಭಾಗಗಳ ನಡುವಣ ಪರಸ್ಪರ ಸಂಪರ್ಕ – ಸಂವಹನಗಳನ್ನು

ಈ ಮೂವರೂ ಹಿರಿಯರು ಸಜೀವವಾಗಿ ಇರಿಸಿಕೊಂಡಿದ್ದರು. ಅವರೊಳಗಿನ ಮಾತುಕತೆಯಲ್ಲಿ ಅನೇಕ ವಿಷಯಗಳು ಬರುತ್ತಿದ್ದವು – ದೇಶವನ್ನು ಹೊಸತೇ ಆದ ದಿಕ್ಕಿನತ್ತ ಒಯ್ಯುತ್ತಿದ್ದ ಸ್ವಾತಂತ್ರ್ಯ ಹೋರಾಟ, ರಾಷ್ಟ್ರೀಯವಾದಿಗಳ ಕರೆಗೆ ಬ್ರಿಟಿಷ್ ಅಧಿಪತ್ಯವು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ ರೀತಿ ಹಾಗೂ ಅದರಿಂದ ದೇಶದ ನಾಗರಿಕರ ಮೇಲೆ ಆಗುತ್ತಿದ್ದ ಪರಿಣಾಮಗಳು – ಇಂತಹ ವಿಷಯಗಳಲ್ಲಿ ಅವರಿಗೆ ತುಂಬಾ ಕಳಕಳಿಯಿದ್ದಿತು. ತಮ್ಮ ಸುತ್ತಲಿನ ಸಮಾಜಕ್ಕೆ ಸಾಂತ್ವನವನ್ನು ನೀಡುವ ಮೂಲಕ ಅದನ್ನೊಂದು ಸಂಪೂರ್ಣ ಸೌಹಾರ್ದಯುತ ಸಮುದಾಯವನ್ನಾಗಿ ಮಾಡುವ ಕಾರ್ಯ ಅವರದಾಗಿತ್ತು. ಅಲ್ಲಿ ಯಾರೇ ಆಗಲಿ ಭಾವನೆಗಳನ್ನು ಯಾವ ಮುಜುಗರವೂ ಇಲ್ಲದೆ ತಮ್ಮೊಂದಿಗೆ ಹಂಚಿಕೊಳ್ಳುವಂತಹ ವಾತಾವರಣವನ್ನು ಈ ಮೂವರು ಮಹನೀಯರು ಸೃಷ್ಟಿಸಿದ್ದರು.


ನಾನು ಯಾವಾಗಲೂ ವಿಜ್ಞಾನವನ್ನು ನಂಬುವವನು. ಆದರೆ ನನ್ನ ಎಳೆಯ ಕಾಲದ ಧಾರ್ಮಿಕತೆಯು ನನ್ನೊಂದಿಗೆ ಉಳಿದುಕೊಂಡಿದೆ. ಮುಖ್ಯವಾಗಿ ದೇವರ ವಿಷಯದಲ್ಲಿ ವಿವಿಧ ಅಭಿಪ್ರಾಯಗಳು ಇರುವುದು ನನಗೆ ತಿಳಿದಿದೆ. ವಿವಿಧ ಧರ್ಮಗ್ರಂಥಗಳಲ್ಲಿ – ಕುರಾನ್, ಭಗವದ್ಗೀತೆ ಹಾಗೂ ಬೈಬಲ್ ಸೇರಿ – ತುಂಬಿರುವ ಜ್ಞಾನವನ್ನು ಓದಿ ಅರಿಯಲೆತ್ನಿಸಿದ್ದೇನೆ. ಅವೆಲ್ಲವೂ ಸೇರಿ ನನ್ನನ್ನು ಈ ವಿಶಿಷ್ಟ ದೇಶದ ಒಂದು ವ್ಯಕ್ತಿಯನ್ನಾಗಿ ಮಾಡಿವೆ; ಇಂಥ ಒಂದು ದೇಶದಲ್ಲಿ ಬೇರೆಬೇರೆ ಧರ್ಮ, ಬುಡಕಟ್ಟುಗಳಿಗೆ ಸೇರಿದ ಎಲ್ಲರಿಗೂ ಉಸಿರಾಡುವುದಕ್ಕೆ ಜಾಗ ಸಿಕ್ಕಿದೆ. ಅದಕ್ಕೆ ಕಾರಣ ಮುಖ್ಯವಾಗಿ ನಾನು ಮೇಲೆ ಹೆಸರಿಸಿದಂತಹ ಮಹನೀಯರು. ನಿಜ, ನಮಗೆ ಅನೇಕ ಸಮಸ್ಯೆಗಳಿವೆ. ದಿನವೂ ನಮ್ಮಲ್ಲಿ ಒಂದಲ್ಲ ಒಂದು ವಿಷಯದಲ್ಲಿ ಒಡಕು ಹುಟ್ಟಿಸಲಾಗುತ್ತಿದೆ. ಆದರೆ ನಮ್ಮ ಮುಂದಿನ ಪೀಳಿಗೆಯವರು ನನ್ನ ಮುತ್ತಾತ, ರಾಮೇಶ್ವರ ದೇವಸ್ಥಾನದ ಅರ್ಚಕರು, ಮಸೀದಿಯ ಇಮಾಮರು ಮುಂತಾದವರ ಕಥೆಗಳನ್ನು ನೆನಪಿಸಿಕೊಂಡರೆ ನಾವು ಒಂದು ಜಾತ್ಯತೀತ ಪ್ರಜಾಪ್ರಭುತ್ವವಾಗಿ ಬಹುಕಾಲದ ವರೆಗೆ ಬಾಳಿ ಬದುಕಿ ಅಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲ.

**– ಡಾ। ಎ.ಪಿ.ಜೆ. ಅಬ್ದುಲ್ ಕಲಾಂ**

## ಡಾ। ಎ.ಪಿ.ಜೆ. ಅಬ್ದುಲ್ ಕಲಾಂ

ತಮಿಳುನಾಡಿನ ರಾಮೇಶ್ವರದಲ್ಲಿ 1931ರ ಅಕ್ಟೋಬರ್ 15ರಂದು ಜನಿಸಿದ ಡಾ. ಅವುಲ್ ಫಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ ಅವರು ಮದ್ರಾಸ್ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಏರೋನಾಟಿಕ್ ಇಂಜಿನಿಯರಿಂಗ್ ಕಲಿತವರು. ಡಾ. ಕಲಾಂ ಅವರು ಭಾರತದ ಪ್ರಖ್ಯಾತ ವಿಜ್ಞಾನಿ. ಅವರು ದೇಶ ವಿದೇಶಗಳ ಒಟ್ಟು 45 ವಿಶ್ವವಿದ್ಯಾಲಗಳಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆ. ಅವರಿಗೆ ಪದ್ಮಭೂಷಣ, ಪದ್ಮವಿಭೂಷಣ ಹಾಗೂ ಭಾರತದ ಅತ್ಯುನ್ನತ ನಾಗರಿಕ ಪುರಸ್ಕಾರವಾದ ಭಾರತ ರತ್ನ ಪ್ರಶಸ್ತಿಗಳು ಲಭಿಸಿವೆ. ಅವರಿಗೆ ಚಾರ್ಲ್ಸ್ ಪದಕ, ವುಡ್ರೋ ವಿಲ್ಸನ್ ಪ್ರಶಸ್ತಿ, ಹೂಮ್ ಪ್ರಶಸ್ತಿ, ಇಂಟರ್ ನ್ಯಾಶನಲ್ ವಾನ್‌ಕರ್ಮನ್ ವಿಂಗ್ಸ್ ಪ್ರಶಸ್ತಿ ಮುಂತಾದ ಅಂತಾರಾಷ್ಟ್ರೀಯ ಪುರಸ್ಕಾರಗಳೂ ಸಂದಿವೆ.

ಡಾ। ಕಲಾಂ ಅವರು 2002ರ ಜುಲೈ 25ರಂದು ಭಾರತದ ಹನ್ನೊಂದನೆಯ ರಾಷ್ಟ್ರಪತಿ ಹುದ್ದೆಗೇರಿದರು. ಈ ಪಾಠಭಾಗವನ್ನು ಅವರ ನನ್ನ ಪಯಣ ಎಂಬ ಕೃತಿಯಿಂದ ಆರಿಸಲಾಗಿದೆ. ಇದನ್ನು ಶ್ರೀ ಜಿ. ಕೆ. ಮಧ್ಯಸ್ಥ ಅವರು ಕನ್ನಡಕ್ಕೆ ಅನುವಾದಿಸಿರುತ್ತಾರೆ.





### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ರಾಮೇಶ್ವರದ ಜನರ ಸಂಪಾದನೆಯ ವಿಭಿನ್ನ ಮಾರ್ಗಗಳು ಯಾವುವು?
2. ಅಬ್ದುಲ್ ಕಲಾಂರವರ ಮುತ್ತಾತನಿಗೆ ರಾಮೇಶ್ವರದ ಜಾತ್ರೆಯಲ್ಲಿ ಮರ್ಯಾದೆ ಸಲ್ಲುವುದು ಯಾಕೆ?
3. ಲಕ್ಷ್ಮಣ ಶಾಸ್ತ್ರಿಗಳು, ಫಾದರ್ ಬೋದಲ್ ಹಾಗೂ ಕಲಾಂರವರ ತಂದೆಯವರು ಶುಕ್ರವಾರ ಸಾಯಂಕಾಲ ಒಂದೆಡೆ ಸೇರಿ ಚರ್ಚಿಸುತ್ತಿದ್ದ ವಿಷಯಗಳು ಯಾವುವು?
4. ಅಬ್ದುಲ್ ಕಲಾಂರ ಬಾಲ್ಯದಲ್ಲಿ ರಾಮೇಶ್ವರದ ಜನಜೀವನ ಹೇಗಿತ್ತು?

## ರೂಪಾಂತರಿಸಿ ಬರೆಯಿರಿ.

ಕೆಳಗೆ ನೀಡಲಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ರೂಪಾಂತರಿಸಿ ಬರೆಯಿರಿ.

ಅಮೇರಿಕದಲ್ಲಿ ನನ್ನ ಮಗಳು, ಅಳಿಯ ವಾಸವಾಗಿದ್ದರು. ನಾನು ಅಲ್ಲಿಗೆ ಕೆಲವು ದಿನಗಳ ಕಾಲ ವಿಹಾರಕ್ಕಾಗಿ ಹೋಗಿದ್ದೆನು. ಅಲ್ಲಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇದ್ದ ಪ್ರೈಮರಿ ಶಾಲೆಯ ಕಡೆಗೆ ನಾನು ಹೆಜ್ಜೆಹಾಕಿದೆನು. ನಾನು ಉಪಾಧ್ಯಾಯರ ವಿಶ್ರಾಂತಿ ಕೊಠಡಿ ಕಡೆಗೆ ಹೋದರೆ ಉಪಾಧ್ಯಾಯರೆಲ್ಲಾ ನನ್ನನ್ನು ಕುತೂಹಲದಿಂದ ನೋಡಿದರು. ಆ ದಿನ ನಾನು ಅಗಲವಾದ ಕಂಬಿಯಿದ್ದ ಖಾದಿಪಂಚೆಯನ್ನೂ ನೀಳವಾದ ಜುಬ್ಬವನ್ನೂ ತೊಟ್ಟಿದ್ದೆನು. ನನ್ನ ಹಣೆಯಲ್ಲಿ ನಾಮವಿತ್ತು. ಕೂದಲು ಕೆದರಿದ್ದುವು, ಕಾಲಿನಲ್ಲಿ ಎಕ್ಕಡ ಧರಿಸಿದ್ದೆನು. ನನ್ನನ್ನು ಕಂಡು ಹುಡುಗರೆಲ್ಲಾ ಆಶ್ಚರ್ಯಪಟ್ಟರು. ಉಪಾಧ್ಯಾಯರೊಬ್ಬರು ನನ್ನೊಡನೆ "ನೀವು ಎಲ್ಲಿಂದ ಬಂದಿರುವಿರಿ? ನಿಮಗೆ ಚಳಿಯಾಗುವುದಿಲ್ಲವೇ?" ಎಂದು ಪ್ರಶ್ನಿಸಿದರು. "ನಾನು ಗಾಂಧೀಜಿ ಬದುಕಿದ ಭಾರತ ದೇಶದಿಂದ ಬಂದಿದ್ದೇನೆ. ನನ್ನ ಬಟ್ಟೆ ಖಾದಿಯಾಗಿದ್ದು ಇದು ಗಾಂಧೀಜಿಯ ಪ್ರೇರಣೆಯಿಂದ ಕೈಯಿಂದಲೇ ತಯಾರಿಸಿದ್ದು" ಎಂದೆ. ನನ್ನ ಮಾತನ್ನು ಕೇಳಿದ ವಿದ್ಯಾರ್ಥಿಗಳು ಯಂತ್ರರಹಿತವಾಗಿ ತಯಾರಾದ ಬಟ್ಟೆಯನ್ನು ಕಂಡು ಆಶ್ಚರ್ಯಪಟ್ಟರು.

## ಲೇಖನ ಬರೆಯಿರಿ.

ಜನರಲ್ಲಿ ಸಾಮಾಜಿಕ ಸಾಮರಸ್ಯವನ್ನು ಮೂಡಿಸುವ ಸಲುವಾಗಿ ಪತ್ರಿಕೆಯೊಂದರ ಓದುಗರ ಓಲೆ ವಿಭಾಗಕ್ಕೆ ಒಂದು ಪತ್ರ ಬರೆಯಿರಿ.

## ಲೇಖನ ಚಿಹ್ನೆಗಳನ್ನು ಅಳವಡಿಸಿರಿ.

ಕೆಳಗೆ ನೀಡಲಾದ ಗದ್ಯಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಗದ್ಯಭಾಗವನ್ನು ಪುನಃ ಬರೆಯಿರಿ.

ಮೈಸೂರು ಪ್ರವಾಸ ಮಕ್ಕಳಿಗೆಲ್ಲಾ ಆನಂದದಾಯಕವಾಗಿತ್ತು ಅಲ್ಲಿಯ ಅರಮನೆ ಆರ್ಟ್‌ಗ್ಯಾಲರಿ ವೃಂದಾವನ ಪಕ್ಷಿಧಾಮ ಇವೆಲ್ಲಾ ಮಕ್ಕಳನ್ನು ಆಕರ್ಷಿಸಿದವು ವೃಂದಾವನದ ಸಂಗೀತಕಾರಂಜಿಯನ್ನು ಕಂಡು ವಿನೋದ ಆಹಾ ಇದೇನು ಅಚ್ಚರಿ ನೀರು ಕೂಡಾ ತಾಳಕ್ಕನುಗುಣವಾಗಿ ಕುಣಿಯುತ್ತಿದೆಯಲ್ಲಾ ಎಂದು ಉದ್ಗಾರವೆತ್ತಿದನು ಅದಕ್ಕೆ ದನಿಗೂಡಿಸಿದ ವಿನುತಳು ಈ ಕಾರಂಜಿ ಕುಣಿಯುವುದು ಹೇಗೆ ಇದನ್ನು ಹೀಗೆ ಆವಿಷ್ಕರಿಸಿದವರು ಯಾರು ಎಂದು ಪ್ರಶ್ನಿಸಿದಳು

# 3

# ಹಿರಿಯ ದಾನಿ

ಕುರುಡನೊಬ್ಬ ಕೋಲನೂರಿ
ಮರದ ಕೆಳಗೆ ನಿಂದಿರುತ್ತ
ಕರವ ನೀಡಿ ಬೇಡುತ್ತಿದ್ದ
ಪುರದ ಜನರನು.

'ಹುಟ್ಟು ಕುರುಡ ಕಾಸ ನೀಡಿ
ಹೊಟ್ಟೆಗಿಲ್ಲ ದಯವ ತೋರಿ
ಬಟ್ಟೆಯೆಂಬುದರಿಯೆ' ಎಂದು
ಪಟ್ಟಣಿಗರನು.

ಬೇಡುತ್ತಿದ್ದ ದೈನ್ಯದಿಂದ
ಆಡುತ್ತಿದ್ದ ಶಿವನ ಮಾತ
'ಮಾಡಿರಯ್ಯ ಧರ್ಮವನ್ನು
ನೋಡಿಹೋಗದೆ'

ಬಂದರಲ್ಲಿ ಪುರದ ಜನರು
ಮಂದಿಯೆನಿತೊ ಲೆಕ್ಕವಿಲ್ಲ
ಒಂದು ಕಾಸು ಕೊಡದೆ ಅವಗೆ
ಮುಂದೆ ನಡೆದರು.

ಹಿರಿದು ಸರಿಗೆ ಹಿರಿದು ಪೇಟ
ಸರಿದು ನಡೆದ ಸಾಹುಕಾರ
ಕುರುಡನಾರೊ ತಿಳಿದು ಹೇಳಿ
ಅರಿಯಬಲ್ಲಡೆ.

ಎನಿತು ಜನರು ಬಂದರೇನು
ಎನಿತು ಜನರು ಹೋದರೇನು
ನೆನೆದರೆಲ್ಲ ಕುರುಡನಿರವ
ಮನದರಂಗದಿ.

KT-267-5/Kannada-8 BT



ಪಾಪ ಮಾಡಿ ಕುರುಡನಾಗಿ
ತಾಪಬಡುತ ಕೊರಗಿ ಕೊರಗಿ
ಈ ಪುರದಲಿ ಬಂದು ನಿಂದು
ರೂಪುಗೆಡಿಪನು.

ಹೀಗೆ ಜನರು ಕೆಲರು ಆಡಿ
ಹೋಗುತಿರಲು ಬೀದಿಯಲ್ಲಿ
ಕೂಗಿ ಕೂಗಿ ಕುರುಡನವನು
ಬಾಗಿ ನಿಂದನು.

ಕಾಳುಗಂಜಿಗಳಲಿ ತೊಳಲಿ
ಕೂಲಿಮಾಡಿ ಉಂಬ ಹೆಣ್ಣು
ಆಲಿಸುತ್ತ ಇವನ ಕೂಗ
ಸೋತು ಬಂದಳು.

ಹಣ್ಣು ಮಡಿಲಲ್ಲಿಟ್ಟುಕೊಂಡು
ಹೆಣ್ಣು ಮಗಳು ಬಂದಳವಳು
ಕಣ್ಣು ಅರಳೆ ನೋಡಿಯವನ
ಅಣ್ಣ! ಎಂದಳು.

ಸೊಗದ ಮಾತು ಸುಧೆಯ ಮಾತು
ಬಗೆಯ ಹಿಡಿವ ನಲ್ಮೆ ಮಾತು
ಪುಗಲು ಕಿವಿಯ ಶಿವನೆ!
ಎಂದು ಮೊಗವನೆತ್ತಿದ.

'ಕಾಸು ಎನ್ನ ಬಳಿಯೊಳಿಲ್ಲ
ಕಾಸುಕೊಟ್ಟು ಕೊಂಡೆ ಹಣ್ಣ
ಆಸೆ ಪಟ್ಟು ತಿನ್ನಲೆಂದು
ಈಸು ನಿನಗಿದೆ'.

ಮಡಿಲಲಿದ್ದ ಹಣ್ಣ ತೆಗೆದು
ಎಡದ ಕೈಯಲದನು ಹಿಡಿದು
ನಡುವ ಮರೆಯ ಚೂರಿಯಿಂದ
ಒಡನೆ ಕೊಯ್ದಳು.

ಹಣ್ಣಿನೊಳಗೆ ರಸದ ಮಾವು
ಬಣ್ಣ ತೀವಿ ಬೆಳೆದ ಮಾವು
'ಅಣ್ಣ ಕೊಳ್ಳೊ' ಎಂದು ಕೈಗೆ
ಉಣ್ಣಲಿತ್ತಳು.

ಅವಳ ಕಣ್ಗೆ ಕುರುಡನಲ್ಲ
ಶಿವನೆ ಎಂದು ತಿಳಿದಳವಳು
ಅವನ ಮನಕೆ ಹೆಣ್ಣದಲ್ಲ
ಶಿವನ ಕಂಡನು.

ಕಣ್ಣು ಇದ್ದ ಕುರುಡರೆಷ್ಟೊ
ಮಣ್ಣು ಹಿಡಿವ ಕಲ್ಲು ಹಿಡಿವ
ಬಣ್ಣ ಬಳಿವ ಬೀಗಿ ಮೆರೆವ
ಸಣ್ಣ ಮನುಜರು.

ದೀನನಲ್ಲಿ ದೇವನಿಹನು
ದಾನಿಯಲ್ಲಿ ದೇವನಿಹನು
ದೀನ ದಾನಿಯಲ್ಲದವರ
ಶ್ವಾನ ಎಂಬುದು.

ಕುರುಡ ಕುಂಟ ಹೆಳವರಲ್ಲಿ
ಮರುಕಗೊಂಡು ಬೋನವಿಕ್ಕು
ಹರನು ಮೆಚ್ಚಿ ತೇಗಿ ತಾನು
ಹರಸಿ ಪೊರೆವನು.

**– ಎಂ. ಆರ್. ಶ್ರೀನಿವಾಸ ಮೂರ್ತಿ**

## ಎಂ. ಆರ್. ಶ್ರೀನಿವಾಸ ಮೂರ್ತಿ

ಎಂ. ಆರ್. ಶ್ರೀನಿವಾಸ ಮೂರ್ತಿಯವರು ಕನ್ನಡ ಸಾಹಿತ್ಯಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಲೇಖಕರು. ಮೈಸೂರಿನ ರಾಮಚಂದ್ರರಾಯ – ಸಾವಿತ್ರಿ ದಂಪತಿಗಳ ಮಗನಾದ ಇವರು ಬಾಲ್ಯದಿಂದಲೇ ಕವಿತಾ ರಚನೆಯ ಆಸಕ್ತಿಯನ್ನು ತಳೆದಿದ್ದರು. ಇವರ ಸಾಹಿತ್ಯ ಸೇವೆ ಬಹುಮುಖವಾದುದು. ಕಂಠೀರವ ವಿಜಯ, ಯಮವಿಜಯ ಮತ್ತು ನಾಗರಿಕ ರೋರ್ಸ್‌ಮೇಷ್ಟ್ರು, ಕವಿಯಸೋಲು ಮುಂತಾದವು ಅವರ ಪ್ರಸಿದ್ಧ ನಾಟಕಗಳು. ಸಾವಿತ್ರಿ, ಮಹಾತ್ಯಾಗ, ರಂಗಣ್ಣನ ಕನಸಿನ ದಿನಗಳು ಅವರು ಬರೆದಿರುವ ಕಾದಂಬರಿಗಳು. ಅವರ ಮಹಾತ್ಯಾಗ ಕಾದಂಬರಿಯು ಪುಟ್ಟಣ್ಣ ಕಣಗಾಲ್‌ರವರಿಂದ ಚಲನಚಿತ್ರವಾಗಿದೆ.

ಶ್ರೀನಿವಾಸ ಮೂರ್ತಿಗಳು ಸಂಶೋಧಕ, ವಾಗ್ಮಿ ಹಾಗೂ ವಿಮರ್ಶಕರಾಗಿದ್ದರು. ಚೆನ್ನ ಬಸವ ಪುರಾಣ ಮತ್ತು ಹಿಸ್ಟರಿ ಆಂಡ್ ಫಿಲಾಸಫಿ ಆಫ್ ಲಿಂಗಾಯತ್ ರಿಲೀಜಿಯನ್‌ಗಳನ್ನು ಕುರಿತಂತೆ ಅವರು ಮಾಡಿದ ವಿಮರ್ಶೆ ಅವರ ಆಳವಾದ ವಿದ್ವತ್ತನ್ನು ಪರಿಚಯಿಸುತ್ತದೆ. ಹಿರಿಯ ದಾನಿ ಇವರ ಪ್ರಸಿದ್ಧ ಕಥನಕವನವಾಗಿದೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಕುರುಡನು ದೀನನಾಗಿ ಏನೆಂದು ಬೇಡುತ್ತಿದ್ದನು?
2. ಆ ಬೀದಿಯಲ್ಲಿ ಎಂಥ ವ್ಯಕ್ತಿಗಳು ಸರಿದು ನಡೆದರು?
3. ಕುರುಡನ ಬಗ್ಗೆ ಜನರು ಏನೆಂದು ಆಡಿಕೊಳ್ಳುತ್ತಿದ್ದರು?
4. ಹೆಣ್ಣುಮಗಳು ಕುರುಡನಿಗೆ ಹೇಗೆ ಸಹಾಯ ಮಾಡಿದಳು?

## ರೂಪಾಂತರಿಸಿರಿ

'ಹಿರಿಯ ದಾನಿ' ಕಥನ ಕವನವನ್ನು ಗದ್ಯರೂಪಕ್ಕೆ ಪರಿವರ್ತಿಸಿ ಬರೆಯಿರಿ.

## ಶೀರ್ಷಿಕೆ ಬರೆಯಿರಿ.

'ಹಿರಿಯ ದಾನಿ' ಕಥನ ಕವನಕ್ಕೆ ನಿಮಗೆ ಇಷ್ಟವಾದ ಇತರ ಶೀರ್ಷಿಕೆಗಳನ್ನು ನೀಡಿ ಆ ಶೀರ್ಷಿಕೆಗಳು ಯಾಕೆ ಸೂಕ್ತವೆಂದು ಸಮರ್ಥಿಸಿ ಬರೆಯಿರಿ.

## ಟಿಪ್ಪಣಿ ಬರೆಯಿರಿ

ನಿಮ್ಮ ಪರಿಸರದಲ್ಲಿರುವ ವಿಕಲಚೇತನರನ್ನು ಸ್ವಾವಲಂಬಿಗಳಾಗಿಸಲು ನೀವು ಮಾಡಬಹುದಾದ ಸಹಾಯಗಳೇನು ಎಂಬುದರ ಕುರಿತು ಟಿಪ್ಪಣಿ ಬರೆಯಿರಿ.

3

# ನಿರ್ಧಾರ

ನಸುಗತ್ತಲೆಯ ಮುಂಜಾನೆ ಹೊರಗೆ ಮಳೆ ಜಿನುಗುತ್ತಿತ್ತು. ಸುತ್ತೆಲ್ಲಾ ಸ್ಮಶಾನ ಮೌನ; ನಾನು ಶ್ರೀನಗರದ ನನ್ನ ಡೇರೆಯಲ್ಲಿ ಕುಳಿತು ಹೊರಗಿನ ಮಳೆಯ ಪಟಪಟ ಹನಿಯ ಶಬ್ಧಕ್ಕೆ ಕಿವಿಕೊಟ್ಟಿದ್ದೆ. ನನಗಿನ್ನೂ ಪೂರ್ಣ ಎಚ್ಚರವಾಗಿರಲಿಲ್ಲ. ಅರೆ ನಿದ್ರಾವಸ್ಥೆ. ರಾತ್ರಿ ತಡವಾಗಿ ಮಲಗಿರುವುದರಿಂದ ಇನ್ನೂ ಹೊದಿಕೆಯಿಂದ ಹೊರಬರುವ ಮನಸ್ಸಾಗಿರಲಿಲ್ಲ. ಆದರೆ ಹೊರಗೆ ಬರದೆ ಹಾಗೆ ನಿದ್ದೆಗೆ ಹೊಂದಿಕೊಂಡಿರುವುದು ಸಾಧ್ಯವಿಲ್ಲ. ಮುಂಜಾನೆ ಏಳಬೇಕು; ಸ್ವಲ್ಪ ಹೊತ್ತು ವ್ಯಾಯಾಮ, ಕಸರತ್ತಿನಲ್ಲಿ ತೊಡಗಿ ಬಳಿಕ ದೇಶರಕ್ಷಣೆಯ ಕಾಯಕದಲ್ಲಿ ತೊಡಗಬೇಕು.

ಮೈಗೆ ಹೊದ್ದಿದ್ದ ಹೊದಿಕೆಯನ್ನು ಕಿತ್ತೆಸೆದು ಡೇರೆಯ ಪರದೆ ತಳ್ಳಿ ಹೊರ ಇಣುಕಿದೆ. ಮೈದಾನದ ಉದ್ದಕ್ಕೂ ಅನೇಕ ಡೇರೆಗಳು. ಎಲ್ಲದರಲ್ಲೂ ನನ್ನಂತೆಯೇ ಮನೆಬಿಟ್ಟು ಬಂದು ಇಲ್ಲಿ ದೇಶವನ್ನು ಕಾಯತೊಡಗಿರುವ ಜನರು. ಇಲ್ಲಿ ಯಾವುದೇ ಭೇದವಿರಲಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತರು ಎಲ್ಲರೂ ಒಂದೇ ತಾಯ ಮಕ್ಕಳು. ಭಾರತ ಮಾತೆಯ ರಕ್ಷಣೆಯಲ್ಲಿ ಮಗ್ನರಾಗಿದ್ದರು.

ಭಾರತದ ಮಗನಾಗಿ ನಾನು ಈ ದೇಶದ ಅನ್ನದ ಋಣ ತೀರಿಸಬೇಕಿತ್ತು. ಜವಾನನ ದಿರಸನ್ನು ಒಮ್ಮೆ ಧರಿಸಿದೆವೆಂದರೆ ಸಾಕು. ಧೀಮಂತರಾಗಿಬಿಡುತ್ತಿದ್ದೆವು. ನಮಗೆ ಮತ್ತೇನೂ ಕಾಣುತ್ತಿರಲಿಲ್ಲ. ದೇಶರಕ್ಷಣೆಯೊಂದೇ ಯೋಚನೆ.

ನಾನು ತಲೆಗೆ ಕ್ಯಾಪ್ ಧರಿಸಿಕೊಂಡು ಡೇರೆಯ ಹೊರಗೆ ಬಂದೆ. ಮಳೆ ಇನ್ನೂ ಜಿನುಗುತ್ತಿತ್ತು. ನಾನು ತಲೆಯೆತ್ತಿ ಬಾನಿನೆಡೆಗೆ ನೋಡಿದೆ. ಆಗಸದಲ್ಲಿ ಕಪ್ಪು ಮೋಡ ದಟ್ಟೈಸಿತ್ತು. ಮಳೆಸುರಿಯ ತೊಡಗಿದಾಗ ಊರಿನ ನೆನಪೂ ಕಾಡತೊಡಗಿತು. 'ಇಲ್ಲಿನಂತೆ ಊರಲ್ಲೂ ಮಳೆ ಬಂದರೆ... ಮನೆಯ ತೀರದಲ್ಲಿರುವ ನದಿ ಉಕ್ಕಿ ಹರಿದರೆ....' ಎಂಬ ಆತಂಕವೂ ಮೂಡಿತು. ಊರಿನ ನೆನಪಿನ ಜೊತೆ ಮನೆ, ಆ ಮನೆಯಲ್ಲಿ ನನಗಾಗಿ ಕಾದಿರುವ ಅಮ್ಮ, ಪತ್ನಿ ಹಾಗೂ ಮಗಳು ಸುಹಾನ ಇವರೆಲ್ಲರ ನೆನಪು ಬಂದಾಗ ಒಂದು ಕ್ಷಣ ಮೂಕನಾಗಿಬಿಟ್ಟೆನು.

ಮೆಹಮೂದ್ ನನ್ನ ಬಳಿ ನಿಂತಿದ್ದ. ಆತ ನನಗೆ ಹೆಚ್ಚು ಪ್ರಿಯನಾದವನು. ಆತ ಹೇಳಿದ "ಅಪ್ಪ, ಅಮ್ಮ ಅದೆಷ್ಟು ಬೇಡಿಕೊಂಡರು ಗೊತ್ತೇ? ಊರಲ್ಲಿ ಅನುಭವಿಸಿಕೊಂಡು ಹಾಯಾಗಿರುವಷ್ಟು ಆಸ್ತಿ ಅಪ್ಪನಲ್ಲಿದ್ದವು. ಆದರೆ ನನಗೆ ಮಿಲಿಟರಿ ಸೇರಬೇಕೆಂಬ ಹಠ, ಉತ್ಸಾಹ. ಬಾಳಸಂಗಾತಿ ಮೆಹರುನ್ನೀಸಳ ಮಾತು ಕೂಡಾ ಪಥ್ಯವಾಗಿರಲಿಲ್ಲ. ಪ್ರತಿಕ್ಷಣ ಸಾವನ್ನು ನಿರೀಕ್ಷಿಸುತ್ತಾ ಇರುವ ಸೈನಿಕನಾಗುವುದು

ಬೇಡ ಎಂಬ ಅವರ ಮಾತನ್ನು ಆಲಿಸದೆ ಇತ್ತ ಬಂದೆ. ಆದರೆ ಈ ಹವಾಮಾನ ವೈಪರೀತ್ಯ ಕಂಡಾಗ ಮನೆಯಲ್ಲಿ ಹಾಯಾಗಿ ಇದ್ದು ಬಿಡೋಣ ಅನಿಸುತ್ತೆ." ನಾನು ಅವನ ಬೆನ್ನು ತಟ್ಟುತ್ತಾ ಹೇಳಿದೆ, "ಇಲ್ಲಿ ನಿನ್ನ ಜೊತೆ ನಾನಿಲ್ಲವೇ. ಇಲ್ಲಿ ಎಲ್ಲರೂ ಹಾಗೆಯೇ ಯೋಚಿಸಿದರೆ ದೇಶಕಾಯುವವರು ಯಾರು? ಎಲ್ಲರೂ ಬದುಕುತ್ತಾರೆ. ಜೀವನವನ್ನು ಅನುಭವಿಸುತ್ತಾರೆ. ಒಂದುದಿನ ಸಾಯುತ್ತಾರೆ. ಆದರೆ ಮನುಷ್ಯ ಹೇಗೆ ಬದುಕಿದ ಎಂಬುದೇ ಮುಖ್ಯ. ಸಾವಿನ ನಂತರವೂ ಯಾರ ಹೆಸರು ಅಮರವಾಗಿರುವುದೋ ಅಂಥ ಒಳ್ಳೆಯ ಬದುಕನ್ನೇ ಬದುಕುವುದು ಮುಖ್ಯ."

ಆತ ಹೇಳಿದ, "ನಾನು ಮಾತಿಗೆ ಹೇಳಿದೆ ಅಷ್ಟೇ; ನನಗೆ ಹಿಂದಿರುಗಿ ಹೋಗುವ ಆಸೆ ಇಲ್ಲ"

ಅಷ್ಟರಲ್ಲಿ ಅಮರನಾಥ ಪ್ರಯಾಣದ ಮಾರ್ಗದಲ್ಲಿ ಉಗ್ರಗಾಮಿಗಳು ಅಡಗಿಸಿಟ್ಟ ಬಾಂಬ್ ಸಿಡಿದು ಎಂಟು ಮಂದಿ ಯಾತ್ರಿಕರು ಮಡಿದ ಸುದ್ದಿ ರೇಡಿಯೋದಲ್ಲಿ ಬಿತ್ತರವಾಯಿತು. ನನ್ನೆದೆ ಮೌನವಾಗಿ ರೋದಿಸಿತು. ಉಗ್ರಗಾಮಿಗಳ ಹೇಯಕೃತ್ಯಕ್ಕೆ ಮನಕಲಕಿತು. ನಾನು ಕರ್ತವ್ಯದ ಕಡೆಗೆ ಸಾಗಿದೆ.

ಸಾಯಂಕಾಲ ಡೇರೆಗೆ ಮರಳಿದಾಗ ಪತ್ರವೊಂದು ನನ್ನನ್ನು ಕಾಯುತ್ತಿತ್ತು. ಇಲ್ಲಿ ಮನೆಯ ನೆನಪಾಗಿ ಚಿಂತೆ ಆವರಿಸಿದಾಗ ಊರಿನಿಂದ ಬಂದ ಪತ್ರ ಮನಸ್ಸಿಗೆ ಮುದನೀಡುತ್ತದೆ. ಆತುರದಿಂದ ಪತ್ರ ಓದಿದರೆ ಒಂದೇ ವಾಕ್ಯದಲ್ಲಿ ಪತ್ನಿ ಬರೆದಿದ್ದಳು. 'ನಿಮ್ಮ ಅಮ್ಮ ಮರಣದ ಹೊಸ್ತಿಲಲ್ಲಿ ಇದ್ದಾರೆ. ನಿಮ್ಮನ್ನು ಕೊನೆಯ ಕಾಲದಲ್ಲಿ ನೋಡುವ ಇಚ್ಛೆ. ಕೂಡಲೇ ರಜೆ ಹಾಕಿ ಅಮ್ಮನಿಗಾಗಿ ಮನೆಗೆ ಬನ್ನಿ'

ನನ್ನೆದೆ ಒಡೆಯಿತು. ಕಣ್ಣಂಚಿನಲ್ಲಿ ನೋವಿನ ಹನಿ ತುಳುಕಿತ್ತು. ಒಂದು ವರ್ಷದ ಹಿಂದೆ ನಾನು ಊರಿನಿಂದ ಹೊರಟು ನಿಂತಾಗ ತಲೆಸವರಿ ಅಮ್ಮ ಆಶೀರ್ವದಿಸಿದ್ದಳು. 'ಮಗ ದೇಶವನ್ನು ಕಾಯುವ ವೀರ ಸೈನಿಕನಾಗಿದ್ದಾನೆ' ಎಂಬ ತೃಪ್ತಿಯ ನಗು ಅವರಲ್ಲಿತ್ತು. ಆ ರಾತ್ರಿ ನಿದ್ರೆಯೇ ಬರಲಿಲ್ಲ. ಮರುದಿನ ಪತ್ರವನ್ನು ಮೇಜರ್‌ಗೆ ತೋರಿಸಿದೆ. "ದೇಶಕ್ಕೆ ನಿನ್ನ ಅಗತ್ಯ ಎಷ್ಟಿದೆಯೋ; ಅಷ್ಟೇ ಅಗತ್ಯ ನಿನ್ನ ಅಮ್ಮನಿಗೂ ಇದೆ. ನೀನು ಊರಿಗೆ ಹೋಗಿ ಬಾ" ಮೇಜರ್ ನನಗೆ ಅನುಮತಿ ಇತ್ತರು. ಒಂದು ವಾರದ ರಜೆ ಪಡೆದುಕೊಂಡೆ.


ನಾನು ಊರಿಗೆ ಹೊರಟು ನಿಂತೆ. ಮೆಹಮೂದ್ ನನ್ನ ಬಳಿ ಬಂದು"ಗೆಳೆಯಾ ನಿನ್ನ ತಾಯಿ ಆರೋಗ್ಯವಂತರಾಗಿ ಇನ್ನಷ್ಟು ಕಾಲ ಬದುಕಲಿ ಎಂದು ಹಾರೈಸುತ್ತೇನೆ" ಎನ್ನುತ್ತಾ ಒಂದು ಪ್ಯಾಕೆಟನ್ನು ಕೊಟ್ಟು, "ನೀನು ನನಗೊಂದು ಉಪಕಾರ ಮಾಡಬೇಕು. ಈ ಪ್ಯಾಕೆಟನ್ನು ಬೆಂಗಳೂರಿನಲ್ಲಿರುವ ನನ್ನ ಮಡದಿಗೆ ತಲುಪಿಸಿ, ನನ್ನ ಅಪ್ಪ ಅಮ್ಮನನ್ನು ಕಂಡು ಕ್ಷೇಮ ವಿಚಾರಿಸಿ ಬರಬೇಕು" ಎಂದು ಹೇಳಿದ. ನಾನು ಅವನಿಗೆ ಕೃತಜ್ಞತೆ ತಿಳಿಸಿ ನಾಡಿನತ್ತ ಪಯಣ ಬೆಳೆಸಿದೆ.

ಮನೆಗೆ ತಲುಪಿ ಅಮ್ಮನನ್ನು ನೋಡಿದಾಗ 'ಇವಳು ನನ್ನ ತಾಯಿಯೇ' ಎಂದು ಅನುಮಾನಪಡುವಷ್ಟು ನಿತ್ರಾಣವಾಗಿದ್ದಳು. ಬಿಳಚಿಕೊಂಡ ಮುಖ ಹಾಗೂ

ಅರೆ ಮುಚ್ಚಿದ ಕಣ್ಣುಗಳೊಂದಿಗೆ ಸರಾಗವಾಗಿ ಉಸಿರಾಡಲೂ ಆಗದ ಸ್ಥಿತಿಯಲ್ಲಿದ್ದಳು. ನನ್ನನ್ನು ಕಂಡು ಅವಳ ಕಳೆಗುಂದಿದ ಮುಖದಲ್ಲಿ ಮುಗುಳ್ನಗೆ ಚಿಮ್ಮಿತು. ಹಾಸಿಗೆಯಿಂದಲೇ ಕೈಚಾಚಿ ನನ್ನ ತಲೆಸವರಿ, "ಅಂತೂ ಬಂದೆಯಲ್ಲ ಮಗು. ನಾನು ಸಾಯುವ ಮುಂಚೆ ನಿನ್ನನ್ನು ನೋಡುತ್ತೇನೋ ಇಲ್ಲವೋ ಎಂಬ ಅನುಮಾನವಿತ್ತು. ಇನ್ನು ನೆಮ್ಮದಿಯಾಗಿ ಸಾಯಬಹುದು" ಎಂದಳು.

"ಹಾಗೆ ಹೇಳಬಾರದು ಅಮ್ಮ. ನಿನ್ನ ಬದುಕು ನಮಗೆ ಮುಖ್ಯ. ನಿನ್ನ ಸೊಸೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲವೇ?" ಎಂದಾಗ, "ಅವಳು ಜನ್ನತ್‌ನಿಂದ ಬಂದ ದೇವತೆ ಕಣೋ! ನನ್ನನ್ನು ಹೆತ್ತಬ್ಬೆಯಂತೆ ನೋಡಿಕೊಳ್ಳುತ್ತಿದ್ದಾಳೆ. ನಿಜಕ್ಕೂ ನಿನಗೆ ಅವಳು ದೊರಕಿದ್ದು ನಿನ್ನ ಅದೃಷ್ಟ" ಎಂದಳು. ನನ್ನ ಪತ್ನಿ ನನ್ನನ್ನು ಒತ್ತಟ್ಟಿಗೆ ಕರೆದು "ಅಮ್ಮನಿಗೆ ಕ್ಯಾನ್ಸರ್. ಅದು ಅಂತಿಮ ಹಂತಕ್ಕೆ ತಲುಪಿದೆ ಎಂದು ವೈದ್ಯರು ಹೇಳಿದ್ದಾರೆ. ಅವರಿರುವಷ್ಟು ಕಾಲ ಚೆನ್ನಾಗಿ ನೋಡಿಕೊಂಡಿರೋಣ" ಎಂದಾಗ ದುಃಖ ಉಕ್ಕಿ ಬಂದಿತು.

ಮರುದಿನ ಅಮ್ಮನಿಗೆ ಬೆಳಗಾಗಲಿಲ್ಲ. ನನ್ನನ್ನು ಹೊತ್ತು, ಹೆತ್ತು, ಸಲಹಿದ ಅಮ್ಮ ಎಂದೆಂದೂ ಬಾರದ ಲೋಕಕ್ಕೆ ಹೊರಟುಹೋದಳು. ಈ ಜಗತ್ತಿನ ಬೆಳಕು ಅಮ್ಮನ ಪಾಲಿಗೆ ನಂದಿ ಹೋಯಿತು. ಸಂಜೆಯಾಗುತ್ತಲೇ ಅಮ್ಮನ ದೇಹ ಮಸೀದಿಯ ಹಿಂದಿನ ಭಾಗದಲ್ಲಿ ದಫನವಾಯಿತು.



ಆ ರಾತ್ರಿ ಮನೆ ಬಿಕೋ ಅನ್ನತೊಡಗಿತು. 'ಇನ್ನು ಈ ಮನೆಯಲ್ಲಿ ಅಮ್ಮ ಇಲ್ಲ. ಹಿರಿಯರೆನ್ನುವ ದಿಕ್ಕು ಇಲ್ಲ. ನಾನು ಮರಳಿ ಹೋದರೆ ಇಲ್ಲಿ ಮಡದಿ ಮಕ್ಕಳಿಗೆ ಯಾರಿದ್ದಾರೆ?' ಎಂಬ ಸಮಸ್ಯೆ ಕಾಡತೊಡಗಿತು. ಅಂತೂ ಅಮ್ಮನ ಮೂರನೇ ದಿನದ ಕಾರ್ಯವನ್ನು ಮುಗಿಸಿ ಮೆಹಮೂದನ ಮನೆಗೆ ಹೊರಟೆ.

ಮಂಗಳೂರಿನಿಂದ ಬೆಂಗಳೂರಿಗೆ ರಾತ್ರಿಯ ಪಯಣ. ಮೆಹಮೂದನ ಮನೆ ಹುಡುಕಿ ಪರಿಚಯ ಹೇಳಿಕೊಂಡಾಗ ಅವರು ಆತ್ಮೀಯವಾಗಿಯೇ ಸ್ವಾಗತಿಸಿದರು. ಅವನ ಅಪ್ಪ - ಅಮ್ಮ ಸುಖದುಃಖ ಹಂಚಿಕೊಂಡರು. ಮೆಹಮೂದ್ ನೀಡಿದ್ದ ಪ್ಯಾಕೆಟನ್ನು ಮೆಹರುನ್ನೀಸಳಿಗೆ ನೀಡಿದಾಗ ಅವಳ ಕಣ್ಣಿಂದ ಆನಂದಬಾಷ್ಪ ಉರುಳಿತು. ನಾನು ಊರಿಗೆ ಮರಳಲು ಸಿದ್ಧನಾದಾಗ

ಅವಳು ಒಂದು ಪ್ಲಾಸ್ಟಿಕ್ ಹೂಗುಚ್ಚವನ್ನು ಕೊಡುತ್ತಾ "ಎಂದೂ ಬಾಡದಿರುವ ಈ ಹೂವನ್ನು ನನ್ನ ಪ್ರೀತಿಯ ಕಾಣಿಕೆಯಾಗಿ ಕೊಡಿ" ಎಂದಳು. ಒಳಗಿನಿಂದ ಬಂದ ತಾಯಿ ತಾನೇ ಹೊಲಿದ ಸ್ವೆಟರ್‌ನ್ನು ಕೊಡುತ್ತಾ "ಅಲ್ಲಿ ತುಂಬ ಚಳಿ ಇರಬಹುದು. ಇದನ್ನೂ ಕೊಟ್ಟುಬಿಡು" ಎಂದಳು.

ನಾನು ರಾತ್ರಿಯೇ ಹೊರಟು ಮನೆ ತಲುಪಿದೆ. ರಜೆ ಮುಗಿಯುವುದರಲ್ಲಿತ್ತು. ಇಂದೇ ಮನೆಯ ಬಗ್ಗೆ ನಾನು ನಿರ್ಧಾರ ತಳೆಯಬೇಕಿತ್ತು.

ನನ್ನ ಪತ್ನಿ ಹೇಳಿದಳು, "ನೀವು ಸೇನೆಗೆ ರಾಜಿನಾಮೆ ಇತ್ತು ಬನ್ನಿ"

"ಅದು ಹೇಗೆ ಸಾಧ್ಯ?"

"ಮತ್ತೆ ಏನು ನಿರ್ಧಾರ?"

'ಅದು ದೇಶ ಕಾಯೋ ಹುದ್ದೆ. ಅದನ್ನು ಬಿಟ್ಟು ಬಂದು ಇಲ್ಲೇ ಕೆಲಸ ಹುಡುಕುವುದು ಅಸಾಧ್ಯವೇನೂ ಆಗಲಾರದು. ಆದರೆ ನನಗೆ ಸೈನಿಕನಾಗಿರುವುದು ಹೆಚ್ಚು ಪ್ರಿಯ' ನನ್ನ ಮನಸ್ಸಿನಲ್ಲಿ ದ್ವಂದ್ವವಿತ್ತು.

"ನಾನು ಹೋಗಿ ಒಂದೆರಡು ತಿಂಗಳ ಕಾಲ ಇದ್ದು ಬರುತ್ತೇನೆ" ಎಂದೆ.

ಭಾರವಾದ ಮನಸ್ಸಿನಲ್ಲೇ ನಾನು ಶ್ರೀನಗರಕ್ಕೆ ಪ್ರಯಾಣ ಬೆಳೆಸಿದೆ. ಮನಸ್ಸಿಗೆ ಸ್ವಲ್ಪವೂ ನೆಮ್ಮದಿ ಇರಲಿಲ್ಲ. ಮನೆಗೊಂದು ಹಿರಿ ತಲೆ ಇಲ್ಲದೆ ಹೆಂಡತಿಯನ್ನೂ ಮಗುವನ್ನೂ ಬಿಟ್ಟು ಬಂದ ಅನಾಥಪ್ರಜ್ಞೆ ಕಾಡುತ್ತಿತ್ತು. 'ಸೇನೆಗೆ ರಾಜಿನಾಮೆ ಇತ್ತರೆ ಹೇಗೆ?' ಎಂಬ ಚಿಂತನೆಯೂ ಮೂಡಿತ್ತು.

ನನ್ನ ಕೈಯಲ್ಲಿ ಮೆಹಮೂದನಿಗೆ ಅವನ ಮಡದಿ, ತಾಯಿ ಕೊಟ್ಟ ಉಡುಗೊರೆಗಳಿದ್ದುವು. ಆದರೆ ಶ್ರೀನಗರಕ್ಕೆ ತಲುಪುತ್ತಿದ್ದಂತೆ ನನಗೆ ಒಂದು ಆಘಾತಕರ ಸುದ್ದಿ ಎದುರಾಯಿತು. ಮೆಹಮೂದ್ ಗಡಿ ರಕ್ಷಣೆಯ ವೇಳೆ ಗುಂಡೇಟಿಗೆ ಬಲಿಯಾಗಿದ್ದ. ಹಿಂದಿನ ದಿನವೇ ಅವನ ದೇಹವನ್ನು ಊರಿಗೆ ಕಳುಹಿಸಲಾಗಿತ್ತು.

ನಾನು ಭಾರವಾದ ಮನಸ್ಸಿನೊಂದಿಗೆ ಉಡುಗೊರೆಗಳನ್ನು ಅವನ ಭಾವಚಿತ್ರದ ಎದುರು ಇರಿಸಿದೆನು.

'ದೇಶಸೇವೆಯ ಕನಸುಗಳನ್ನು ಕಟ್ಟಿಕೊಂಡು ಧೀರ ಸೈನಿಕನಾಗಬೇಕೆಂದಿದ್ದ ಮೆಹಮೂದನನ್ನು ಕೊಂದವರಿಗೆ ಶಿಕ್ಷೆಯಾಗಬೇಡವೇ?' ಸೈನಿಕನಾಗಿಯೇ ಮುಂದುವರಿಯುವ ದೃಢನಿರ್ಧಾರ ತಾಳಿದೆನು. ಸೇನಾದಿರಸು ತೊಟ್ಟು ಶಿರಸ್ತ್ರಾಣ ಧರಿಸಿ ಹೆಗಲ ಮೇಲೆ ಬಂದೂಕು ಏರಿಸಿ ದಿಟ್ಟ ಹೆಜ್ಜೆ ಇಟ್ಟು ಗಡಿಯತ್ತ ಪಯಣ ಬೆಳೆಸಿದೆ.

**- ಫಕ್ರುದ್ದೀನ್ ಇರುವೈಲು**

# ಫಕ್ರುದ್ದೀನ್ ಇರುವೈಲು

ಫಕ್ರುದ್ದೀನ್ ಇರುವೈಲು ಅವರು ಕರ್ನಾಟಕದ ಮೂಡಬಿದಿರೆ ಸಮೀಪದ ಇರುವೈಲು ಎಂಬಲ್ಲಿ ಶೇಕ್‌ಬ್ಯಾರಿ - ಮರಿಯಮ್ಮ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಲ್ಲೇ ಸಾಹಿತ್ಯಾಸಕ್ತರಾದ ಶ್ರೀಯುತರು ಬರೆದ ಕತೆಗಳು ಕನ್ನಡ ನಿಯತಕಾಲಿಕೆಗಳಲ್ಲಿ ಪ್ರಕಟವಾದಾಗ ಅದರಿಂದ ಉತ್ತೇಜಿತರಾದರು. ಮುಂದೆ ಕನ್ನಡನಾಡಿನ ಅನೇಕ ಪತ್ರಿಕೆಗಳಲ್ಲಿ ಇವರು ಬರೆದ ಕತೆಗಳು ಪ್ರಕಟವಾಗಿ ಉತ್ತಮ ಸಣ್ಣಕಥಾಗಾರರೆಂಬ ಖ್ಯಾತಿಗೆ ಪಾತ್ರರಾದರು. ಕನ್ನಡದ ವಿವಿಧ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾದ ಇವರ ಕತೆಗಳೆಲ್ಲ ಅನಿರೀಕ್ಷಿತ ಎಂಬ ಕಥಾಸಂಕಲನದಲ್ಲಿ ಮೂಡಿಬಂದಿವೆ. ಎಲ್ಲಿರುವೆ ಕಂದ, ಅಲೀಮಾ ಅಕ್ಷರ ಕಲಿತದ್ದು, ನೊಂಬಲ ಮುಂತಾದವುಗಳು ಇವರ ಇತರ ಪ್ರಕಟಿತ ಕಥಾಸಂಕಲನಗಳು. ಹಲೀಮಾ, ಬದುಕೆಂಬ ಮಾಯೆ ಎಂಬ ಕಾದಂಬರಿಗಳು ಹಾಗೂ ನಾದಿರಾ ಎಂಬ ನೀಳ್ಗತೆಯೂ ಇವರಿಂದ ರಚಿತವಾಗಿವೆ. ಅಲಿಮಾ ಅಕ್ಷರ ಕಲಿತದ್ದು ಎಂಬ ಕೃತಿಗೆ 2001ನೇ ಇಸವಿಯಲ್ಲಿ ಮುಸ್ಲಿಂ ಸಾಹಿತ್ಯ ಪ್ರಶಸ್ತಿ ದೊರಕಿದೆ. ಪ್ರಸ್ತುತ ಕಥಾಭಾಗವನ್ನು ಅನಿರೀಕ್ಷಿತ ಎಂಬ ಕಥಾಸಂಕಲನದಿಂದ ಆಯ್ದುಕೊಳ್ಳಲಾಗಿದೆ.



## ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮಳೆ ಸುರಿಯುವುದನ್ನು ಕಂಡಾಗ ಸೈನಿಕನ ಮನದಲ್ಲಿ ಮೂಡಿದ ನೆನಪುಗಳೇನು?
2. ಸೇನಾ ಸೇವೆಯಿಂದ ಹಿಂಜರಿಯುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದ ಮೆಹಮೂದನೊಡನೆ ಸಹಸೈನಿಕನು ಏನು ಹೇಳಿದನು?
3. ಮನೆಗೆ ತಲುಪಿದಾಗ ಸೈನಿಕನ ತಾಯಿಯ ಸ್ಥಿತಿ ಹೇಗಿತ್ತು?
4. ಮೆಹಮೂದನ ಮರಣದ ವಾರ್ತೆ ತಿಳಿದ ಸೈನಿಕನು ಕೈಗೊಂಡ ನಿರ್ಧಾರವೇನು?

## ದಿನಚರಿ ಬರೆಯಿರಿ.

ಕಥೆಯಲ್ಲಿ ಬರುವ ಯಾವುದಾದರೊಂದು ಸನ್ನಿವೇಶದ ಆಧಾರದಲ್ಲಿ ಸೈನಿಕನೊಬ್ಬನ ದಿನಚರಿಯನ್ನು ಊಹಿಸಿ ಬರೆಯಿರಿ.

## ಕಿರುಲೇಖನ ಬರೆಯಿರಿ.

ದೇಶ ರಕ್ಷಣೆಯ ಕಾರ್ಯದಲ್ಲಿ ನಿರತನಾಗಿರುವ ಸೈನಿಕರ ಮಾನಸಿಕ ತುಮುಲಗಳ ಕುರಿತು ಪಾಠದ ಆಧಾರದಲ್ಲಿ ಟಿಪ್ಪಣಿ ಬರೆಯಿರಿ.

## ಕಥೆ ಬರೆಯಿರಿ.

ಪರಸ್ಪರ ಸಹಾಯ ಸಹಕಾರಗಳು ವಸ್ತುವಾಗಿರುವ ಕಥೆಯೊಂದನ್ನು ಬರೆಯಿರಿ. ತರಗತಿಯ ಕಥೆಗಳನ್ನು ಒಟ್ಟು ಸೇರಿಸಿ ಕಥಾಸಂಚಿಕೆ ತಯಾರಿಸಿರಿ.

## ಸಂಕ್ಷೇಪಿಸಿ ಬರೆಯಿರಿ.

ಕೆಳಗೆ ಕೊಡಲಾದ ಗದ್ಯಭಾಗವನ್ನು ನಾಲ್ಕೈದು ವಾಕ್ಯಗಳಿಗೆ ಸಂಕ್ಷೇಪಿಸಿ ಬರೆಯಿರಿ.

ಪ್ರಸಿದ್ಧ ಪಂಡಿತರಾದ ಮೈಕೇಲ ಮಧುಸೂಧನ ದತ್ತರು ಬಂಗಾಳದ ಹೆಸರಾಂತ ಕವಿಗಳೂ ಆಗಿದ್ದರು. ಅವರು ಒಮ್ಮೆ ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅಲ್ಲಿ ಅತ್ತಿತ್ತ ತಿರುಗಾಡುವುದರೊಳಗೆ ಅವರ ಬಳಿಇದ್ದ ಹಣವೆಲ್ಲ ಖರ್ಚಾಗಿ ಹೋಯಿತು. ಉಪವಾಸ ಬೀಳಬೇಕಾದ ಸ್ಥಿತಿ ಬಂದಿತು. ಅದರಂತೆ ಉಪವಾಸ ವನವಾಸ ಮಾಡಿಯೂ ಆಯಿತು. ಕಡೆಗೆ ಕಷ್ಟಗಳನ್ನು ತಾಳಲಾರದೆ ಅವರು ಈಶ್ವರಚಂದ್ರ ವಿದ್ಯಾಸಾಗರರಿಗೆ ಒಂದು ಪತ್ರ ಬರೆದರು. ಅದರಲ್ಲಿ "ನಾನೀಗ ಫ್ರಾನ್ಸಿನಲ್ಲಿರುವೆ. ಕೈಯಲ್ಲಿ ಒಂದು ಕಾಸು ಕೂಡಾ ಇಲ್ಲ. ಉಪವಾಸದಿಂದಲೇ ಎಷ್ಟೋ ದಿನಗಳನ್ನು ಕಳೆದಿರುವೆ. ಇನ್ನೂ ಕೆಲವು ದಿನ ಹೀಗೆಯೇ ಇದ್ದರೆ ಹಸಿವೆಯ ಕಸಿವಿಸಿಯಿಂದಲೇ ಕಂಗೆಟ್ಟು ಪ್ರಾಣಬಿಡುವೆ" ಎಂದು ಬರೆದಿತ್ತು. ಬುದ್ಧಿವಂತರಿಗೊದಗಿದ ಈ ಕಷ್ಟಸ್ಥಿತಿಯನ್ನು ಓದಿ ವಿದ್ಯಾಸಾಗರರ ಕಣ್ಣಲ್ಲಿ ನೀರು ಬಂತು. ಅವರು ಎಲ್ಲೆಲ್ಲಿಯೋ ಏನೇನೋ ಪ್ರಯತ್ನ ಮಾಡಿದರು; ಹಣಕೂಡಿಸಿದರು; ಮಧುಸೂಧನದತ್ತರಿಗೆ ಒಂದು ಸಾವಿರದ ಐದುನೂರು ರೂಪಾಯಿಗಳನ್ನು ಕಳುಹಿಸಿದರು! ಕೆಲವು ದಿನಗಳ ಮೇಲೆ ಮತ್ತೆ ನಾಲ್ಕು ಸಾವಿರದ ಐದುನೂರು ರೂಪಾಯಿ ಮುಟ್ಟಿಸಿದರು! 'ಗುಣವನ್ನು ಗೌರವಿಸಬೇಕು' ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೇ?

# ಅರ್ಥಕೋಶ

**ಅ**

ಅನೂಚಾನ - ಪರಂಪರೆಯನ್ನು ಬಿಡದ, ಉತ್ತಮ ನಡತೆಯ

ಅಭೂತಪೂರ್ವ - ಮೊದಲೆಂದೂ ಆಗದೇ ಇದ್ದ

ಅಳಲು - ದುಃಖ

ಅಸ್ತಿವಾರ - ಅಡಿಪಾಯ, ಪಂಚಾಂಗ

**ಆ**

ಆಂತ - ಹೊಂದಿ

ಆಂದೋಲನ - ಚಳವಳಿ

ಆಯುಧಪಾಣಿ - ಆಯುಧವನ್ನು ಹಿಡಿದ

**ಇ**

ಇಕ್ಕು - ಇಡು, ಇರಿಸು, ತೊಡಿಸು

**ಈ**

ಈಸು - ಇಷ್ಟು

**ಉ**

ಉದ್ಗಮಿಸು - ಮೇಲೇರು

ಊರ್ಮಿ - ದೊಡ್ಡ ಅಲೆ

ಉರಾಲು - ಉಳುವ, ಗಾಡಿ ಎಳೆಯುವ ಎತ್ತು ಅಥವಾ ಕೋಣಗಳನ್ನು ಹುರಿದುಂಬಿಸುವುದಕ್ಕಾಗಿ ಹೇಳುವ ಚುಟುಕು ಕವನ (ತುಳು)

**ಎ**

ಎವೆಯಿಕ್ಕದೆ - ರೆಪ್ಪೆಯನ್ನು ಮುಚ್ಚದೆ

**ಒ**

ಒತ್ತಟ್ಟು - ಬದಿ

ಒದೆ - ಮೆಟ್ಟು

ಒದ್ದು - ತುಳಿದು

**ಔ**

ಔಕು - ಅದುಮು

**ಕ**

ಕಂಪು - ಪರಿಮಳ

ಕಲರವ - ಹಕ್ಕಿಗಳ ನಿನಾದ

ಕಹಳೆ - ಒಂದು ಬಗೆಯ ವಾದ್ಯ, ಉದ್ದವಾಗಿರುವ ತುತ್ತೂರಿ.

ಕನೆಹಲಗೆ - ಕಂಬಳದಲ್ಲಿ ಉಪಯೋಗಿಸುವ ಒಂದು ತರಹದ ಹಲಗೆ.

ಕಾಯಕ - ಕೆಲಸ

ಕಾಲಕೂಟ - ವಿಷ

ಕಿನಾರೆ - ತಡ, ದಡ

ಕುಡಿ - ಚಿಗುರು, ತುದಿ

ಕೆಚ್ಚು - ಶೌರ್ಯ

ಕೋಲಾಹಲ - ಗಲಾಟೆ, ಗದ್ದಲ, ಚೀರಾಟ

ಕುಳಿರ್ಗಾಳಿ - ತಂಪಾದ ಗಾಳಿ

**ಗ**

ಗಜ - ಆನೆ, ಅಳತೆಯ ಒಂದು ಮಾನ (ಮೂರು ಅಡಿ)

ಗದರಿಸು - ಹೆದರಿಸು

ಗುತ್ತುಬೀಡು - ತರವಾಡು ಮನೆ

ಗತಾಸು - ಹೋದಜೀವ, ಸತ್ತ

ಗುಮಾನಿ - ಸಂಶಯ

ಗೂಢಚಾರ - ಬೇಹುಗಾರ

## ಚ

ಚರಾಚರ - ಚಲಿಸುವ ಹಾಗೂ ಚಲಿಸದಿರುವ

ಚಾಲ್ತಿ - ರೂಢಿ

ಚಿರ - ಶಾಶ್ವತ

ಚುಂಗಾಣಿ - ಚಿಕ್ಕದಾದ ಹೊಗೆಬತ್ತಿ ಕೊಳವೆ

ಚುಂಡಕಾಯಿ - ಕಾಡುಬದನೆ

ಚುಂಬಕ - ಅಯಸ್ಕಾಂತ

## ಟ

ಟೊಂಕಕಟ್ಟಿ ನಿಲ್ಲು - ಸಿದ್ಧರಾಗು

## ಜ

ಜನ್ನತ್ - ಸ್ವರ್ಗ

ಜಮಾಯಿಸು - ಒಟ್ಟು ಸೇರು

ಜಾತ್ಯತೀತ - ಜಾತಿಯನ್ನು ಮೀರಿದ, ಜಾತಿಯ ಭಾವನೆಯಿಂದ ಹೊರತಾದ

ಜಾಲಾಡು - ಶೋಧಿಸು, ಹುಡುಕು

ಜಿನುಗು - ತೊಟ್ಟಿಕ್ಕು, ಬಿಂದುಬಿಂದುವಾಗಿ ಬೀಳು

ಜೋಡಿದಾರ - ಜಮೀನು ಮತ್ತು ಗ್ರಾಮಗಳನ್ನು ಬಹುಮಾನವಾಗಿ ಪಡೆದವ, ಇನಾಂದಾರ.

## ತ

ತಹಬಂದಿ - ನಿಯಂತ್ರಣ

ತಾತ್ಪೂರ್ತಿಕ - ತಾತ್ಕಾಲಿಕ, ಆ ಕಾಲಕ್ಕೆ ಸೀಮಿತವಾದ

ತಿಮಿರ - ಕತ್ತಲು

ತಿರುಕ - ಭಿಕ್ಷುಕ

ತಿಲಾಂಜಲಿ - ಅರ್ಪಿಸು, ಬಿಟ್ಟುಬಿಡು

ತೀಡು - ಸ್ಪರ್ಶಿಸು, ಸೋಕು, ಬೀಸು

ತೀರ್ಥಕ್ಷೇತ್ರ - ಪುಣ್ಯಕ್ಷೇತ್ರ

ತುಕಡಿ - ಸೈನ್ಯದ ಒಂದು ಭಾಗ

ತುಮುಲ - ಗೊಂದಲ, ಗಲಿಬಿಲಿ

ತೊಳಲು - ಕಷ್ಟಪಡು

## ದ

ದಟ್ಟೈಸು - ಆವರಿಸು, ವ್ಯಾಪಿಸು

ದಫನ - ಹೂಳು

ದಯಪಾಲಿಸು - ಕೃಪೆಮಾಡು, ಕರುಣೆಯಿಂದ ನೀಡು

ದಕ್ಷತೆ - ಪ್ರಾಮಾಣಿಕತೆ

ದಮ್ಮು - ಮೇಲುಸಿರು, ಏದುಸಿರು

ದಸ್ತಗಿರಿ - ಬಂಧನ

ದಿರಸು - ಉಡುಪು

ದುರ್ಜನ - ಕೆಟ್ಟವ್ಯಕ್ತಿ

ದುಸ್ತರ - ಕಷ್ಟಸಾಧ್ಯ

ದಂಡಯಾತ್ರೆ - ಸೈನ್ಯ ಸಮೇತವಾದ ಪ್ರಯಾಣ

ಧವಳಜಟೆ - ಬಿಳಿಯಾದ ಜಡೆ

ಧೀವಂತ - ಜ್ಞಾಣ, ಜ್ಞಾನಿ

ದ್ವಂದ್ವ - ಸಂಶಯ, ಎರಡು

## ನ

ನಲ್ಮೆ - ಪ್ರೀತಿ

ನಾಕ - ಸ್ವರ್ಗ

ನಿಚ್ಚಳ - ಸ್ಥಿರವಾದ

ನಿಟ್ಟುಸಿರು - ದೀರ್ಘಶ್ವಾಸ

ನಿದರ್ಶನ - ಉದಾಹರಣೆ, ಸಾಕ್ಷಿ

ನಿಯೋಗಿ - ಊಳಿಗದವ, ಸೇವಕ, ಉನ್ನತಾಧಿಕಾರಿ

ನಿಲುವಂಗಿ - ನೀಳವಾದ ಅಂಗಿ

ನಿಶಾನಿ - ಬಾವುಟ, ಗುರುತು, ಗುರಿ

ನಿಶಿತ - ಹರಿತ, ಚುರುಕು, ತೀಕ್ಷ್ಣ

## ಡ

ಡೇರೆ - ಬಟ್ಟೆಯಿಂದ ಮಾಡಿದ ಮನೆ

## ಪ

ಪಥಸಂಚಲನ - ಸೈನ್ಯ ಸಾಲುಗಳ ಶಿಸ್ತಿನಿಂದ ನಡೆದು ಹೊಗುತ್ತಿರುವುದು.

ಪಥ್ಯ - ಹಿತವಾದುದು

ಪರಮಧಾಮ - ಶ್ರೇಷ್ಠವಾದ ಮನೆ

ಪರಿಜ್ಞಾನ - ಸಂಪೂರ್ಣವಾದ ಜ್ಞಾನ

ಪಲ್ಲಟ - ಪರಿವರ್ತನೆ, ಬದಲಾವಣೆ

ಪಲಾಯನ ಸೂತ್ರ- ತಪ್ಪಿಸಿಕೊಳ್ಳುವಿಕೆ

ಪಾರಂಗತ - ನಿಪುಣ

ಪಾರತಂತ್ರ್ಯ - ದಾಸ್ಯ, ಅಧೀನತೆ

ಪೂರ್ಣಾಹುತಿ - ಯಜ್ಞದ ಕೊನೆಯಲ್ಲಿ ಕೊಡುವ ಹವಿಸ್ಸು, ಯಜ್ಞವನ್ನು ಪೂರ್ಣಗೊಳಿಸುವ ಆಹುತಿ.

ಪುಕ್ಕಟೆ - ಸುಮ್ಮನೆ, ಉಚಿತ

ಪುಗಲು - ಹೊಗು, ಪ್ರವೇಶಿಸು

ಪೇಟ - ರುಮಾಲು, ಮುಂಡಾಸು

ಪೋಷಣೆ - ಸಾಕುವಿಕೆ, ಸಲಹುವಿಕೆ.

ಫೌಜ್ - ಸೇನೆ

ಪ್ರಫುಲ್ಲ - ಅರಳಿದ, ವಿಕಸಿತವಾದ

ಪ್ರಮೇಯ - ಸಂದರ್ಭ

## ಬ

ಬಟಾಲಿಯನ್ - ಸೇನಾವಿಭಾಗ

ಬರಿಂಕ - ಮೊಲದ ಜಾತಿಯ ಒಂದು ಪ್ರಾಣಿ

ಬಟ್ಟೆ - ದಾರಿ, ಮಾರ್ಗ

ಬಳಕು - ಬಾಗು

ಬಾನುಲಿ - ಆಕಾಶವಾಣಿ

ಬತ್ತರ - ವಿಸ್ತಾರ, ಪ್ರಸರ

ಬೇಹುಗಾರ - ಗೂಢಚಾರ

ಭೇದಿಸು - ಒಡೆಯು

ಬೆಪ್ಪು - ದಡ್ಡತನ

ಬೆಂಗಾವಲು - ಅಂಗರಕ್ಷಣೆ, ಸಂರಕ್ಷಣೆ

ಬೊಂತೆ - ಗುಚ್ಛ, ಕಟ್ಟು

ಬೋನ - ಅನ್ನ, ಆಹಾರ

## ಮ

ಮನಕಲಕು - ಮನಸ್ಸಿಗೆ ತಾಗು

ಮಸುಳು - ಇಲ್ಲವಾಗು, ಮಬ್ಬಾಗು

ಮಂಜೊಂಟ್ಟೆ - ಕಂಬಳದಲ್ಲಿ ಕೋಣಗಳು ಓಡಿ ತಲುಪಬೇಕಾದ ಎತ್ತರವಾದ ಸ್ಥಳ

ಮಾರ್ದನಿ - ಪ್ರತಿಧ್ವನಿ

ಮಾರಣಯಜ್ಞ - ಶತ್ರುನಾಶಕ್ಕಾಗಿ ಮಾಡುವ ದೊಡ್ಡ ಹೋಮ

ಮುಕ್ಕು - ಗಬಗಬನೆ ತಿನ್ನು, ಅವಸರವಸರವಾಗಿ ತಿನ್ನು.

ಮುತ್ತಾತ - ಅಜ್ಜನ ತಂದೆ.

ಮುಜುಗರ - ಸಂಕೋಚ, ದಾಕ್ಷಿಣ್ಯ

ಮೂಕವಿಸ್ಮಿತ - ಆಶ್ಚರ್ಯದಿಂದ ಮಾತು ಬಾರದ

ಮೂರ್ತರೂಪ - ಪ್ರತ್ಯಕ್ಷರೂಪ

ಮೋಜು - ಸಂತೋಷ, ಖುಷಿ

ಮೌಢ್ಯ - ದಡ್ಡತನ, ಮೂಢತನ

## ಯ

ಯಾತನೆ - ನೋವು

ಯುದ್ಧೋರ್ಮಿ - ಯುದ್ಧವೆಂಬ ಅಲೆ

## ರ

ರೀತಿರಿವಾಜು - ಪದ್ಧತಿ, ಕ್ರಮ

ರೂಢಿ - ಅಭ್ಯಾಸ

ರೆಜಿಮೆಂಟ್ - ಸೇನೆಯ ಒಂದು ಭಾಗ

## ಲ

ಲಜ್ಜೆ - ನಾಚಿಕೆ

ಲಾಕೆಟ್ - ಕುತ್ತಿಗೆಯಲ್ಲಿ ಧರಿಸುವ ಪದಕ

## ವ

ವದಂತಿ - ಸುದ್ದಿ, ಗಾಳಿಸುದ್ದಿ, ಸಮಾಚಾರ

ವರ್ಷಕಾಲ - ಮಳೆಗಾಲ

ವಿಗ್ರಹ - ಮೂರ್ತಿ, ಪ್ರತಿಮೆ

ವಿತ್ತ - ಸಂಪತ್ತು

ವಿರಸ - ವಿರೋಧ, ವೈಮನಸ್ಸು

ವಿವಂಚನೆ - ಚಿಂತೆ, ಆಲೋಚನೆ

ವೀರಾಗ್ರಣಿ - ವೀರರಲ್ಲಿ ಶ್ರೇಷ್ಠ

## ಶ

ಶಿಕಾರಿ - ಬೇಟೆ

ಶಿಥಿಲ - ದುರ್ಬಲ, ಹಾಳಾದ, ಬಲಹೀನವಾದ

ಶೈತ್ಯೋಪಾಚಾರ - ತಂಪುಪಾನೀಯಗಳಿಂದ ಮಾಡುವ ಉಪಚಾರ

ಶ್ವಾನ - ನಾಯಿ

## ಸ

ಸಮ್ಮಿಲಿತ - ಒಟ್ಟು ಸೇರಿದ

ಸಮೆ - ರಚಿಸು, ನಿರ್ಮಿಸು

ಸರಿಗೆ - ತೋಳಲ್ಲಿ ಬಳಸುವ ಆಭರಣ

ಸ್ವರ್ಗೀಯ ಶಕ್ತಿ - ಅಪಾರವಾದ ಶಕ್ತಿ

ಸಾರ್ಜೆಂಟ್ - ಸೈನ್ಯದ ಒಂದು ಹುದ್ದೆ

ಸಾರ - ಸತ್ವ

ಸಾರು - ಸಾಗು, ಸರಿಯು

ಸುಧೆ - ಅಮೃತ

ಸೇಲೆ - ಬಟ್ಟೆ

ಸೊಗ - ಸುಖ

ಸೊಲ್ಲು - ಮಾತು

ಸಂಕೇತ - ಗುರುತು, ಚಿಹ್ನೆ

ಸಂಪೋಷಣೆ - ಬೆಳೆಸು, ಪೋಷಿಸು

ಸಂವಹನ - ವಿನಿಮಯ

ಸಾಂತ್ವನ - ಸಮಾದಾನ, ಉಪಶಮನ

## ಹ

ಹತ್ತಿಕ್ಕು - ಹತೋಟಿಯಲ್ಲಿಡು, ಅಧೀನದಲ್ಲಿಡು

ಹಗೆಯಿಕ್ಕಿದಾಗ - ಕಾಣಿಸಿಕೊಂಡಾಗ

ಹಾತೊರೆಯು - ಆತುರಪಡು, ಹಂಬಲಿಸು

ಹೆತ್ತಬ್ಬೆ - ಜನ್ಮ ನೀಡಿದ ತಾಯಿ

ಹೇಯಕೃತ್ಯ - ಕೆಟ್ಟಕಾರ್ಯ

ಹೊಂತಕಾರಿ - ಬಲಶಾಲಿ, ಪರಾಕ್ರಮಿ

ಹಂದರ - ಚಪ್ಪರ